

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜುಲೈ 17 ಭಾನುವಾರ 2022

ಸಂಪುಟ: 43 | ಸಂಚಿಕೆ: 92 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4





ಜು.28ಕ್ಕೆ ಮುಖ್ಯಮಂತ್ರಿಯಾಗಿ ಒಂದು ವರ್ಷ ಪೂರೈಕೆ
ಸಿದ್ದರಾಮೋತ್ಸವಕ್ಕೂ ಮುನ್ನವೇ ಬೊಮ್ಮಾಯಿ ಉತ್ಸವ!

● ಸಾಧನೆ, ಸರ್ಕಾರದ ಯೋಜನೆಗಳ ಜನರಿಗೆ ತಲುಪಿಸಲು ದೊಡ್ಡಬಳ್ಳಾಪುರದಲ್ಲಿ 'ಸಾರ್ಥಕತೆ ಉತ್ಸವ' ● ವರಿಷ್ಠ ನಾಯಕರೊಬ್ಬರು ಭಾಗಿ

ಬೆಂಗಳೂರು, ಜು.16(ಕೆಎಂಶಿ)– ವಿಧಾನ ಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಉತ್ಸವಕ್ಕೂ ಮುನ್ನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉತ್ಸವ ನಡೆಯಲಿದೆ. ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ಇದೇ 28ಕ್ಕೆ ಒಂದು ವರ್ಷವನ್ನು ಬಸವರಾಜ ಬೊಮ್ಮಾಯಿ ಪೂರ್ಣಗೊಳಿಸುತ್ತಿದ್ದಾರೆ.

ಇದರ ಅಂಗವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಾಧನೆ ಬಿಂಬಿಸುವ ಸಲುವಾಗಿ ಜು.28ರಂದು ದೊಡ್ಡಬಳ್ಳಾಪುರದಲ್ಲಿ ಒಂದು ವರ್ಷದ ಸಾರ್ಥಕತೆಯ ಉತ್ಸವ ನಡೆಯಲಿದೆ. ಈ ಸಮಾವೇಶ ನಡೆಸುವಂತೆ ಬಿಜೆಪಿ ನಾಯಕರು ಸಿಎಂಗೆ ಸೂಚಿಸಿದ್ದಾರೆ. ಕಳೆದ ಎರಡು ದಿನ ಗಳಿಂದ ನಡೆದ ಪಕ್ಷದ ಚಿಂತಕರ ಸಭೆಯಲ್ಲಿ ಈ ತೀರ್ಮಾನ ಕೈಗೊಂಡಿದ್ದು, ಅವರ ಆಣತಿಯಂತೆ ಸಮಾವೇಶ ನಡೆಯುತ್ತಿದೆ. ಸಮಾವೇಶದ ಪೂರ್ಣ ಹೊಣೆಯನ್ನು ಆರೋಗ್ಯ ಸಚಿವ ಡಾ. ಸುಧಾಕರ್ ಅವರಿಗೆ ವಹಿಸಿದ್ದು, ಕಳೆದ ಒಂದು ವರ್ಷದ ಸರ್ಕಾರದ ಸಾಧನೆ ಜತೆಗೆ ಭ್ರಷ್ಟಾಚಾರ ರಹಿತ ಆಡಳಿತ ನೀಡಿದ್ದೇವೆ ಎಂದು ಬಿಂಬಿಸುವುದೇ ಈ ಉತ್ಸವದ ಮೂಲ ಉದ್ದೇಶ. ಕಾಂಗ್ರೆಸ್ ನಾಯಕರು ನಡೆಸುತ್ತಿರುವ ಉತ್ಸವಕ್ಕಿಂತ ಈ ಸಮಾವೇಶ ಭಿನ್ನವಾಗಿರಬೇಕು. ಅಲ್ಲದೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಾಧನೆಗಳನ್ನು ಬಿಂಬಿಸುವಂತಿರಬೇಕೆಂದು ರಾಜ್ಯ ಬಿಜೆಪಿ ಹಾಗೂ ಆರ್‌ಎಸ್‌ಎಸ್ ನಾಯಕರು ಸೂಚಿಸಿದ್ದಾರೆ. ಈ ಸಮಾವೇಶ ಮುಂಬರುವ ವಿಧಾನಸಭಾ ಚುನಾವಣೆಗೆ ಮೈಲಿಗಲ್ಲು ಆಗಬೇಕು. ಆ ಭಾಗಕ್ಕೆ ಸೇರಿದ ಮೂರು ನಾಲ್ಕು ಜಿಲ್ಲೆಗಳ ಕಾರ್ಯಕರ್ತರಲ್ಲದೆ, ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕರನ್ನು ಸೇರಿಸುವಂತೆ ಸೂಚಿಸಲಾಗಿದೆ. ಸಮಾವೇಶದಲ್ಲಿ ದೆಹಲಿಯ ಒಬ್ಬ ನಾಯಕರು ಭಾಗವಹಿಸುವಂತೆ ಹೇಳುತ್ತೇವೆ. ನೀವು ಸಮಾವೇಶವನ್ನು ಯಶಸ್ವಿಗೊಳಿಸಿ ಎಂದು ಕಿವಿಮಾತು ಹೇಳಿದ್ದಾರೆ. ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿದ ಬೊಮ್ಮಾಯಿ ಅವರು, ದೊಡ್ಡಬಳ್ಳಾಪುರದಲ್ಲಿ ಇದೇ 28ರಂದು ನಡೆಯುತ್ತಿರುವ ಸಮಾವೇಶ, ಸರ್ಕಾರದ ಕಾರ್ಯಕ್ರಮಗಳನ್ನು ಬಿಂಬಿಸುವ ಸಮಾವೇಶವಾಗಿರುತ್ತದೆ ಎಂದರು.



ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬೆಂಕಿ ಅವಘಡ

ಬೆಂಗಳೂರು: ವಿಧಾನಸೌಧದ ಮೂರನೇ ಮಹಡಿಯ ಸಮ್ಮೇಳನ ಸಭಾಂಗಣದಲ್ಲಿನ ಎಸಿಗೆ ಶನಿವಾರ ಬೆಂಕಿ ಹೊತ್ತಿಕೊಂಡು ಕೆಲ ಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಕೊಠಡಿ ಸಂಖ್ಯೆ 334ರಲ್ಲಿ ರಾತ್ರಿ 6.40ರ ಸುಮಾರಿನಲ್ಲಿ ಘಟನೆ ನಡೆದಿದ್ದು, ಕೂಡಲೇ ಅಗ್ನಿಶಾಮಕ ಸಿಬ್ಬಂದಿಗೆ ತಿಳಿಸಲಾಯಿತು. ವಿಧಾನಸೌಧ ಆವರಣದಲ್ಲಿದ್ದ ಸಿಬ್ಬಂದಿಯೇ ಬೆಂಕಿ ನಂದಿಸಿದ್ದಾರೆ. ಯಾವುದೇ ಹಾನಿಯಾಗಿಲ್ಲ. ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಹೀಗಾಗಿರಬಹುದು ಎಂದು ಶಂಕಿಸಲಾಗಿದೆ.

ಕೊರೊನಾ ಲಸಿಕೆ ಅಮೃತ ಮಹೋತ್ಸವ ಅಭಿಯಾನದ ಅಂಗವಾಗಿ
18 ವರ್ಷ ಮೇಲ್ಪಟ್ಟವರಿಗೆ 75 ದಿನ ಮುನ್ನೆಚ್ಚರಿಕಾ
ಉಚಿತ ಡೋಸ್

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟ ● 7500 ಕೇಂದ್ರಗಳಲ್ಲಿ ಲಸಿಕಾ ವ್ಯವಸ್ಥೆ

ಬೆಂಗಳೂರು, ಜು.16(ಕೆಎಂಶಿ)–ಕೊರೊನಾ ಲಸಿಕೆ ಅಮೃತ ಮಹೋತ್ಸವ ಅಭಿಯಾನದ ಅಂಗವಾಗಿ ಮುಂದಿನ 75 ದಿನಗಳವರೆಗೆ 18 ವರ್ಷ ಮೇಲ್ಪಟ್ಟ ನಾಗರಿಕರು ಉಚಿತವಾಗಿ ಮುನ್ನೆಚ್ಚರಿಕಾ ಡೋಸ್ ಕೋವಿಡ್ ಲಸಿಕೆ ಪಡೆದುಕೊಳ್ಳಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕರೆ ನೀಡಿದರು.

ಆರೋಗ್ಯ ಇಲಾಖೆ ಆಯೋಜಿಸಿದ್ದ 18 ವರ್ಷ ಮೇಲ್ಪಟ್ಟ ನಾಗರಿಕರಿಗೆ ಮುನ್ನೆಚ್ಚರಿಕಾ ಡೋಸ್ ನೀಡುವ ಕೋವಿಡ್ ಲಸಿಕಾಕರಣ ಅಮೃತ ಅಭಿಯಾನ ಕಾರ್ಯಕ್ರಮಕ್ಕೆ ಇಂದು ಚಾಲನೆ ನೀಡಿ, ಮಾತನಾಡಿದರು. ಕರ್ನಾಟಕದಲ್ಲಿ 75 ದಿನಗಳ ಲಸಿಕೆ ಅಭಿಯಾನದಲ್ಲಿ 7500 ಕೇಂದ್ರಗಳಲ್ಲಿ ಲಸಿಕೆಗಳನ್ನು ನಿರಂತರವಾಗಿ ನೀಡಲಾಗುತ್ತಿದ್ದು, ಆರೋಗ್ಯ ಕಾರ್ಯಕರ್ತರು ಅಭಿಯಾನ ರೀತಿಯಲ್ಲಿ ಕೆಲಸ



ಮಾಡಲು ಸರ್ಕಾರ ಎಲ್ಲ ಸಹಕಾರ ನೀಡಲಿದೆ. ಆರೋಗ್ಯವಂತ ಸಮಾಜ, ಆರ್ಥಿಕವಾಗಿ ಸಬಲವಾದ ಸಮಾಜವನ್ನು ನಿರ್ಮಿಸುತ್ತದೆ. ಆರೋಗ್ಯ, ಶಿಕ್ಷಣ ಸರಿಯಾಗಿದ್ದರೆ ಮಾತ್ರ ರಾಜ್ಯ ಪ್ರಗತಿ ಹೊಂದಲು ಸಾಧ್ಯ. ಈ ದಿಸೆಯಲ್ಲಿ ಲಸಿಕೆ ಅಭಿಯಾನ ಮಹತ್ವದ ಹೆಜ್ಜೆಯಾಗಿದೆ ಎಂದರು. ಕೋವಿಡ್ ಬಂದವರಲ್ಲಿ ಕೋವಿಡ್ ನಂತರ ಪರಿಣಾಮಗಳು ಇದ್ದೇ ಇರುತ್ತದೆ. ಈ ಪರಿಣಾಮಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸುವ ಮೂಲಕ ಅದನ್ನು ▶ 8ನೇ ಪುಟಕ್ಕೆ

ಮೈಸೂರಲ್ಲೂ ಬೂಸ್ಟರ್ ಡೋಸ್
ಮೊದಲ ದಿನ 28,000 ಮಂದಿಗೆ ಲಸಿಕೆ



ಮೈಸೂರು, ಜು.16(ಆರ್‌ಕೆ)–ರಾಜ್ಯದಾದ್ಯಂತ 18 ವರ್ಷ ಮೇಲ್ಪಟ್ಟವರಿಗೆ ಬೂಸ್ಟರ್ ಡೋಸ್ ಲಸಿಕೆ ನೀಡುವ ಅಭಿಯಾನ ಇಂದಿನಿಂದ ಆರಂಭವಾಗಿದ್ದು, ಮೊದಲ ದಿನ ಮೈಸೂರು ಜಿಲ್ಲೆಯಲ್ಲಿ ಒಟ್ಟು 28,000 ಮಂದಿಗೆ ಲಸಿಕೆ ನೀಡಲಾಯಿತು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಅಭಿಯಾನಕ್ಕೆ ಚಾಲನೆ ದೊರೆಯುತ್ತಿದ್ದಂತೆಯೇ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಜಿಲ್ಲಾ ▶ 8ನೇ ಪುಟಕ್ಕೆ

ಸರ್ಕಾರಿ ಕಚೇರಿಗಳಲ್ಲಿ ಫೋಟೋ, ವಿಡಿಯೋ ನಿಷೇಧಿಸಿದ್ದ ಆದೇಶ ರಾತ್ರೋರಾತ್ರಿ ಹಿಂದಕ್ಕೆ

ಬೆಂಗಳೂರು, ಜು.16(ಕೆಎಂಶಿ)– ರಾಜ್ಯ ಸರ್ಕಾರದ ಇಲಾಖೆಗಳ ಕಚೇರಿಯ ವೇಳೆಯಲ್ಲಿ ಖಾಸಗಿ ವ್ಯಕ್ತಿಗಳು ಫೋಟೋ, ವೀಡಿಯೋ ಮಾಡಬಾರದು ಎಂಬ ಆದೇಶವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸೂಚನೆ ಮೇರೆಗೆ ವಾಪಸ್ ಪಡೆಯಲಾಗಿದೆ.

ಸರ್ಕಾರಿ ಕಚೇರಿ ವೇಳೆಯಲ್ಲಿ ಖಾಸಗಿ ವ್ಯಕ್ತಿಗಳು ಫೋಟೋ, ವಿಡಿಯೋ ಚಿತ್ರೀಕರಣ ಮಾಡದಂತೆ ನಿಷೇಧಿಸಿ ಶುಕ್ರವಾರ ಆದೇಶ ಹೊರಡಿಸಲಾಗಿತ್ತು. ಈ ಆದೇಶದ ವಿರುದ್ಧ ಸಾರ್ವಜನಿಕರಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ತಡರಾತ್ರಿಯೇ ಈ ಆದೇಶವನ್ನು ಹಿಂದಕ್ಕೆ ಪಡೆಯಲಾಗಿದೆ.

ಪಶ್ಚಿಮ ಬಂಗಾಳ ರಾಜ್ಯಪಾಲ ಜಗದೀಪ್ ಧನ್ಕರ್ ಎನ್‌ಡಿಎ ಉಪರಾಷ್ಟ್ರಪತಿ ಅಭ್ಯರ್ಥಿ

ನವದೆಹಲಿ: ನೂತನ ಉಪರಾಷ್ಟ್ರಪತಿ ಆಯ್ಕೆಗೆ ಆಗಸ್ಟ್ 6ರಂದು ಚುನಾವಣೆ ನಡೆಯಲಿದೆ. ಎನ್‌ಡಿಎ ಅಭ್ಯರ್ಥಿಯಾಗಿ ಪಶ್ಚಿಮ ಬಂಗಾಳ ರಾಜ್ಯಪಾಲ ಜಗದೀಪ್ ಧನ್ಕರ್ ಕಣಕ್ಕಿಳಿಯಲಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅಧಿಕೃತವಾಗಿ ಘೋಷಿಸಿದ್ದಾರೆ.

ದೆಹಲಿ ಪ್ರಧಾನಿ ಕಚೇರಿಯಲ್ಲಿ ನಡೆದ ಭಾರತೀಯ ಜನತಾ ಪಾರ್ಟಿ ಸಂಸದೀಯ ಮಂಡಳಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಇದರಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ಸಚಿವ ನಿತಿನ್ ಗಡ್ಕರಿ ಮತ್ತು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಸೇರಿದಂತೆ ಅನೇಕ ನಾಯಕರು ಉಪಸ್ಥಿತರಿದ್ದರು.



ಪ್ರಧಾನಿ ಭೇಟಿಯಾಗಿದ್ದ ಧನ್ಕರ್: ಎನ್‌ಡಿಎ ಅಭ್ಯರ್ಥಿಯಾಗಿ ಹೆಸರು ಘೋಷಣೆಯಾಗುವುದಕ್ಕೂ ಕೆಲ ಗಂಟೆಗಳ ಮುಂಚೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ರಾಜ್ಯಪಾಲ ಧನ್ಕರ್ ಭೇಟಿ ಮಾಡಿದ್ದರು. ಎಲ್ಲಾ ಪರಿಗಣನೆಗಳು ಮತ್ತು ಸಮಾಲೋಚನೆ ನಂತರ ಕಿಸಾನ್ ಪುತ್ರ(ರೈತರ ಮಗ) ಜಗದೀಪ್ ಧನ್ಕರ್ ಅವರನ್ನು ▶ 8ನೇ ಪುಟಕ್ಕೆ

ದಸರಾ ಗಜಪಡೆಯ 20 ಸದಸ್ಯರ ಪಟ್ಟಿ ರೆಡಿ

ಉನ್ನತ ಸಮಿತಿ ಸಭೆಯಲ್ಲಿ ಅಂತಿಮ ಪಟ್ಟಿ ನಿರ್ಧಾರ

ಮೈಸೂರು, ಜು.16(ಎಂಟಿವೈ)– ನಾಡಹಬ್ಬ ದಸರಾ ವಿಶೇಷ ಅತಿಥಿಗಳಾದ ಗಜಪಡೆಗೆ ಸದಸ್ಯರ ಆಯ್ಕೆಗೆ ಸಂದರ್ಶನ ಪೂರ್ಣಗೊಂಡಿದೆ. ಅರಣ್ಯಾಧಿಕಾರಿಗಳ ತಂಡ ನಾಲ್ಕು ಕ್ಯಾಂಪ್‌ಗಳ 30 ಆನೆಗಳ ಸಂದರ್ಶಿಸಿ, 20 ಆನೆಗಳ ಪಟ್ಟಿ ಸಿದ್ಧಪಡಿಸಿದೆ.

ಜಂಬೂಸವಾರಿಯಲ್ಲಿ ಪಾಲ್ಗೊಳ್ಳುವ ಪ್ರಮುಖ ಆನೆಗಳ ಶಿಬಿರಗಳಾದ ಮತ್ತಿಗೂಡು, ಆನೆಕಾಡು, ದುಬಾರೆ ಹಾಗೂ ಬಂಡೀಪುರ ಅರಣ್ಯದ ರಾಮಾಪುರದಲ್ಲಿ ಸುಮಾರು 30ಕ್ಕೂ ಹೆಚ್ಚು ಆನೆಗಳನ್ನು ಡಿಸಿಎಫ್ ಡಾ.ವಿ.ಕರಿಕಾಳನ್ ನೇತೃತ್ವದ ತಂಡ ಕಳೆದ ಎರಡು ದಿನಗಳಿಂದ ಸಂದರ್ಶಿಸಿತ್ತು. ಅಂತಿಮವಾಗಿ 7 ಹೆಣ್ಣಾನೆ ಸೇರಿದಂತೆ 20 ಆನೆಗಳ ಪಟ್ಟಿ ಸಿದ್ಧಪಡಿಸಿದ್ದು,



ಈ ಪಟ್ಟಿಯನ್ನು ನಾಳೆ ಬೆಂಗಳೂರಿಗೆ ರವಾನಿಸಲಾಗುತ್ತಿದೆ. ಜು.19ರಂದು ದಸರಾ ಉನ್ನತ ಸಮಿತಿ ಸಭೆ ನಡೆಯಲಿದ್ದು, ಅದರಲ್ಲಿ 14 ಅಥವಾ 15 ಆನೆಗಳ ಒಳಗೊಂಡ ಪಟ್ಟಿಯನ್ನು ಅಂತಿಮಗೊಳಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ▶ 8ನೇ ಪುಟಕ್ಕೆ



ಉದ್ಘಾಟನೆಗೆ ಮುನ್ನವೇ ಮೈಸೂರಿನ 'ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್'ಗೆ ಭಾರೀ ಡಿಮ್ಯಾಂಡ್

ಮೈಸೂರು, ಜು.16–ಮೈಸೂರಿನ ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ 'ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್'ಗೆ ಭಾರೀ ಬೇಡಿಕೆ ಬಂದಿದ್ದು, ಈಗಾಗಲೇ ಇಲ್ಲಿ ಕಾರ್ಯಾರಂಭ ಮಾಡಲು ಸುಮಾರು 15 ಕಂಪನಿಗಳು ಮುಂದೆ ಬಂದಿವೆ ಎಂದು ಹೇಳಲಾಗಿದೆ.

ಈವರೆಗೆ ಮಂದಗತಿಯಿಂದ ಸಾಗುತ್ತಿದ್ದ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಕಟ್ಟಡ ಕಾಮಗಾರಿ ಇದೀಗ ಚುರುಕುಗೊಂಡಿದ್ದು, ದಸರಾ ವೇಳೆಗೆ ಲೋಕಾರ್ಪಣೆಗೊಳ್ಳಲಿದೆ ಎಂದು ಎಸ್‌ಟಿಪಿಐ (ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ) ಪ್ರಾದೇಶಿಕ ಅಧಿಕಾರಿ ತಿಳಿಸಿದ್ದಾರೆ. ಮೈಸೂರಿನಲ್ಲಿ 24 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಈ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆವರಣವು 2.36 ಎಕರೆ ವಿಸ್ತಾರವಾಗಿದ್ದು, ಕಟ್ಟಡವು 40 ಸಾವಿರ ಚದರ ಅಡಿ ವಿಸ್ತೀರ್ಣ ಹೊಂದಿದೆ. ಈ ಪಾರ್ಕ್‌ನಲ್ಲಿ ನೆಲಮಹಡಿ ಸೇರಿದಂತೆ ಮೂರು ಅಂತಸ್ತಿನ ಕಟ್ಟಡ, 200 ವರ್ಕ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಪ್ರತ್ಯೇಕವಾಗಿ ಸಭಾಂಗಣ, ಮೀಟಿಂಗ್ ಹಾಲ್, ಕಾನ್ಫರೆನ್ಸ್ ಹಾಲ್, ಚರ್ಚಾ ಕೊಠಡಿ ಸೇರಿದಂತೆ ಎಲ್ಲಾ ಅತ್ಯಾಧುನಿಕ ಸೌಲಭ್ಯಗಳನ್ನೂ ಕಲ್ಪಿಸುವ ಮೂಲಕ ಸಾಫ್ಟ್‌ವೇರ್ ಉದ್ದಿಮೆದಾರರಿಗೆ ಅನುಕೂಲ ಕಲ್ಪಿಸಲಾಗುತ್ತಿದೆ. ರಾಜಧಾನಿ ಬೆಂಗಳೂರಿನ ▶ 8ನೇ ಪುಟಕ್ಕೆ



ಕಾರಾಗೃಹಗಳಲ್ಲಿ ದುಡಿಯುವ ಕೈದಿಗಳಿಗೆ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ಕೂಲಿ

ಬೆಂಗಳೂರು, ಜು.16(ಕೆಎಂಶಿ)–ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ದುಡಿಯುತ್ತಿರುವ ಕೈದಿಗಳಿಗೆ, ರಾಜ್ಯ ಸರಕಾರ ನಿಗದಿ ಪಡಿಸಿರುವ, ಕನಿಷ್ಠ ಕೂಲಿ ದರವನ್ನು ನೀಡಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.





ಸಚಿವರು, ಇತ್ತೀಚೆಗೆ ರಚನೆಯಾದ ಕಾರಾಗೃಹ ಅಭಿವೃದ್ಧಿ ಮಂಡಳಿಯ ಪ್ರಥಮ ಸಭೆಯ ನಂತರ, ಮಾಧ್ಯಮಗಳೊಂದಿಗೆ ಮಾತನಾಡಿ, ಈ ಬಗ್ಗೆ ರಾಜ್ಯ ಹಣಕಾಸು ಇಲಾಖೆಗೆ ಪ್ರಸ್ತಾವನೆ ನೀಡಿದ್ದು, ಕೈದಿಗಳು, ತಾವು ಮಾಡಿದ ದುಡಿಮೆಗೆ, ರಾಜ್ಯ ಸರಕಾರ ಇತ್ತೀಚೆಗೆ ಪರಾಮರ್ಶಿಸಿ, ನಿಗದಿಪಡಿಸಿದ ಕನಿಷ್ಠ ಕೂಲಿ ದರವನ್ನು ನೀಡಲು ನಿರ್ಧರಿಸಲಾಗಿದೆ ಎಂದರು. ರಾಜ್ಯ ಹಣಕಾಸು ಇಲಾಖೆ, ಇದಕ್ಕಾಗಿ ಏಳು ಕೋಟಿ ರೂಪಾಯಿಗಳ ವಿಶೇಷ ಅನುದಾನ ಬಿಡುಗಡೆ ಮಾಡಿದೆ ಎಂದು ಸಚಿವರು ತಿಳಿಸಿದರು. ಕಾರಾಗೃಹ ಅಭಿವೃದ್ಧಿ ಮಂಡಳಿಯ ಪ್ರಥಮ ಸಭೆ ನಡೆದ ಬಗ್ಗೆ ಪ್ರಸ್ತಾಪಿಸಿದ ಸಚಿವರು, ರಾಜ್ಯದ ವಿವಿಧ ಇಲಾಖೆಗಳು, ತಮ್ಮ ವ್ಯಾಪ್ತಿಯಲ್ಲಿ ಬರುವಂತಹ, ಆರ್ಥಿಕ ಚಟುವಟಿಕೆಗಳಲ್ಲಿ ಕಾರಾಗೃಹ ▶ 8ನೇ ಪುಟಕ್ಕೆ





ಕೊಡಗಲ್ಲಿ ಮಹಾಮಳೆಗೆ ಮೊದಲ ಬಲಿ

ಗೋಡೆ ಕುಸಿದು ಗಾಯಗೊಂಡಿದ್ದ ವೃದ್ಧೆ ಸಾವು

ಮಡಿಕೇರಿ,ಜು.16–ಕೊಡಗು ಜಿಲ್ಲೆಯಲ್ಲಿ ಮಳೆಯ ಆರ್ಭಟ ಸ್ವಲ್ಪ ಕಡಿಮೆಯಾಗಿದ್ದರೂ, ಇದರಿಂದ ಭಾರೀ ಹಾನಿಯಾಗಿದೆ. ಜೊತೆಗೆ ಒಂದು ಜೀವ ಬಲಿಯಾಗಿದೆ.

ಸ್ನಾನದ ಮನೆ ಗೋಡೆ ಕುಸಿದು ಬಿದ್ದು ಗಾಯಗೊಂಡಿದ್ದ ಸೋಮವಾರಪೇಟೆ ತಾಲೂಕಿನ ಶನಿವಾರಸಂತೆ ವ್ಯಾಪ್ತಿಯ ಸುಳುಗಳಲೆ ಗ್ರಾಮದ ವೃದ್ಧೆ ವಸಂತಮ್ಮ (70) ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಶಾಂತಳ್ಳಿ ಹೋಬಳಿ ದುಂಡಳ್ಳಿ ಗ್ರಾಪಂ ವ್ಯಾಪ್ತಿಯ ಸುಳುಗಳಲೆ ಗ್ರಾಮದಲ್ಲಿ ಜು.5ರಂದು ಸುರಿದ ಭಾರೀ ಮಳೆಯಿಂದಾಗಿ ವಸಂತಮ್ಮ ಅವರ ಸ್ನಾನಗೃಹದ ಗೋಡೆ ಕುಸಿದು ಬಿದ್ದಿತ್ತು. ವಸಂತಮ್ಮ ಅವರ ತಲೆ, ಎದೆ, ಕಣ್ಣಿಗೆ ಗಂಭೀರ ಗಾಯಗಳಾಗಿತ್ತು. ತಕ್ಷಣ ಅವರನ್ನು ಶನಿವಾರಸಂತೆ ಸರಕಾರಿ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಹಾಸನ ಆಸ್ಪತ್ರೆಗೆ ದಾಖಲಿಸಲಾಗಿತು. 10 ದಿನಗಳ ಕಾಲ ಸಾವು–ಬದುಕಿನ ನಡುವೆ ಹೋರಾಟ ನಡೆಸಿದ ವಸಂತಮ್ಮ, ಕೊನೆಗೂ



ವಸಂತಮ್ಮ



ಹಾನಿಗೀಡಾಗಿರುವ ಮನೆ

ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಮಡಿಕೇರಿ ತಾಲೂಕಿನ ಕಾಟಕೇರಿ ಗ್ರಾಮದಲ್ಲಿ ಬೋಪಯ್ಯ ಎಂಬುವರ ಮನೆ ಸಮೀಪದಲ್ಲೇ ಅಂದಾಜು ಅರ್ಧ ಎಕರೆ ಕಾಫಿ ತೋಟ ಕಂದಕದಲ್ಲಿ 10 ಅಡಿಗಳ ಆಳ ಕುಸಿದಿದೆ. ಈಗ ಬೋಪಯ್ಯ ಅವರ ಮನೆ ಅಪಾಯ ಸ್ಥಿತಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಕುಟುಂಬವನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ಮಡಿಕೇರಿ ಹೋಬಳಿಯ 2ನೇ ಮೊಣ್ಣಂಗೇರಿ ಗ್ರಾಮದಲ್ಲಿರುವ ರಾಮನಕುಳ್ಳಿ ಸೇತುವೆ ನಿರ್ಮಾಣ ಹಂತದಲ್ಲಿದ್ದು, ಸೇತುವೆಯ ಎರಡೂ ಬದಿಯ ಮಣ್ಣು ಭಾರೀ ಮಳೆಗೆ ಕೊಚ್ಚಿ ಹೋಗಿದೆ. ಅಲ್ಲಿನ ನಿವಾಸಿಗಳ ಸಂಚಾರಕ್ಕಾಗಿ ಸ್ಥಳದಲ್ಲಿ ಮರದ ತಾತ್ಕಾಲಿಕ ಸೇತುವೆ ಅಳವಡಿಸಲಾಗಿದೆ. ಘಟನಾ ಸ್ಥಳಕ್ಕೆ ಮಡಿಕೇರಿ ತಹಶೀಲ್ದಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಅಲ್ಲಿ ನೆಲೆಸಿರುವ 20 ಕುಟುಂಬಗಳಿಗೆ 15 ದಿನಕ್ಕಾಗುವಷ್ಟು ಪಡಿತರ ವಿತರಿಸಲಾಗಿದೆ.

● ಮಳೆ ತಗ್ಗಿದರೂ ಜನರ ದುಗುಡ ತಪ್ಪಿಲ್ಲ ● 10 ಅಡಿ ಆಳಕ್ಕೆ ಕುಸಿದ ಕಾಫಿ ತೋಟ ● ಅಪಾಯ ಸ್ಥಿತಿಯಲ್ಲಿ ಮನೆ ● ಕೊಚ್ಚಿ ಹೋದ ಸೇತುವೆ ಮಣ್ಣು ● ದ್ವೀಪದಂತಾದ ಗ್ರಾಮ



ಕಾಟಕೇರಿಯಲ್ಲಿ ಕುಸಿದಿರುವ ಕಾಫಿ ತೋಟಕ್ಕೆ ಶಾಸಕ ಕೆ.ಜಿ.ಬೋಪಯ್ಯ ಭೇಟಿ ನೀಡಿ, ಪರಿಶೀಲಿಸುತ್ತಿರುವುದು.

ದ್ವೀಪದಂತಾದ ಗ್ರಾಮ: ಚೇರಂಬಾಣೆ ಸಮೀಪದ ದೋಣಿಕಡವು ಎಂಬ ಪ್ರದೇಶದಲ್ಲಿ ಕಾವೇರಿ ನದಿ ಪ್ರವಾಹ ಉಕ್ಕೇರಿದ್ದು, ಸಂಪರ್ಕ ಸೇತುವೆ ಮುಳುಗಡೆಯಾಗಿದೆ. ಕಳೆದ 1 ವಾರದಿಂದ ಈ ಗ್ರಾಮ ದ್ವೀಪದಂತಾಗಿದ್ದು, ಹೊರ ಜಗತ್ತಿನಿಂದ ಸಂಪರ್ಕ ಕಳೆದುಕೊಂಡಿದೆ. ಸ್ಥಳದಲ್ಲಿ ಜಿಲ್ಲಾಡಳಿತ ದೋಣಿ ವ್ಯವಸ್ಥೆ ಮಾಡಿದ್ದು, ಗ್ರಾಮಸ್ಥರ ಸಂಚಾರಕ್ಕೆ ದೋಣಿಯೇ ಆಸರೆಯಾಗಿದೆ. ಶನಿವಾರ ಘಟನಾ ಸ್ಥಳಕ್ಕೆ ಶಾಸಕ ಕೆ.ಜಿ. ಬೋಪಯ್ಯ ಭೇಟಿ ನೀಡಿ ಪರಿಶೀಲನೆ ನಡೆಸಿದರು. ದೋಣಿಯಲ್ಲೇ ದೋಣಿಕಡವು ಗ್ರಾಮಕ್ಕೆ ತೆರಳಿದ ಶಾಸಕರು ಅಲ್ಲಿನ ಗ್ರಾಮಸ್ಥರಿಗೆ ಪಡಿತರ ಕಿಟ್ ಮತ್ತು ದೋಣಿಯ ನಾವಿಕರಿಗೆ 10 ಲೈಫ್ ಸೇವ್ ಜಾಕೆಟ್‌ಗಳನ್ನು ವಿತರಿಸಿದರು. ದೋಣಿಯಲ್ಲಿ ಗ್ರಾಮಸ್ಥರನ್ನು ಕರೆದೊಯ್ಯುವ ಸಂದರ್ಭ ಕಡ್ಡಾಯವಾಗಿ ಪ್ರತಿ ಪ್ರಯಾಣಿಕರಿಗೂ ಲೈಫ್‌ಸೇವ್ ▶ 8ನೇ ಪುಟಕ್ಕೆ



ಪ್ರಕೃತಿ ವಿಕೋಪದಲ್ಲಿ ಜನ ತತ್ತರಿಸಿರುವಾಗ ಸಿದ್ದರಾಮೋತ್ಸವ ಆಚರಣೆ ಸರಿಯಲ್ಲ: ಕರ್ನಾಟಕ ಪ್ರಜಾಪಾರ್ಟಿ ಅಧ್ಯಕ್ಷ ಶಿವಣ್ಣ

ಮೈಸೂರು,ಜು.16(ಎಂಟಿವೈ)–ರಾಜ್ಯದಲ್ಲಿ ಮಳೆ ಆರ್ಭಟ ಹೆಚ್ಚಾಗಿ ಅತಿವೃಷ್ಟಿಯಿಂದಾಗಿ ಕರಾವಳಿ ಸೇರಿದಂತೆ ಹಲವು ಜಿಲ್ಲೆಗಳ ಜನರು ಪ್ರವಾಹ, ಭೂಕುಸಿತ ಸೇರಿದಂತೆ ಪ್ರಾಕೃತಿಕ ವಿಕೋಪಕ್ಕೆ ತುತ್ತಾಗಿ ತತ್ತರಿಸಿರುವ ಸಂದರ್ಭದಲ್ಲಿ 'ಸಿದ್ದರಾಮೋತ್ಸವ' ಕಾರ್ಯಕ್ರಮ ನಡೆಸುವುದು ಸಮಂಜಸವಲ್ಲ ಎಂದು ಕರ್ನಾಟಕ ಪ್ರಜಾ ಪಾರ್ಟಿ (ರೈತಪರ್ವ)ಯ ರಾಜ್ಯಾಧ್ಯಕ್ಷ ಡಾ.ಬಿ. ಶಿವಣ್ಣ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಹಲವು ಸಮಸ್ಯೆಗಳಿಂದ ಜನರು ತತ್ತರಿಸಿದ್ದಾರೆ. ಇಂತಹ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಪ್ರವಾಹ ಮತ್ತು ಭೂಕುಸಿತ ಉಂಟಾಗಿರುವ ಸ್ಥಳಗಳಿಗೆ ಭೇಟಿ ನೀಡಿ ಜನರ ನೆರವಿಗೆ ಧಾವಿಸಿ ಸರ್ಕಾರದಿಂದ ಜನರಿಗೆ ಪರಿಹಾರ ಮತ್ತು ನೆರವನ್ನು ಕೊಡಿಸುವ ಕೆಲಸ ನಿಭಾಯಿಸಬೇಕಾಗಿತ್ತು. ಆದರೆ ತಮ್ಮ ಜವಾಬ್ದಾರಿ ಮರೆತು ತಮ್ಮ ಜನ್ಮದಿನದ ಅಂಗವಾಗಿ 'ಸಿದ್ದರಾಮೋತ್ಸವ' ಕಾರ್ಯಕ್ರಮವನ್ನು ಅವರ ಹಿಂಬಾಲಕರ ಮೂಲಕ ಆಚರಿಸಿಕೊಳ್ಳಲು ಮುಂದಾಗಿರುವುದು ಸರಿಯಲ್ಲ ಎಂದರು.

ರಾಜ್ಯದಲ್ಲಿ ಅಗತ್ಯ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಏರುತ್ತಲೇ ಇದೆ. ಸಾಮಾನ್ಯ ಜನರು ಜೀವನ ನಡೆಸಲು ಕಷ್ಟಕರವಾಗಿರುತ್ತದೆ, ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ವಿದ್ಯಾವಂತ ಪದವೀಧರರು ಉದ್ಯೋಗವಿಲ್ಲದೆ, ಸರ್ಕಾರಿ ಕಚೇರಿಗಳಿಗೆ ಕೆಲಸಕ್ಕೆ ಅಲೆದಾಡುವಂತಹ ದುಸ್ಥಿತಿ ನಿರ್ಮಾಣವಾಗಿದೆ. ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ ಸಿಗದೆ ಸಾಲ ಮಾಡಿ ಸಂಕಷ್ಟಕ್ಕೆ ಸಿಲುಕಿ ಆತ್ಮಹತ್ಯೆ ದಾರಿ ಹಿಡಿಯುತ್ತಿದ್ದಾರೆ. ಹಲವು ಸಮಸ್ಯೆಗಳಿಂದ ಜನರು ತೊಂದರೆ ಅನುಭವಿಸುತ್ತಿರುವ ಸಂದರ್ಭದಲ್ಲಿ ಸರ್ಕಾರದ ವಿರುದ್ಧ ಹೋರಾಟ ಮಾಡಬೇಕಾದ ಸಿದ್ದರಾಮಯ್ಯ ಅವರು 'ಸಿದ್ದರಾಮೋತ್ಸವ' ಕಾರ್ಯಕ್ರಮ ಹಮ್ಮಿಕೊಂಡಿರುವುದು ಸಮಂಜಸವಲ್ಲ. ಈ ಹಿನ್ನೆಲೆಯಲ್ಲಿ ಕೂಡಲೇ ಸಿದ್ದರಾಮೋತ್ಸವ ಕಾರ್ಯಕ್ರಮವನ್ನು ರದ್ದುಮಾಡಿ ಬದಲಿಗೆ ರಾಜ್ಯದ ಜನರ ಕಲ್ಯಾಣೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಪ್ರಜಾಪಾರ್ಟಿಯ ರಾಜ್ಯ ಸಂಘಟನಾ ಕಾರ್ಯದರ್ಶಿ ಎನ್.ಹರೀಶ್, ಬಿ.ಆದರ್ಶ್, ರವಿಕುಮಾರ್, ತೇಜಸ್ವಿ ಪಾಟೀಲ್ ಇದ್ದರು.



ಮೈಸೂರು ನಗರ ಪಾಲಿಕೆ ವಾರ್ಡ್ ನಂ.6ರ ಗೋಕುಲಂ ಬೃಂದಾವನ ಬಡಾವಣೆಯ ಕೆಲವು ನಾಗರಿಕರಿಗೆ ಕಾರ್ಪೊರೇಟರ್ ಎಸ್‌ಬಿಎಂ ಮಂಜು ಪಾಲಿಕೆಯಿಂದ ಮಂಜೂರಾದ ವೈದ್ಯಕೀಯ ನೆರವಿನ ಚೆಕ್‌ಗಳನ್ನು ವಿತರಿಸಿದರು. ಈ ವೇಳೆ ಬಡಾವಣೆಯ ಸುರೇಶ್, ಹನುಮಗೌಡ, ಕುಮಾರ್, ಅರುಣ್, ಆನಂದ್ ಇನ್ನಿತರರಿದ್ದರು.

ಸಿಂಗಾಪುರ ಮುಕ್ತ ಬ್ಯಾಡ್ಮಿಂಟನ್ 2022: ಫೈನಲ್‌ಗೆ ಲಗ್ಗೆಯಿಟ್ಟ ಪಿ.ವಿ.ಸಿಂಧು

ಸಿಂಗಾಪುರ, ಜು.16–ಸಿಂಗಾಪುರ ಮುಕ್ತ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಭಾರತದ ಸ್ಟಾರ್ ಆಟಗಾರ್ತಿ ಪಿ.ವಿ ಸಿಂಧು ಗೆಲುವು ಸಾಧಿಸಿ, ಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ.



32 ನಿಮಿಷಗಳ ಕಾಲ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ 21–15 21–7 ಸೆಟ್‌ಗಳಿಂದ ಜಪಾನಿನ ಸೈನಾ ಕವಾಕಮಿ ಅವರನ್ನು ಸೋಲಿಸುವ ಮೂಲಕ ಸಿಂಧು ಮೇಲುಗೈ ಸಾಧಿಸಿದರು. ಈ ಮೂಲಕ ವಿಶ್ವದ 38ನೇ ಶ್ರೇಯಾಂಕದ ಸೈನಾ ಕವಾಕಮಿ ವಿರುದ್ಧ ಸಂಪೂರ್ಣ ಹಿಡಿತ ತೋರಿ ಫೈನಲ್‌ಗೆ ಎಂಟ್ರಿ ಕೊಟ್ಟಿದ್ದಾರೆ. ಇದರೊಂದಿಗೆ 2022ನೇ ವರ್ಷದಲ್ಲಿ ತನ್ನ ಮೊದಲ ಸೂಪರ್ 500 ಪ್ರಶಸ್ತಿಯ ಗೆಲುವಿಗೆ ಇನ್ನೊಂದು ಮೆಟ್ಟಿಲು ಬಾಕಿ ಇದೆ. ಎರಡು ಬಾರಿ ಒಲಿಂಪಿಕ್ಸ್ ಪದಕ ವಿಜೇತೆ ಸಿಂಧು, ಈ ವರ್ಷ ಸೈಯದ್ ಮೋದಿ ಇಂಟರ್‌ನ್ಯಾಶನಲ್ ಮತ್ತು ಸ್ವಿಸ್ ಓಪನ್‌ನಲ್ಲಿ ಎರಡು ಸೂಪರ್ 300 ಪ್ರಶಸ್ತಿಗಳನ್ನು ಗೆದ್ದಿದ್ದರು. ಈ ಹಿಂದೆ 2018ರ ಚೀನಾ ಓಪನ್‌ನಲ್ಲಿ ತನ್ನ ಕೊನೆಯ ಪಂದ್ಯದಲ್ಲಿ ಸಿಂಧು 2–0 ದಾಖಲೆ ಬರೆದಿದ್ದರು.

ಪತ್ರಕರ್ತರಿಗೆ ಜು.19ರವರೆಗೆ ನೇತ್ರ ತಪಾಸಣೆ



ಮೈಸೂರು, ಜು. 16 (ಆರ್‌ಕೆ)– ಮೈಸೂರಿನ ಸಿದ್ದಪ್ಪ ವೃತ್ತದ ಬಳಿ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಎಎಸ್‌ಜಿ ಕಣ್ಣಿನ ಆಸ್ಪತ್ರೆಯಲ್ಲಿ ಪತ್ರಕರ್ತರಿಗೆ 4 ದಿನಗಳ ಉಚಿತ ನೇತ್ರ ತಪಾಸಣಾ ಮತ್ತು ಚಿಕಿತ್ಸಾ ಶಿಬಿರ ಇಂದಿನಿಂದ ಆರಂಭವಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಹಾಗೂ ಎಎಸ್‌ಜಿ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಆಯೋಜಿಸಿರುವ ಶಿಬಿರವನ್ನು ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಅವರಿಗೆ ನೇತ್ರ ತಪಾಸಣೆ ಮಾಡುವ ಮೂಲಕ ಆಸ್ಪತ್ರೆ ವೈದ್ಯ ಡಾ.ಟಿ.ರೋಷನ್ ಚಾಲನೆ ನೀಡಿದರು.

ನೇತ್ರ ತಜ್ಞರಾದ ಡಾ.ಪವನ್ ವಿ.ಜೋಷಿ, ಡಾ.ವಿನಿಬದ್ಲಾನಿ, ಸೆಂಟರ್ ಮ್ಯಾನೇಜರ್ ವಿಜಯನ್ ಫ್ರಾನ್ಸಿಸ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷ ಅನುರಾಗ್ ಬಸವರಾಜ್, ಧರ್ಮಾಪುರ ನಾರಾಯಣ್, ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ, ನಗರ ಕಾರ್ಯದರ್ಶಿ ಪಿ. ರಂಗಸ್ವಾಮಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಆರ್. ಕೃಷ್ಣ, ಕೃಷ್ಣೋಜಿರಾವ್, ಮಾಚಮ್ಮ ಮಲ್ಲಿಗೆ, ಹಿರಿಯ ಪತ್ರಕರ್ತ ಉದಯಕುಮಾರ್, ಹಿರಿಯ ಛಾಯಾಗ್ರಾಹಕ ಪ್ರಗತಿ ಗೋಪಾಲಕೃಷ್ಣ ಸೇರಿದಂತೆ ಹಲವರು ಈ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಶಿಬಿರವು ಪ್ರತಿದಿನ ಬೆಳಗ್ಗೆ 10 ರಿಂದ ಸಂಜೆ 7 ಗಂಟೆಯವರೆಗೆ ಜುಲೈ 19ರವರೆಗೆ ನಡೆಯಲಿದೆ. ಮೊದಲ ದಿನವಾದ ಇಂದು 50 ಮಂದಿ ಪತ್ರಕರ್ತರು, ಛಾಯಾಗ್ರಾಹಕರು ಹಾಗೂ ವಿದ್ಯುನ್ಮಾನ ಮಾಧ್ಯಮ ಪ್ರತಿನಿಧಿಗಳು ಕಣ್ಣಿನ ತಪಾಸಣೆ ಮಾಡಿಸಿಕೊಂಡರು ಎಂದು ಆಸ್ಪತ್ರೆ ವ್ಯವಸ್ಥಾಪಕ ವಿಜಯನ್ ಫ್ರಾನ್ಸಿಸ್ ತಿಳಿಸಿದ್ದಾರೆ.

ಸ್ಕೂಟರ್‌ನಿಂದ ಬಿದ್ದು ಸವಾರ ಸಾವು

ಮೈಸೂರು, ಜು.16(ಆರ್‌ಕೆ)–ಸ್ಕೂಟರ್‌ನಿಂದ ಆಯತಪ್ಪಿ ಬಿದ್ದು ಸವಾರ ಮೈಸೂರಿನ ಚಾಮರಾಜ ಮೊಹಲ್ಲಾದ ಶಾಂತಲ ಟಾಕೀಸ್ ಬಳಿಯ ನಿವಾಸಿ ನರಸಿಂಹಮೂರ್ತಿ (75) ಸಾವನ್ನಪ್ಪಿದ್ದಾರೆ. ಶುಕ್ರವಾರ ಉತ್ತನಹಳ್ಳಿಯ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನಕ್ಕೆ ಪತ್ನಿ ಮಂಗಳಗೌರಿ ಅವರೊಂದಿಗೆ ಸ್ಕೂಟರ್‌ನಲ್ಲಿ ಹೋಗುತ್ತಿದ್ದಾಗ ಗನ್‌ಹೌಸ್ ಸರ್ಕಲ್ ಬಳಿ ಮಧ್ಯಾಹ್ನ 1.45ರ ವೇಳೆಗೆ ಆಯತಪ್ಪಿ ಬಿದ್ದಿದ್ದಾರೆ. ತಲೆಗೆ ತೀವ್ರ ಗಾಯಗಳಾಗಿದ್ದರಿಂದ ನರಸಿಂಹಮೂರ್ತಿ ಅವರನ್ನು ಜೆಎಸ್‌ಎಸ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದಿದ್ದಾರೆ. ಸ್ಕೂಟರ್ ಹಿಂಬದಿ ಕುಳಿತಿದ್ದ ಮಂಗಳಗೌರಿ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಪ್ರಕರಣ ದಾಖಲಿಸಿಕೊಂಡಿರುವ ಕೆ.ಆರ್. ಸಂಚಾರ ಠಾಣೆ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಗೊಂದಲಕ್ಕೆ ಕಾರಣವಾಗಿರುವ 'ಕಚೇರಿ' ಫಲಕಗಳು

ಮೈಸೂರು, ಜು. 16(ಎಸ್‌ಪಿಎನ್)– ಮೈಸೂರು ಜಿಲ್ಲಾಧಿಕಾರಿಗಳ ಹಳೆ ಕಚೇರಿ ಕಟ್ಟಡದಿಂದ ಸಿದ್ದಾರ್ಥನಗರ ಜಿಲ್ಲಾ ಕಚೇರಿಗಳ ಸಂಕೀರ್ಣಕ್ಕೆ ಸ್ಥಳಾಂತರವಾಗಿರುವ ವಿವಿಧ ಇಲಾಖೆಗಳ ಹೆಸರುಗಳನ್ನು ಕೈಬಿಟ್ಟು ಪರಿಷ್ಕೃತ ಸೂಚನಾ ಫಲಕವನ್ನು(ಹಳೆ ಜಿಲ್ಲಾಧಿಕಾರಿಗಳ ಕಚೇರಿ ಸೂಚನಾ ಫಲಕದಲ್ಲಿ) ಅಳವಡಿಸುವಂತೆ ಸಾರ್ವಜನಿಕರಿಂದ ಒತ್ತಾಯ ಕೇಳಿ ಬಂದಿದೆ. ಈಗಾಗಲೇ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕರ ಕಚೇರಿ, ಸಹಾಯಕ ನಿರ್ದೇಶಕರ ಕಚೇರಿ, ತಹಸೀಲ್ದಾರ್ (ಭೂಮಾಪನ ಶಾಖೆ) ಸೇರಿದಂತೆ 5 ಇಲಾಖೆಗಳು ಸ್ಥಳಾಂತರಗೊಂಡಿವೆ. ಸ್ಥಳಾಂತರಗೊಂಡಿರುವ ಹೆಸರುಗಳನ್ನು ಕೈಬಿಟ್ಟು, ಹಳೆ ಕಚೇರಿಯಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆಗಳನ್ನು ಮಾತ್ರ ನಮೂದಿಸುವಂತೆ ಒತ್ತಾಯಿಸಿದ್ದಾರೆ. ಮೈಸೂರು ತಾಲೂಕು ಜಯಪುರದ ನಿವಾಸಿ ಶ್ರೀಕಾಂತ್, ಭೂ ಮಾಪನ ಇಲಾಖೆ, ಆಹಾರ ಇಲಾಖೆ ಸೇರಿದಂತೆ ಇತರೆ 5 ಇಲಾಖೆಗಳು ಸ್ಥಳಾಂತರಗೊಂಡು ಮೂರು ವರ್ಷ ಕಳೆದರೂ ಜಿಲ್ಲಾಧಿಕಾರಿಗಳ ಕಚೇರಿ(ಹಾಲಿ) ಸೂಚನಾಫಲಕದಲ್ಲಿ ಈ ಹೆಸರುಗಳನ್ನು ಕೈಬಿಟ್ಟಿಲ್ಲ. ಇದರಿಂದ ಸಾರ್ವಜನಿಕರಿಗೆ ಗೊಂದಲವಾಗುತ್ತಿದ್ದು, ಇದನ್ನು ಸರಿಪಡಿಸುವಂತೆ ಒತ್ತಾಯಿಸಿದರು.

ವಾಣಿಜ್ಯ ಪರೀಕ್ಷೆ ನಡೆಯುವ ಕೇಂದ್ರದ ಸುತ್ತ ನಿಷೇಧಾಜ್ಞೆ

ಮೈಸೂರು, ಜು.16 (ಎಸ್‌ಪಿಎನ್) – ನಗರದ ಎನ್.ಆರ್.ಮೊಹಲ್ಲಾ ಅಶೋಕ ರಸ್ತೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ(ಹೆಣ್ಣು ಮಕ್ಕಳು)ಯಲ್ಲಿ ಜು.18ರಿಂದ ಜು.30ರವರೆಗೆ ವಾಣಿಜ್ಯ ಪರೀಕ್ಷೆಗಳು ನಡೆಯುವುದರಿಂದ ಈ ಶಾಲಾ ಆವರಣದ ಸುತ್ತಮುತ್ತ 200 ಮೀಟರ್ ವ್ಯಾಪ್ತಿ ನಿಷೇಧಾಜ್ಞೆ ಜಾರಿಗೊಳಿಸಿ ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಶನಿವಾರ ಆದೇಶಿಸಿದ್ದಾರೆ.

ಸದರಿ ಪರೀಕ್ಷೆಗಳನ್ನು ಪಾರದರ್ಶಕ ಮತ್ತು ವ್ಯವಸ್ಥಿತವಾಗಿ ನಡೆಸಲು ಪರೀಕ್ಷಾ ಕೇಂದ್ರದ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯಲ್ಲಿ ಪರೀಕ್ಷಾ ದಿನಗಳಂದು ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕಲಂ 144 ಸಿಆರ್‌ಪಿಸಿ ರೀತ್ಯಾ ನಿಷೇಧಾಜ್ಞೆಯನ್ನು ಜಾರಿಗೊಳಿಸಿ ಆದೇಶ ಹೊರಡಿಸಿದ್ದಾರೆ. ಈ ಪ್ರದೇಶದಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಜಯದೇವ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಸೇವಾವಧಿ ಜು.19ಕ್ಕೆ ಅಂತ್ಯ

- ಅವರ ಅವಧಿ ವಿಸ್ತರಣೆಗೆ ಆಸ್ಪತ್ರೆ ವೈದ್ಯರು, ಸಿಬ್ಬಂದಿ ಸರ್ಕಾರಕ್ಕೆ ಮನವಿ
- ಸಾರ್ವಜನಿಕ ವಲಯದಲ್ಲೂ ವ್ಯಾಪಕ ಬೆಂಬಲ; ಸಾಮಾಜಿಕ ಜಾಲ ತಾಣದಲ್ಲಿ ಅಭಿಯಾನ
- ಸರ್ಕಾರ ಇವರ ಸೇವಾವಧಿ ವಿಸ್ತರಿಸುವ ಸಾಧ್ಯತೆ

ಬೆಂಗಳೂರು, ಜು.16–ಶ್ರೀ ಜಯದೇವ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅವರ ಸೇವಾವಧಿ ಜು.19ಕ್ಕೆ ಅಂತ್ಯಗೊಳ್ಳಲಿದ್ದು, ಅವರನ್ನೇ ಮತ್ತೆ ನಿರ್ದೇಶಕರನ್ನಾಗಿ ಮುಂದುವರೆಸಲು ರಾಜ್ಯ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎಂದು ಹೇಳಲಾಗುತ್ತಿದೆ.



ಡಾ.ಸಿ.ಎನ್.ಮಂಜುನಾಥ್ ಅವರ ಸೇವೆಯನ್ನು ವಿಸ್ತರಿಸಬೇಕೆಂದು ಈಗಾಗಲೇ ಸಂಸ್ಥೆಯ ವೈದ್ಯರು ಹಾಗೂ ಸಿಬ್ಬಂದಿ ವರ್ಗದವರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ರಾಷ್ಟ್ರೀಯ ವೈದ್ಯಕೀಯ ಪರಿಷತ್ (ನ್ಯಾಷನಲ್ ಮೆಡಿಕಲ್ ಕೌನ್ಸಿಲ್) ಪ್ರಕಾರ ಯಾವುದೇ ಸಂಸ್ಥೆಯ ಮುಖ್ಯಸ್ಥರು 70 ವರ್ಷದವರೆಗೆ ಸೇವೆಯಲ್ಲಿ ಮುಂದುವರೆಯಬಹುದು. ಡಾ.ಸಿ.ಎನ್.ಮಂಜುನಾಥ್ ಅವರಿಗೆ 65 ವರ್ಷ ವಯಸ್ಸಾಗಿದ್ದು, ಅವರ ನಾಯಕತ್ವ ಗುಣವನ್ನು ಪರಿಗಣಿಸಿ ಇನ್ನೂ ಕೆಲ ವರ್ಷಗಳವರೆಗೆ ಅವರನ್ನೇ ನಿರ್ದೇಶಕರನ್ನಾಗಿ ಮುಂದುವರೆಸಬೇಕು ಎಂದು ಪತ್ರದಲ್ಲಿ ಮನವಿ ಮಾಡಲಾಗಿದೆ.

ಸದ್ಯ ಬೆಂಗಳೂರಿನ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಜಯದೇವ ಆಸ್ಪತ್ರೆ ಶಾಖೆ ಕಾರ್ಯಾರಂಭಕ್ಕೆ ಪ್ರಕ್ರಿಯೆಗಳು ನಡೆಯುತ್ತಿವೆ. ಗುಲ್ಬರ್ಗಾದಲ್ಲೂ ಆಸ್ಪತ್ರೆ ನಿರ್ಮಾಣ ಕಾರ್ಯ ನಡೆಯುತ್ತಿದೆ. ಅಲ್ಲದೇ ಹುಬ್ಬಳ್ಳಿಯಲ್ಲಿ ಜಯದೇವ ಆಸ್ಪತ್ರೆ ನಿರ್ಮಿಸಲು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಈ ಎಲ್ಲಾ ಕಾರ್ಯಗಳೂ ಯಶಸ್ವಿಯಾಗಿ ಪೂರ್ಣಗೊಳ್ಳಬೇಕಾದರೆ ಡಾ. ಸಿ.ಎನ್.ಮಂಜುನಾಥ್ ಅವರ ಸೇವೆ ಅತ್ಯವಶ್ಯಕವಾಗಿದ್ದು, ಸಂಸ್ಥೆ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಅವರ ಸೇವಾವಧಿ ವಿಸ್ತರಿಸಬೇಕೆಂದು ಪತ್ರದಲ್ಲಿ ಕೋರಲಾಗಿದೆ. ಅಲ್ಲದೇ ಡಾ. ಸಿ.ಎನ್.ಮಂಜುನಾಥ್ ಅವರ ಸೇವಾವಧಿ ವಿಸ್ತರಿಸಬೇಕೆಂಬ ಅಭಿಯಾನ ಇಂದಿನಿಂದ ಸಾಮಾಜಿಕ ಜಾಲ ತಾಣದಲ್ಲಿ ಆರಂಭವಾಗಿದ್ದು, ನಾಳೆಯಿಂದ ಅಭಿಯಾನ ಬಿರುಸುಗೊಳ್ಳುವ ಲಕ್ಷಣಗಳು ಕಂಡು ಬಂದಿವೆ. ಡಾ. ಮಂಜುನಾಥ್ ಅವರ ಸೇವಾವಧಿ ಮಂಗಳವಾರ ಅಂತ್ಯಗೊಳ್ಳಲಿದ್ದು, ಅವರ ಸೇವೆಯನ್ನು ಸರ್ಕಾರ ವಿಸ್ತರಿಸದಿದ್ದಲ್ಲಿ ಅಂದು ರೋಗಿಗಳಿಗೆ ಚಿಕಿತ್ಸೆಯಲ್ಲಿ ಯಾವುದೇ ರೀತಿಯ ತೊಂದರೆಯಾಗದಂತೆ ಓಪಿಡಿ ಆರಂಭವಾಗುವ ಮುನ್ನ ಸಂಸ್ಥೆಯ ಸಿಬ್ಬಂದಿ ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಶನಿವಾರ ಹುಟ್ಟುಹಬ್ಬ ಆಚರಿಸಿಕೊಂಡ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ ಅವರನ್ನು ಬ್ಯಾಂಕ್ ಅಧ್ಯಕ್ಷ ಸಿ.ರೇವಣ್ಣ, ಉಪಾಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಕೆ.ಉಮಾಶಂಕರ್, ಪಿ.ರಾಜೇಶ್ವರಿ, ಪಿ.ಸವಿತಾ, ಹೆಚ್.ಹರೀಶ್‌ಕುಮಾರ್, ಸುರೇಂದ್ರ, ಭಾಸ್ಕರ್, ಸಿ.ಡಿ.ಕುಮಾರ್, ಸಂತೋಷ, ರಾಘವ, ಬಿ.ಕುಮಾರ್ ಅಭಿನಂದಿಸಿ, ಶುಭಾಶಯ ಕೋರಿದರು.

ವಿಜ್ಞಾನ ನಾಟಕಗಳ ನೋಡಲು ವಿದ್ಯಾರ್ಥಿಗಳ ಪ್ರೇರೇಪಿಸಬೇಕು

ಲೇಖಕ ನಾಗೇಶ್ ಹೆಗಡೆ

ಮೈಸೂರು, ಜು.16(ಎಸ್‌ಪಿಎನ್)– ವಿಜ್ಞಾನ ವಿಷಯ ಕುರಿತು ಪ್ರದರ್ಶನಗೊಳ್ಳುವ ನಾಟಕಗಳನ್ನು ನೋಡಲು ವಿಜ್ಞಾನ ವಿದ್ಯಾರ್ಥಿಗಳಿಗೆ ಪ್ರೇರೇಪಿಸಬೇಕು. ಇದರಿಂದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ವಿಜ್ಞಾನ ಕುರಿತು ಇರುವ ಅಂಜಿಕೆ ಕಡಿಮೆಯಾಗುತ್ತದೆ ಎಂದು ಲೇಖಕ ನಾಗೇಶ್ ಹೆಗಡೆ ಅಭಿಪ್ರಾಯಪಟ್ಟರು.



ಮೈಸೂರು ರಾಮಕೃಷ್ಣನಗರದ ರಮಾಗೋವಿಂದ ಕಲಾಮಂದಿರದಲ್ಲಿ ಪರಿವರ್ತನಾ ರಂಗ ಸಮಾಜ, ಅರಿವು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆ ಹಾಗೂ ಕಲಾಸುರುಚಿ ಸಂಸ್ಥೆ ಸಹಯೋಗದೊಂದಿಗೆ ಆಯೋಜಿಸಿರುವ ಮೂರು ದಿನಗಳ 'ಮೈಸೂರು ವಿಜ್ಞಾನ ನಾಟಕೋತ್ಸವ'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಅನೇಕ ಹಿರಿಯ ವಿಜ್ಞಾನಿಗಳು ಸಂಶೋಧನೆಗಳನ್ನು ನಡೆಸಿದ್ದಾರೆ. ಅವರ ಜೀವನ ಚರಿತ್ರೆಗಳನ್ನು ಇಂದಿನ ವಿದ್ಯಾರ್ಥಿಗಳಿಗೆ ನಾಟಕಗಳ ಮೂಲಕ ಪರಿಚಯಿಸಬೇಕು. ಪರಿವರ್ತನ ರಂಗ ಸಮಾಜ, ಅರಿವು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಹಾಗೂ ಕಲಾ ಸುರುಚಿ ಸಂಸ್ಥೆಗಳು ಅರಿವು ಮೂಡಿಸುತ್ತಿರುವುದು ಉತ್ತಮ ಸಂಗತಿ ಎಂದರು. ಈ ವೇಳೆ ನವದೆಹಲಿಯ ವಿಜ್ಞಾನ ಪ್ರಸಾರ್ ಸಂಸ್ಥೆಯ ವಿಜ್ಞಾನಿ ಡಾ.ಟಿ.ವಿ. ಪರಮೇಶ್ವರನ್ ಮಾತನಾಡಿ, ವಿಜ್ಞಾನ ಪ್ರಸಾರ್ ಸಂಸ್ಥೆಯ ಹೊಸ ಆವಿಷ್ಕಾರದ ವಿಜ್ಞಾನ ವಿಷಯ ಕುರಿತು ಮಾಹಿತಿ ನೀಡಿದರು.

ನಂತರ ಕಲಾಸುರುಚಿ ತಂಡ ಕಲಾವಿದರು ಅಭಿನಯದ ಹಿರಿಯ ರಂಗಕರ್ಮಿ ಹೆಚ್.ಎಸ್.ಉಮೇಶ್ ನಿರ್ದೇಶನದ ಹಿರಿಯ ಗಣಿತಜ್ಞ ಭಾಸ್ಕರಾಚಾರ್ಯ–2 ಜೀವನಾಧರಿತ 'ಲೀಲಾವತಿ' ನಾಟಕ ಹಾಗೂ ಕಲಾ ಸುರುಚಿ ತಂಡದ ಕಲಾವಿದರಾದ ಎಸ್.ನೇತ್ರಾ, ವಿನಯಾ ಜೆ.ವಿಠ್ಠಲ್, ಪಿ.ನಾಗಭೂಷಣ್, ಎಂ.ಸುಮುಖ್ ರಾಘವನ್, ಲಿಖಿತಾ ಎಸ್ ಗೌಡ, ಎಂ.ದ್ವಾರಕನಾಥ್, ಕೃಷ್ಣ ಜಂಬೂರ್, ಜೆ.ರಘುನಂದನ್, ಸಿ.ಜಿ.ರವಿಶಂಕರ್, ಎಸ್. ಅವನಿ, ಅನುಷ್ಕಾ ಎಸ್.ಆತ್ರೇಯ ರಂಗ ಮೇಲೆ ಅಭಿನಯಿಸಿದ್ದಾರೆ. ರಂಗಹಿಂದೆ ನರಸಿಂಹ ಕುಮಾರ್, ರಮೇಶ್ ಬಾಬು, ವಿಜಯಾ ಸಿಂಧೂವಳ್ಳಿ, ಪ್ರದೀಪ್ ಕುಮಾರ್ ಸೇರಿದಂತೆ ಇತರರ ಸಾಥ್ ನೀಡಿದ್ದಾರೆ.

2 ದಿನ ನಾಟಕ ಪ್ರದರ್ಶನ: ಧಾರವಾಡದ ಬೊಂಬೆಮನೆ ಕಲಾವಿದರು ಅಭಿನಯಿಸಿರುವ, ಪ್ರಕಾಶ್ ಗರುಡ ನಿರ್ದೇಶನದ 'ಐನ್‌ಸ್ಟೈನ್' ನಾಟಕ ಶನಿವಾರ 7 ಗಂಟೆಗೆ ಪ್ರದರ್ಶನಗೊಂಡರೆ, ಯತೀಶ್ ಎನ್. ಕೊಳ್ಳೇಗಾಲ ನಿರ್ದೇಶನದ ಮೈಸೂರು ಅರಿವು ರಂಗ ತಂಡ ಕಲಾವಿದರು ಅಭಿನಯಿಸಿರುವ 'ಅಬ್ದುಸ್ ಸಲಾಮ್ ಅವರ ವಿಚಾರಣೆ' ಭಾನುವಾರ 7 ಗಂಟೆಗೆ ಪ್ರದರ್ಶನಗೊಳ್ಳಲಿದೆ.

ಜಯನಗರದ ಉದ್ಯಾನದಲ್ಲಿ ಅಕ್ರಮ ಕಟ್ಟಡ ನಿರ್ಮಾಣ

ಇದನ್ನು ತಡೆಯುವಂತೆ ನಗರಪಾಲಿಕೆ ಆಯುಕ್ತರಿಗೆ ಮೈಗ್ರಾಪ ಭಾಮಿ ಶೆಣೈ ಆಗ್ರಹ



ಮೈಸೂರು, ಜು.16– ಮೈಸೂರಿನ ಜಯನಗರ 2ನೇ ಮುಖ್ಯ ರಸ್ತೆಯ ಉದ್ಯಾನದಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಿಸುತ್ತಿರುವುದನ್ನು ತಡೆಯಬೇಕೆಂದು ಮೈಸೂರು ಗ್ರಾಹಕರ ಪರಿಷತ್ ಸಂಸ್ಥಾಪಕ(ಮೈಗ್ರಾಪ) ಭಾಮಿ ವಿ.ಶೆಣೈ ಆಗ್ರಹಿಸಿದ್ದಾರೆ.

ಈ ಸಂಬಂಧ ನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಅವರಿಗೆ ಪತ್ರ ಬರೆದಿದ್ದು, ಜಯನಗರದ ಸಣ್ಣ ಉದ್ಯಾನದಲ್ಲಿ ಕಟ್ಟಡ ನಿರ್ಮಿಸಲಾಗುತ್ತಿದ್ದು, ಇದರ ಉದ್ದೇಶದ ಬಗ್ಗೆ ಸ್ಥಳೀಯರಿಗೂ ಮಾಹಿತಿ ಇಲ್ಲ. ಆದರೆ ಯಾವ ಉದ್ದೇಶಕ್ಕಾದರೂ ಉದ್ಯಾನದಲ್ಲಿ ಕಟ್ಟಡ ನಿರ್ಮಿಸಲು ಅವಕಾಶವಿಲ್ಲ. ಇದಕ್ಕೆ ನಗರ ಪಾಲಿಕೆ ಅನುಮತಿ ನೀಡಿರುವುದು ಅಚ್ಚರಿ ತಂದಿದೆ ಎಂದು ತಿಳಿಸಿದ್ದಾರೆ.

ಕರ್ನಾಟಕ ಉದ್ಯಾನಗಳ ಕಾಯ್ದೆ ಪ್ರಕಾರ 2.5 ಹೆಕ್ಟೇರ್ ಹಾಗೂ ಅದಕ್ಕಿಂತ ಕಡಿಮೆ ವಿಸ್ತೀರ್ಣದ ಉದ್ಯಾನದಲ್ಲಿ ಯಾವುದೇ ರೀತಿಯ ಕಟ್ಟಣ ನಿರ್ಮಿಸುವಂತಿಲ್ಲ. 2.5 ಹೆಕ್ಟೇರ್‌ಗಿಂತ ಹೆಚ್ಚಿದ್ದರೆ ಶೇ.5ರಷ್ಟು ಜಾಗವನ್ನು ಭದ್ರತಾ ಸಿಬ್ಬಂದಿ ಕೊಠಡಿ ಹಾಗೂ ಸ್ಟೋರ್ ರೂಂ ನಿರ್ಮಿಸಲು ಬಳಸಬಹುದು. ಆದರೆ ಚಿಕ್ಕದಾಗಿರುವ ಜಯನಗರ ಉದ್ಯಾನದಲ್ಲಿ ಕಟ್ಟಡ ನಿರ್ಮಿಸುತ್ತಿರುವುದು ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿದೆ. ಈ ಬಗ್ಗೆ ಪರಿಶೀಲನೆ ನಡೆಸಿ ಕಾಯ್ದೆ ಉಲ್ಲಂಘನೆಯಾಗದಂತೆ ತುರ್ತು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಮಹಿಳಾ ಸಬಲೀಕರಣ

ಮೈಸೂರು, ಜು.16– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡುತ್ತಿದೆ ಎಂದು ಮೈಸೂರು ಜಿಪಂ ಮಾಜಿ ಸದಸ್ಯ ಕೆ.ಮರಿಗೌಡ ತಿಳಿಸಿದರು.



ಕೆ.ಮರಿಗೌಡ

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ಶ್ರೀರಂಗಪಟ್ಟಣ, ಪ್ರಗತಿಬಂಧು ಸ್ವಸಹಾಯ ಸಂಘಗಳ ಒಕ್ಕೂಟಗಳು ಹಾಗೂ ವಿವಿಧ ಸಂಘಗಳ ಜನಪ್ರತಿನಿಧಿಗಳು ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸಾಮೂಹಿಕ ಸತ್ಯನಾರಾಯಣ ಪೂಜೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಧರ್ಮಸ್ಥಳ ಸಂಸ್ಥೆಯು ಸ್ವಸಹಾಯ ಸಂಘಗಳ ಮೂಲಕ ಗ್ರಾಮೀಣ ಹಾಗೂ ನಗರದ ಅಸಂಘಟಿತ ಮಹಿಳೆಯರನ್ನು ಸಂಘಟಿಸಿ ಅವರಿಗೆ ಆರ್ಥಿಕ ನೆರವು ನೀಡುವ ಮೂಲಕ ಸ್ವಾವಲಂಬಿಗಳನ್ನಾಗಿ ಮಾಡಿ ಆರ್ಥಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಅನುಕೂಲ ಮಾಡಿಕೊಡುತ್ತಿದೆ. ಅಲ್ಲದೇ ಸಂಸ್ಥೆಯ ಸಹಾಯದಿಂದ ಇಂದು ಮಹಿಳೆಯರು ಸ್ವತಂತ್ರವಾಗಿ ಜೀವನ ನಿರ್ವಹಿಸುತ್ತಿದ್ದಾರೆ ಎಂದರು.

ಸಂಸ್ಥೆ ಕೆರೆಗಳ ಪುನಶ್ಚೇತನ, ಕೆರೆಗಳ ಹೂಳೆತ್ತುವ ಮೂಲಕ ಅಂತರ್ಜಲ ವೃದ್ಧಿ ಸೇರಿದಂತೆ ಹಲವು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು ಶ್ಲಾಘನೀಯ ಎಂದರು. ಭೀಮರಾಜ್, ಕಾಳೇಗೌಡ, ಗಂಗಾಧರ, ಮನು ಬಿ, ಮೆನನ್, ಹೆಬ್ಬಾಡಿಉಂಡಿ ರಾಮೇಗೌಡ, ಜೈಸ್ವಾಮಿ, ಶಿವಣ್ಣ, ಬಸವಣ್ಣ, ಚಿಕ್ಕಮಾದೇವು, ಗಣೇಶ್, ಪೈಲ್ವಾನ್ ಸ್ವಾಮಿ ಮತ್ತಿತರರಿದ್ದರು.

ಗೃಹಿಣಿ ನಾಪತ್ತೆ



ಮೈಸೂರು: ಗೃಹಿಣಿಯೊಬ್ಬರು ನಾಪತ್ತೆಯಾಗಿರುವ ಬಗ್ಗೆ ಮೈಸೂರಿನ ಹೆಬ್ಬಾಳು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಠಾಣಾ ವ್ಯಾಪ್ತಿಯ ನಿವಾಸಿ ಪುನೀತ್ ಎಂಬವರ ಅವರ ಪತ್ನಿ ಶ್ರೀಮತಿ ಗೀತಾ(35) ಎಂಬುವರು ಜು.14ರಂದು ಮನೆಯಿಂದ ಹೊರ ಹೋದವರು ಇದುವರೆಗೂ ವಾಪಸಾಗಿಲ್ಲ ಎಂದು ಪತಿ ಪುನೀತ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಸುಳಿವು ದೊರೆತವರು ದೂ.: 0821–2418318, 2418339 ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.07.2022 ಭಾನುವಾರ, ಮಳೆ ನಕ್ಷತ್ರ : ಪುನರ್ವಸು, 06.07.2022 ರಿಂದ 19.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ
ತಿಥಿ: ಚತುರ್ಥೀ, ನಕ್ಷತ್ರ : ಶತಭಿಷ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್:** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೊಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿ ಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ಗಂಟೆವರೆಗೆ.

■ **ಮಹಿಳಾ ಸಮನ್ವಯ :** ಸಬಲೆ ಉದ್ಯಮಿಯಾಗು ಸ್ವಾವಲಂಬಿಯಾಗು, ಅಧ್ಯಕ್ಷತೆ : ಉದ್ಯಮಿ ಶಕುಂತಲಾ ಅಯ್ಯರ್, ಮುಖ್ಯ ಅತಿಥಿಗಳು: ಡಿಆರ್‌ಸಿ ಸಿನಿಮಾಸ್ ಮಾಲೀಕರಾದ ವೈಶಾಲಿ ಹನುಮಂತ್, ವಿಶೇಷ ತರಬೇತುದಾರ: ನಿವೃತ್ತ ಸಿಂಡಿಕೇಟ್ ಬ್ಯಾಂಕ್ ಮ್ಯಾನೇಜರ್ ಹೆಚ್.ಎಸ್.ಕೃಷ್ಣಮೂರ್ತಿ, ಸ್ಥಳ: ಗೋವಿಂದರಾವ್ ಮೆಮೋರಿಯಲ್ ಹಾಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರಿಂದ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವಗಳು, ಶ್ರೀಚಕ್ರಪೂಜೆ, ಮಹಾಗಣಪತಿ ಹೋಮ, ಯೋಗ ವಾಸಿಷ್ಠ ಪ್ರವಚನ, ತೈಲಾಭಿಷೇಕ, ಕರ್ಕಾಟಕ ಸಂಕ್ರಮಣ, ಬೆ. 10.57 ರಿಂದ ದಕ್ಷಿಣಾಯನ ಪ್ರಾರಂಭ, ದತ್ತಸ್ವಾಮಿಗೆ ತೈಲಾಭಿಷೇಕ, ಸ್ಥಳ: ವಿಶ್ವ ಪ್ರಾರ್ಥನಾ ಮಂದಿರ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಎಸ್.ಎಂ. ಸಿಂಗರ್ಸ್ ಮತ್ತು ನವಗಾಯಕರ ವೇದಿಕೆ:** ಬಿ.ಎಲ್. ಸ್ವಾಮಿ ಸ್ವರ ಸಂಗಮ ಮೆಲೋಡಿಸ್ ಸಾರಥ್ಯದಲ್ಲಿ ಗಾಯಕರ ಸಂಗಮ, ಅಧ್ಯಕ್ಷತೆ: ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಉದ್ಘಾಟನೆ: ಚಲನಚಿತ್ರ ನಟ ಮಂಡ್ಯ ರಮೇಶ್, ವಿಶೇಷ ಆಹ್ವಾನಿತರು : ಸಿ. ನಾರಾಯಣಗೌಡ, ರವಿಗೌಡ, ದೀಪಕ್, ಡಾ. ರವೀಂದ್ರ ಡಾ. ರೇಖಾ ಅರುಣ್, ಡಿ.ಎಲ್. ಸವಿತಾ, ರವಿಶಾಸ್ತ್ರಿ, ಸ್ಥಳ: ಹೋಟೆಲ್ ಪಂಚವಟಿ, ಎಸ್‌ಡಿಎಂ ಕಾಲೇಜು ಎದುರು, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಡಾ. ಮಾಣಿಕ್ ಎ.ವಿ. ಬಂಗೇರಿ ಅವರು ರಚಿಸಿರುವ ಮರಾಠಿ ಕೃತಿ ಸಂಗೀತ–ನಾಟ್ಯ–ಪಂಚಾಯತನ್ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : ಭಾರತೀಯ ವಿದ್ಯಾ ಭವನ ಮಾಜಿ ಅಧ್ಯಕ್ಷ ಡಾ. ಎ.ವಿ. ನರಸಿಂಹಮೂರ್ತಿ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಕುರಿತು ಮಾತನಾಡುವವರು : ಹಿರಿಯ ರಂಗಭೂಮಿ ಕಲಾವಿದ ಮಾಧವ ಖರೆ, ಉಪಸ್ಥಿತರು : ಲೇಖಕಿ ಡಾ. ಮಾಣಿಕ್ ಎ.ವಿ. ಬಂಗೇರಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಮ.ನ. ಲತಾಮೋಹನ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ಸಂಚಲನ ಮೈಸೂರು :** ಉದಯ್ ನುಸ್ರತ್ ಸಾಬ್ರಿ ಸಾರಥ್ಯದಲ್ಲಿ ಶಿಬಿರಾರ್ಥಿಗಳಿಂದ ರಂಗಗೀತೆಗಳ ಪ್ರಸ್ತುತಿ ಹಾಗೂ ಕವಿಗೋಷ್ಠಿ, ಉಪಸ್ಥಿತರು : ವಕೀಲ ಹೆಚ್.ಆರ್.ನಾರಾಯಣ, ರಂಗ ನಿರ್ದೇಶಕರಾದ ಜೀವನ್ ಕುಮಾರ್ ಬಿ. ಹೆಗ್ಗೋಡು, ಪ್ರಸಾದ್ ಕುಂದೂರ್, ಸಂದೀಪ್ ಈಶಾನ್ಯ, ಸಂಚಲನ ಅಧ್ಯಕ್ಷ ದೀಪಕ್ ಮೈಸೂರು, ಸ್ಥಳ: ಇಂದಿರಾ ಅನುದಾನಿತ ಪ್ರೌಢಶಾಲೆ ಆವರಣ, ಶಾರದಾದೇವಿನಗರ, ಬೆಳಗ್ಗೆ 11ಕ್ಕೆ.

■ **ನಟನ ರಂಗಶಾಲೆ :** ಸರಸ್ವತಿ, ಸಣ್ತಿಮ್ಮಿ ಹಾಗೂ ಶರಣ್ಯ ಮತ್ತು ಹೆಣ್ಣು– ಸಂವಾದ ಕಾರ್ಯಕ್ರಮ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಮಧ್ಯಾಹ್ನ 4ಕ್ಕೆ.

■ **ರಾಷ್ಟ್ರೀಯ ಮಾನವ ಹಕ್ಕುಗಳ ತನಿಖಾ ಸಮಿತಿ :** ಆರೋಗ್ಯಕ್ಕಾಗಿ, ನ್ಯಾಯಕ್ಕಾಗಿ, ಬಡವರ ಪರವಾಗಿ ಓಟ..., ಮುಖ್ಯ ಅತಿಥಿಗಳು : ಧನುಷ ಎಂ.ಆರ್., ಸೀತಮ್ಮ, ಪವಿತ್ರ, ಹರೀಶ್ ಬಾಬು, ದೀರಜ್, ಸ್ಥಳ: ಓವಲ್ ಮೈದಾನದ ಸಮೀಪ, ಮೈಸೂರು ವಿಶ್ವವಿದ್ಯಾನಿಲಯ, ಬೆಳಗ್ಗೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್ ಮೈಸೂರು :** ಸ್ವಾಮಿ ಅಪರಾಜಿತನಂದ ಅವರಿಂದ ಇಂಗ್ಲಿಷ್‌ನಲ್ಲಿ ಗೀತಾ ಜ್ಞಾನ ಯಜ್ಞ, ಪುರುಷೋತ್ತಮ ಯೋಗ (ಭಗವದ್ಗೀತೆಯ 15 ಚಾಪ್ಟರ್) ಕುರಿತು ಉಪನ್ಯಾಸ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಸಂಜೆ 6.30ರಿಂದ.

■ **ಪರಿವರ್ತನ ರಂಗ ಸಮಾಜ, ಅರಿವು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆ, ಕಲಾಸುರುಚಿ:** ಮೈಸೂರು ವಿಜ್ಞಾನ ನಾಟಕೋತ್ಸವ, ಅರಿವು ರಂಗ ತಂಡದಿಂದ ಅಬ್ದುಸ್ ಸಲಾಮ್ ಅವರ ವಿಚಾರಣೆ ನಾಟಕ ಪ್ರದರ್ಶನ, ನಿರ್ದೇಶನ: ಯತೀಶ್ ಎನ್.ಕೊಳ್ಳೇಗಾಲ, ಸ್ಥಳ:ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಗಾನಭಾರತೀ :** ವಾಲ್ಮೀಕಿ ರಾಮಾಯಣ ಆಧಾರಿತ 'ಅಯೋಧ್ಯ ಕಾಂಡ' ನಾಟಕ ಪ್ರದರ್ಶನ, ನಿರ್ದೇಶನ : ರಂಗಕರ್ಮಿ ಪ್ರಸನ್ನ, ಸಂಗೀತ : ಅನುಶೆಟ್ಟಿ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಡಾ. ಕೆ. ಕೃಷ್ಣಭಟ್, 6.20 ಗೀತಾರಾಧನ, 6.35 ಬದುಕು ಬದಲಿಸಿದ ಶೋಧ, ಲೇಖನ ಮತ್ತು ಪ್ರಸ್ತುತಿ– ಸುರೇಂದ್ರ ನಾಥ್ ಸಾತ್ವಿಕ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಪಿ. ಸುರಭೀ, ವ್ಯಾಖ್ಯಾನ– ಡಾ.ಪ್ರದೀಪ್ ಕುಮಾರ್ ಹೆಬ್ರಿ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.05 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ– ಸಿ.ಕೆ. ವಿಜಯನಾರಸಿಂಹ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ, 9.40 ನಮ್ಮ ಆರೋಗ್ಯ, ಕಲಿಕಾ ನ್ಯೂನತೆಗಳು, ನಿರ್ವಹಣೆ ಮತ್ತು ಪರಿಹಾರ ಕುರಿತು ಡಾ. ಜಯಶ್ರೀ ಶಾನ್‌ಬಾಲ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ವಿವಿಧ ಶಾಲೆಯ ಮಕ್ಕಳಿಂದ ಕಾರ್ಯಕ್ರಮ, 10.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ, ಬಹುಮುಖ ಪ್ರತಿಭೆ–ಭುವನ್ ಪರಿಚಯ, ಪ್ರಸ್ತುತಿ–ಎಂ.ಎಸ್. ಭಾರತಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಡಾ. ಆರ್.ಎನ್. ಶ್ರೀಲತಾ, ಶ್ರೀಪ್ರಿಯಾ, 12.45 ಜನಪದಗೀತೆ–ರಾಜಮ್ಮ ಮತ್ತು ತಂಡ, 1.20 ಭಾವಗೀತೆ–ಕೃಪಾ ನಾಡಿಗ್, 2.35 ಚಲನಚಿತ್ರ ಧ್ವನಿ ವಾಹಿನಿ, 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಭಕ್ತ ಅಂಬರೀಶ, ಪ್ರಸ್ತುತಿ– ಕೂಡ್ಲುವಿನ ಕುತ್ಯಾಳ ಶ್ರೀ ಗೋಪಾಲಕೃಷ್ಣ ಯಕ್ಷಗಾನ ತರಬೇತಿ ಕೇಂದ್ರದ ಕಲಾವಿದರು, 7.00 AIR Nxt ನಮ್ಮ ಕನಸಿಗೆ ನಮ್ಮದೇ ಮಾತು – ವಿಷಯ – ಶಿಕ್ಷಣ ಹಾಗೂ ವೃತ್ತಿ ತರಬೇತಿ, ಪ್ರಸ್ತುತಿ– ಮನುಭಾರದ್ವಾಜ್ ವಿ., 9.05 ಚಿಣ್ಣರ ಸುದ್ದಿ ಪ್ರಚಲಿತ ವಿದ್ಯಮಾನಗಳನ್ನು ಒಳಗೊಂಡ ವಾರ್ತಾ ಸಂಚಿಕೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ನಾಗರಾಜರಾವ್ ಹವಾಲ್ದಾರ್–ಗಾಯನ, 11.00 ಸವಿನೆನಪು

ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಆಗ್ರಹಿಸಿ

ಪತ್ರ ಅಭಿಯಾನ; ಸಂವಾದದಲ್ಲಿ ಎಂಜಿಪಿ ನಿರ್ಣಯ

ಮೈಸೂರು,ಜು.16(ಪಿಎಂ)– ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯು ಸಾರ್ವಜನಿಕ ಸ್ನೇಹಿಯಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸೂಕ್ತ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಸದರಿ ವೇದಿಕೆ ಅಧ್ಯಕ್ಷರಿಗೆ ಪತ್ರ ಮುಖೇನ ಒತ್ತಾಯಿಸಲು ಪತ್ರ ಅಭಿಯಾನ ನಡೆಸಲು ಎಂಜಿಪಿ (ಮೈಸೂರು ಗ್ರಾಹಕರ ಪರಿಷತ್) ನೇತೃತ್ವದಲ್ಲಿ ಶನಿವಾರ ನಡೆದ ಸಭೆಯಲ್ಲಿ ನಿರ್ಣಯಿಸಲಾಯಿತು.

ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಎಂಜಿಪಿ ಮತ್ತು ಬಿಮ್ಸ್ (ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್) ಜಂಟಿ ಆಶ್ರಯದಲ್ಲಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಗಳ ಕಾರ್ಯನಿರ್ವಹಣೆ ಕುರಿತಂತೆ ಹಮ್ಮಿಕೊಂಡಿದ್ದ ಸಂವಾದ ಮತ್ತು ಜಾಗೃತಿ ಕಾರ್ಯಕ್ರಮದಲ್ಲಿ ಅಂತಿಮವಾಗಿ ಈ ನಿರ್ಣಯ ಕೈಗೊಳ್ಳಲಾಯಿತು.

ಗ್ರಾಹಕರ ವೇದಿಕೆಯಲ್ಲಿ ವಾದ ಮಂಡಿಸಲು ವಕೀಲರ ಅಗತ್ಯವಿಲ್ಲ. ಆದರೂ ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯಲ್ಲಿ ವಕೀಲರು ಅತ್ಯಗತ್ಯ ಎಂಬಂತಹ ವಾತಾವರಣ ಸೃಷ್ಟಿ ಮಾಡಲಾಗಿದೆ. ಗ್ರಾಹಕರ ಕಾಯ್ದೆ ಪ್ರಕಾರ ವೇದಿಕೆಯಲ್ಲಿ ದಾಖಲಾದ ಪ್ರಕರಣವು 6 ತಿಂಗಳಲ್ಲಿ ವಿಲೇವಾರಿ ಆಗಬೇಕು. ಆದರೆ ಸದ್ಯ ಅಂತಹ ಪರಿಸ್ಥಿತಿ ಇಲ್ಲವಾಗಿದೆ. ಅನಗತ್ಯವಾಗಿ ಪ್ರಕರಣದ ವಿಚಾರಣೆ ಮುಂದೂಡುವ ಮೂಲಕ ಗ್ರಾಹಕರಿಗೆ ನಿರಾಶೆ ಉಂಟು ಮಾಡಲಾಗಿದೆ. ಸದರಿ ವೇದಿಕೆಯು ಮಂದಗತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇದು ತ್ವರಿತಗತಿಯಲ್ಲಿ ಸಾರ್ವಜನಿಕ ಸ್ನೇಹಿಯಾಗಿ ಕಾರ್ಯನಿರ್ವಹಿಸಲು ಕ್ರಮ ಆಗಬೇಕೆಂಬ ಅಭಿಪ್ರಾಯಗಳು ಸಭೆಯಲ್ಲಿ ವ್ಯಕ್ತವಾದವು.

ಈ ನಿಟ್ಟಿನಲ್ಲಿ ಪತ್ರ ಅಭಿಯಾನದ ಮೂಲಕ ಸದರಿ ವೇದಿಕೆಯು ಪರಿಣಾಮಕಾರಿ ಕಾರ್ಯನಿರ್ವಹಣೆ ಮಾಡಲು ಅಗತ್ಯ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಬೇಕೆಂಬ ನಿರ್ಣಯವನ್ನು ಅಂತಿಮವಾಗಿ ಮಾಡಲಾಯಿತು.

ಇದಕ್ಕೂ ಮುನ್ನ ಮಾತನಾಡಿದ ಎಂಜಿಪಿ ಸಂಸ್ಥಾಪಕ ಅಧ್ಯಕ್ಷ ಡಾ.ಭಾಮಿ ವಿ.ಶೆಣೈ, ಒಬ್ಬ ಗ್ರಾಹಕ ತನ್ನ ದೂರನ್ನು ಸಲ್ಲಿಸಲು ಯಾವುದೇ ನಿರ್ದಿಷ್ಟ ನಮೂನೆ ಅಗತ್ಯವಿಲ್ಲ. ಕೇವಲ ಒಂದು ಕಾಗದದಲ್ಲಿ ಸಲ್ಲಿಸಿದರೂ ಅದನ್ನು ಪರಿಗಣಿಸಬೇಕು. ಆದರೆ ಸದ್ಯ ಅಂತಹ ಪರಿಸ್ಥಿತಿ ಇಲ್ಲವಾಗಿದೆ. ಪರಿಹಾರದ ಮೊತ್ತವು 2 ಲಕ್ಷ ರೂ.ಗೂ ಕಡಿಮೆ ಇದ್ದರೆ ವಕೀಲರು ವಕಾಲತ್ತು ವಹಿಸಬೇಕಾದ ಅಗತ್ಯವಿಲ್ಲ. ಆದರೆ ಎಲ್ಲದಕ್ಕೂ ವಕೀಲರು ಅತ್ಯಗತ್ಯ ಎಂಬಂತಹ ವಾತಾವರಣ ಸೃಷ್ಟಿ ಮಾಡಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಾಕಷ್ಟು ಜಿಲ್ಲಾ ವೇದಿಕೆಗಳು ಮೂಲಸೌಲಭ್ಯಗಳಿಂದ ವಂಚಿತವಾಗಿವೆ. ಪ್ರಸ್ತುತ ಕಾಲಘಟ್ಟಕ್ಕೆ ಅಗತ್ಯವಿರುವ ಅಂತರ್ಜಾಲ ಸೌಲಭ್ಯ ಸೇರಿದಂತೆ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಹೊಂದದೇ ಇರುವುದು ದುರಂತವೇ ಸರಿ. ತ್ವರಿತಗತಿಯಲ್ಲಿ ಪ್ರಕರಣ ಇತ್ಯರ್ಥಪಡಿಸುವ ನಿಟ್ಟಿನಲ್ಲಿ ವೇದಿಕೆ ಅಧ್ಯಕ್ಷರು ಹಾಗೂ ಸಿಬ್ಬಂದಿ ಕಾರ್ಯನಿರ್ವಹಿಸಬೇಕು. ಇಲ್ಲವಾದರೆ ಅವರನ್ನು ವಜಾಗೊಳಿಸಲು ಸಂಬಂಧಿಸಿದವರು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ಗ್ರಾಹಕರ ವ್ಯಾಜ್ಯಗಳಿಗೆ ಉಚಿತ ಕಾನೂನು ನೆರವನ್ನು ವೇದಿಕೆಗಳು ಒದಗಿಸಬೇಕು. ವ್ಯಾಜ್ಯಗಳ ವಿಚಾರಣೆಯನ್ನು ಪದೇ ಪದೆ ಮುಂದೂಡುವುದನ್ನು ತಪ್ಪಿಸಬೇಕಿದೆ. ಗ್ರಾಹಕ ಸಂರಕ್ಷಣಾ ಕಾಯ್ದೆ–1986 ಮತ್ತು 2019ರ ಕಾಯ್ದೆಯ ಅಂಶಗಳನ್ನು ಚಾಚೂ ತಪ್ಪದೇ ಅನುಷ್ಠಾನಕ್ಕೆ ತರಬೇಕು. ಹಾಗೆಯೇ ಆನ್‌ಲೈನ್ ಮೂಲಕವೂ ಪ್ರಕರಣವನ್ನು ಸುಲಭವಾಗಿ ದಾಖಲಿಸಲು ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಬಿಮ್ಸ್‌ನ ಅಧ್ಯಕ್ಷ ಪ್ರೊ.ಡಿ.ಆನಂದ್, ಎಂಜಿಪಿ ಸದಸ್ಯ ಮತ್ತು ಗ್ರಾಹಕ ಕಾರ್ಯಕರ್ತ ಡಾ.ಶೇಖರ್ ಎಸ್.ಅಯ್ಯರ್, ತಾವು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯಲ್ಲಿ ಹಲವು ಪ್ರಕರಣ ದಾಖಲಿಸಿ ಗೆಲುವು ಸಾಧಿಸಿರುವ ಬಗ್ಗೆ ಸಭೆಗೆ ವಿವರಿಸಿದರು. ಎಂಜಿಪಿ ಖಜಾಂಚಿ ಕೆ.ವಿ.ರಾಮನಾಥ್, ಅಜೀವ ಸದಸ್ಯ ಅಶ್ವಿನಿ ರಂಜನ್, ಕಾರ್ಯಾಧ್ಯಕ್ಷ ರಾಘವೇಂದ್ರ ಮತ್ತಿತರರು ಹಾಜರಿದ್ದರು.



ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶನಿವಾರ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಗಳ ಕಾರ್ಯನಿರ್ವಹಣೆ ಕುರಿತಂತೆ ಹಮ್ಮಿಕೊಂಡಿದ್ದ ಸಂವಾದ ಮತ್ತು ಜಾಗೃತಿ ಕಾರ್ಯಕ್ರಮದಲ್ಲಿ ಎಂಜಿಪಿ ಸಂಸ್ಥಾಪಕ ಅಧ್ಯಕ್ಷ ಡಾ.ಭಾಮಿ ವಿ.ಶೆಣೈ ಮಾತನಾಡಿದರು. (ಎಡದಿಂದ) ಎಂಜಿಪಿ ಖಜಾಂಚಿ ಕೆ.ವಿ.ರಾಮನಾಥ್, ಬಿಮ್ಸ್‌ನ ಅಧ್ಯಕ್ಷ ಪ್ರೊ.ಡಿ.ಆನಂದ್ ಅವರನ್ನು ಚಿತ್ರದಲ್ಲಿ ಕಾಣಬಹುದು.

> “ ವಿದ್ಯಾವಂತರಾದರೂ ಸಂಘಟನಾತ್ಮಕವಾಗಿ ಇಲ್ಲದ ಕಾರಣ ಗ್ರಾಹಕರ ಶೋಷಣೆ ನಡೆಯುತ್ತಿದೆ. ಹೇಗೆ ನೆರವು ಪಡೆದುಕೊಳ್ಳಬೇಕು ಎನ್ನುವ ಬಗ್ಗೆ ಅರಿವಿನ ಕೊರತೆ ಅಧಿಕವಾಗಿದೆ. ಈ ಬಗ್ಗೆ ಜಾಗೃತಿ ಮೂಡಿಸಬೇಕಾದ ಅಗತ್ಯವಿದೆ. ಆಗ ಮಾತ್ರ ಸುಸ್ಥಿರ ಸಮಾಜ ನಿರ್ಮಾಣವಾಗಲಿದೆ. ಡಿಜಿಟಲ್ ಹಾಗೂ ಆನ್‌ಲೈನ್ ವಹಿವಾಟು ಈಗ ಹೆಚ್ಚು ಮುನ್ನೆಲೆಗೆ ಬರುತ್ತಿದೆ. ಆದರೆ ಇದರಲ್ಲೂ ಮೋಸವಾಗುವುದು ಕಡಿಮೆಯೇನಿಲ್ಲ. ಹಾಗಾಗಿ ಜವಾಬ್ದಾರಿಯುತ ಗ್ರಾಹಕರನ್ನು ರೂಪಿಸಬೇಕಿದ್ದು, ಈ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲು ನಮ್ಮ ಸಂಸ್ಥೆ ಸಿದ್ಧವಿದೆ. **–ಪ್ರೊ. ಡಿ.ಆನಂದ್, ಬಿಮ್ಸ್ ಅಧ್ಯಕ್ಷ**


ಸಂಗೀತ– ನಾಟ್ಯ– ಪಂಚಾಯತನ್ ಮರಾಠಿ ಕೃತಿ ಇಂದು ಬಿಡುಗಡೆ

ಮೈಸೂರು, ಜು. 16– ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಜು.17 ರಂದು ಬೆಳಗ್ಗೆ 11 ಗಂಟೆಗೆ ಡಾ. ಮಾಣಿಕ್ ಎ.ವಿ. ಬಂಗೇರಿ ಅವರು ರಚಿಸಿರುವ ಮರಾಠಿ ಕೃತಿ ಸಂಗೀತ–ನಾಟ್ಯ–ಪಂಚಾಯತನ್ ಬಿಡುಗಡೆ ಸಮಾರಂಭವನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ಭಾರತೀಯ ವಿದ್ಯಾಭವನದ ಮಾಜಿ ಅಧ್ಯಕ್ಷ, ಇತಿಹಾಸ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ಎ.ವಿ. ನರಸಿಂಹಮೂರ್ತಿ ಉದ್ಘಾಟಿಸುವರು. ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದು, ಹಿರಿಯ ರಂಗಭೂಮಿ ಕಲಾವಿದ ಮಾಧವ ಖರೆ ಕೃತಿ ಕುರಿತು ಮಾತನಾಡಲಿದ್ದಾರೆ. ಕೃತಿ ಲೇಖಕ ಡಾ.ಮಾಣಿಕ್ ಎ.ವಿ. ಬಂಗೇರಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಮ.ನ. ಲತಾ ಮೋಹನ್ ಉಪಸ್ಥಿತರಿರುವರು.

ಆರೋಗ್ಯ, ನ್ಯಾಯಕ್ಕಾಗಿ ಇಂದು ಮ್ಯಾರಥಾನ್


ಮೈಸೂರು, ಜು.16(ಆರ್‌ಕೆಬಿ)– ರಾಷ್ಟ್ರೀಯ ಮಾನವ ಹಕ್ಕುಗಳ ತನಿಖಾ ಸಮಿತಿಯ ವತಿಯಿಂದ ಜು.17ರಂದು ಬೆಳಗ್ಗೆ 6 ಗಂಟೆಗೆ ಆರೋಗ್ಯಕ್ಕಾಗಿ, ನ್ಯಾಯಕ್ಕಾಗಿ ಹಾಗೂ ಬಡವರ ಪರವಾಗಿ ಮ್ಯಾರಥಾನ್ ಆಯೋಜಿಸಲಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಓವಲ್ ಮೈದಾನದಲ್ಲಿ ಆರಂಭವಾಗಲಿರುವ 2 ಕಿ.ಮೀ ಉದ್ದದ ಮ್ಯಾರಥಾನ್ ನ್ಯಾಯಾಲಯದ ಎದುರಿನ ಮಹಾತ್ಮ ಗಾಂಧಿ ಪುತ್ಥಳಿ ಬಳಸಿಕೊಂಡು ಮತ್ತೇ ಓವಲ್ ಮೈದಾನಕ್ಕೆ ವಾಪಸಾಗಲಿದೆ. ಅಂತಾರಾಷ್ಟ್ರೀಯ ಅಥ್ಲೀಟ್ ಎಂ.ಆರ್.ಧನುಷ್, ರಾಷ್ಟ್ರೀಯ ಹಾಕಿ ಆಟಗಾರ್ತಿ ಸೀತಮ್ಮ, ಸಮಾಜ ಸೇವಕ ಹರೀಶ್‌ಬಾಬು, ಆಟೋಕ್ರಾಸ್ ಸ್ಪೋರ್ಟ್ಸ್‌ನ ಧೀರಜ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಈಗಾಗಲೇ 250 ಮಂದಿ ಹೆಸರು ನೋಂದಾಯಿಸಿಕೊಂಡಿದ್ದು, ಎಲ್ಲರಿಗೂ ಮೆಡಲ್ ಹಾಗೂ ಪ್ರಮಾಣ ಪತ್ರ ನೀಡಲಾಗುವುದು. ಆಸಕ್ತರು ಚಂದ್ರು– 9880515038 ಸಂಪರ್ಕಿಸಬಹುದು.

‘ಅಯೋಧ್ಯ ಕಾಂಡ’ ನಾಟಕ ಇಂದು ಪ್ರದರ್ಶನ



ಮೈಸೂರು, ಜು.16– ವಾಲ್ಮೀಕಿ ರಾಮಾಯಣ ಆಧಾರಿತ ನಾಟಕ 'ಅಯೋಧ್ಯ ಕಾಂಡ' ನಾಟಕವು ಭಾನುವಾರ(ಜು.17) ಸಂಜೆ 7 ಗಂಟೆಗೆ ಮೈಸೂರಿನ ಕುವೆಂಪುನಗರದಲ್ಲಿರುವ ಗಾನಭಾರತಿ ಸಭಾಂಗಣದಲ್ಲಿ ಮರುಪ್ರದರ್ಶನಗೊಳ್ಳಲಿದೆ. ನಾಟಕವನ್ನು ಹಿರಿಯ ರಂಗಕರ್ಮಿ ಪ್ರಸನ್ನ ಅವರು ರಚಿಸಿ, ನಿರ್ದೇಶಿಸಿದ್ದು, ಅನುಶೆಟ್ಟಿ ಸಂಗೀತ ಸಂಯೋಜಿಸಿದ್ದಾರೆ. ರಂಗಾಯಣದ ನಿವೃತ್ತ ಕಲಾವಿದ ಪ್ರಶಾಂತ್ ಹಿರೇಮಠ್, ರಾಷ್ಟ್ರೀಯ ನಾಟಕ ಶಾಲೆ ಪದವೀಧರೆ ಸಿ.ಆರ್.ಪದ್ಮಶ್ರೀ ಸೇರಿದಂತೆ ಕಲಾವಿದರು ನಟಿಸಲಿದ್ದಾರೆ. ಮಾಹಿತಿಗೆ ಬಿ.ರಾಜೇಶ್ ಮೊ. ಸಂ: 9590259095 ಸಂಪರ್ಕಿಸಬಹುದು.

ಚಾಮುಂಡಿಬೆಟ್ಟ ಉಳಿಸಿ ಸಮಿತಿ ಸದಸ್ಯರಿಂದ ಶಾಸಕ ಜಿ.ಟಿ.ದೇವೇಗೌಡರಿಗೆ ಅಭಿನಂದನೆ



ಚಾಮುಂಡಿಬೆಟ್ಟಕ್ಕೆ ಪ್ರಸ್ತಾಪಿತ ರೋಪ್ ವೇ ಯೋಜನೆ ಕೈಬಿಡುವಂತೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ಸಭೆಯಲ್ಲಿ ಬಲವಾಗಿ ಪ್ರತಿಪಾದಿಸಿದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರನ್ನು ಶನಿವಾರ ಚಾಮುಂಡಿಬೆಟ್ಟ ಉಳಿಸಿ ಸಮಿತಿ ಸದಸ್ಯರು ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಪ್ರೊ.ಕಾಳಚನ್ನೇಗೌಡ, ಪರಶುರಾಮೇಗೌಡ, ಲೀಲಾ ವೆಂಕಟೇಶ್, ಲೀಲಾ ಶಿವಕುಮಾರ್, ಪ್ರಮೀಳಾ ರವೀಂದ್ರ, ವೆಂಕಟೇಶ್, ಜವರಪ್ಪ, ಗುರುಸ್ವಾಮಿ, ಗಂಟಯ್ಯ, ಕುಸುಮ, ಅಶೋಕ್, ರಾಮೇಗೌಡ, ಸುಶೀಲಾ, ಸುಗುಣ, ಪ್ರಭಾ, ಗೀತಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಪಿಎಸ್‌ಐ ಹಗರಣವನ್ನು ಸಿಬಿಐಗೆ ವಹಿಸಿದರೆ ಅಶ್ವತ್ಥನಾರಾಯಣ ಕೃಷ್ಣನ ಜನ್ಮಸ್ಥಳ ಸೇರಬೇಕಾದೀತು

ಮೈಸೂರು: ರಾಜ್ಯ ಸರ್ಕಾರ ಪಿಎಸ್‌ಐ ನೇಮಕಾತಿ ಅಕ್ರಮವನ್ನು ಸಿಬಿಐ ತನಿಖೆಗೆ ವಹಿಸಿದರೆ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ, ಕೃಷ್ಣನ ಜನ್ಮಸ್ಥಳದಲ್ಲಿ ಇರಬೇಕಾಗುತ್ತದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಅಭಿಪ್ರಾಯಪಟ್ಟಿದ್ದಾರೆ.



ಬಿ.ಸುಬ್ರಹ್ಮಣ್ಯ

ಪತ್ರಿಕಾ ಪ್ರಕಟಣೆಯಲ್ಲಿ ಅವರು, ಸಿದ್ದರಾಮಯ್ಯ ಅವರ ಬಗ್ಗೆ ಗೊತ್ತಿದ್ದರೂ, ಪದೇ ಪದೆ ಟೀಕೆ ಮಾಡುತ್ತಿದ್ದಾರೆ. ಅವರ ಸಾಧನೆಗಳನ್ನು ಅವಹೇಳನ ಮಾಡುತ್ತಿದ್ದಾರೆ. ಅವರ ಮಾತಿನಿಂದಲೇ ಸಚಿವರ ಸಂಸ್ಕೃತಿ ಎಂತಹದ್ದೆಂದು ತಿಳಿಯುತ್ತದೆ. ಈಗ ನಡೆಯುತ್ತಿರುವುದು ಸಿದ್ದರಾಮೋತ್ಸವ ಅಲ್ಲ. ಸಿದ್ದರಾಮಯ್ಯ 75 ಅಮೃತ ಮಹೋತ್ಸವ ಎಂದು ಪದೇ ಪದೆ ಹೇಳುತ್ತಿದ್ದರೂ ಅವರಿಗೆ ಅರ್ಥವಾಗುತ್ತಲೇ ಇಲ್ಲ. ಅಲ್ಲದೇ ಸಿದ್ದರಾಮೋತ್ಸವ ಸಿದ್ದರಾಮಯ್ಯ ಅವರನ್ನು ಮನೆಗೆ ಕಳುಹಿಸಲು ಮಾಡುತ್ತಿರುವ ಉತ್ಸವ ಎಂದು ವ್ಯಂಗ್ಯವಾಡಿದ್ದಾರೆ. ನಿಮ್ಮದೇ ಪಕ್ಷದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, 79ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಂಡರು. ಅದರ ಬಗ್ಗೆ ನಿಮಗೆ ಅರಿವಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಸಿದ್ದರಾಮಯ್ಯ ಅವರ ಸರ್ಕಾರ ಹಗರಣ ಮುಕ್ತವಾಗಿತ್ತು. ಸಿದ್ದರಾಮಯ್ಯನವರ ಆಳ್ವಿಕೆಯಲ್ಲಿ ಸತ್ಯ ಹೊರಬರಲಿ ಎಂಬ ಕಾರಣಕ್ಕೆ ಐಎಎಸ್ ಅಧಿಕಾರಿ ಡಿ.ಕೆ.ರವಿ, ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ ಪ್ರಕರಣಗಳನ್ನು ಸಿಬಿಐಗೆ ವಹಿಸಿ, ತನಿಖೆಗೆ ಸಹಕಾರ ನೀಡಿದ್ದರು.

ಈಗ ಪಿಎಸ್‌ಐ ಹಗರಣದ ಬಗ್ಗೆ ಅವರು ಪ್ರಸ್ತಾಪಿಸಿದಾಗ ಏನು ನಡೆದೇ ಇಲ್ಲ ಎಂದು ತಿಪ್ಪೆ ಸಾರಿಸುವ ಕೆಲಸ ಮಾಡಿದ್ದೀರಿ. ಆ ನಂತರ ಹಣ ಹಂಚಿಕೊಳ್ಳುವ ವಿಚಾರದಲ್ಲಿ ಕಿತ್ತಾಟ ನಡೆದು ಪ್ರಕರಣ ಬೆಳಕಿಗೆ ಬಂದಿದೆ. ಇದರಲ್ಲಿ ನೀವು ಕೊಚ್ಚಿಕೊಳ್ಳುವ ಸಾಧನೆ ಏನೂ ಇಲ್ಲ. ಅಲ್ಲದೇ ಈ ಹಗರಣದಲ್ಲಿ ನಿಮ್ಮ ಸಂಬಂಧಿಗಳು ಭಾಗಿಯಾಗಿರುವ ಆರೋಪಗಳು ಕೇಳಿ ಬರುತ್ತಿವೆ. ಇದೆಲ್ಲದಕ್ಕೂ ಮಿಗಿಲಾಗಿ ನಿಮ್ಮದೇ ಪಕ್ಷದ ಶಾಸಕ ಎಚ್.ವಿಶ್ವನಾಥ್, ದಿನಕ್ಕೊಂದು ಹಗರಣ ಬಯಲಾಗುತ್ತಿರುವ ಈ ಸರ್ಕಾರವನ್ನು ಯಾರು ಮೆಚ್ಚುತ್ತಾರೆ ಎಂದು ಹೇಳಿದ್ದಾರೆ. ಜೊತೆಗೆ ಸಿದ್ದರಾಮಯ್ಯ ಹುಣಸೂರಿನಿಂದ ಸ್ಪರ್ಧಿಸಿದರೆ ಅವರನ್ನು ತಾವೇ ಗೆಲ್ಲಿಸುವುದಾಗಿ ಹೇಳಿದ್ದಾರೆ. ಇದಕ್ಕಿಂತಲೂ ಸಿದ್ದರಾಮಯ್ಯ ಅವರ ವರ್ಚಸ್ಸಿನ ಬಗ್ಗೆ ತಿಳಿಯಬೇಕೆ?

ಮಾಲೀಕರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ

2 ಕುರಿ ಕದ್ದು ಪರಾರಿಯಾಗಿದ್ದ ನಾಲ್ವರ ಸೆರೆ



ಮೈಸೂರು,ಜು.16(ಆರ್‌ಕೆ)– ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಎರಡು ಕುರಿಗಳನ್ನು ಅಪಹರಿಸಿದ್ದ ನಾಲ್ವರನ್ನು ತಿ.ನರಸೀಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲೂಕು ಟಗರುಪುರ ಮೋಳೆ ಗ್ರಾಮದವರಾದ ನಾಗರಾಜ್ ಮಗ ಭರತ್ ಅಲಿಯಾಸ್ ಮಡ್ಡಿ(22), ಅಂಕಶೆಟ್ಟಿ ಮಗ ಕುಮಾರ(22), ಮಹದೇವಶೆಟ್ಟಿ ಮಗ ಕುಮಾರ ಅಲಿಯಾಸ್ ಕೋತಿ ಕುಮಾರ (35) ಹಾಗೂ ರಾಜಶೆಟ್ಟಿ ಮಗ ಗಜೇಂದ್ರ ಅಲಿಯಾಸ್ ಗಜ(19) ಬಂಧಿತ ಆರೋಪಿಗಳಾಗಿದ್ದು, ಅವರಿಂದ ಅಪರಾಧಕ್ಕೆ ಬಳಸಲಾಗಿದ್ದ ಬಜಾಜ್ ಪಲ್ಸರ್ ಬೈಕ್, ಹೋಂಡಾ ಶೈನ್ ಬೈಕ್ ಹಾಗೂ 2 ಕುರಿಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮೈಸೂರಿನ ಎಸ್ಪಿ ಕಚೇರಿ ಸಭಾಂಗಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್, ತುಮಕೂರು ಜಿಲ್ಲೆ ಶಿರಾ ತಾಲೂಕು, ದೇವರಹಟ್ಟಿ ಗ್ರಾಮದ ಕೆಂಚನಪ್ಪ, ಗಿರಿಯಮ್ಮ, ರಂಗನಾಥ, ಕರಿಯಣ್ಣ ಎಂಬುವರು ಮೈಸೂರು ಜಿಲ್ಲೆ, ತಿ.ನರಸೀಪುರ ತಾಲೂಕಿನ ಎಂ.ಸಿ.ಹಳ್ಳಿ ಗ್ರಾಮದ ಪುಟ್ಟಸ್ವಾಮಿ ಎಂಬುವರ ಜಮೀನಿನಲ್ಲಿ 500 ಕುರಿಗಳನ್ನು ಬಿಟ್ಟುಕೊಂಡು ಕಾಯುತ್ತಿದ್ದಾಗ ಜುಲೈ 5ರಂದು ಮಧ್ಯರಾತ್ರಿ ವೇಳೆ ದಾಳಿ ಮಾಡಿದ ನಾಲ್ವರು, ಕರಿಯಣ್ಣ ಮತ್ತು ರಂಗನಾಥ ಅವರ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ, ಮೊಬೈಲ್ ಮತ್ತು 2 ಕುರಿಗಳನ್ನು ಅಪಹರಿಸಿ ಪರಾರಿಯಾಗಿದ್ದರು ಎಂದು ತಿಳಿಸಿದರು.

ಪ್ರಕರಣ ದಾಖಲಿಸಿಕೊಂಡಿದ್ದ ತಿ.ನರಸೀಪುರ ಠಾಣೆ ಇನ್ಸ್‌ಪೆಕ್ಟರ್ ಸಿ.ಕೃಷ್ಣಪ್ಪ, ತನಿಖೆ ಕೈಗೊಂಡು ಸುಳಿವಿನ ಜಾಡು ಹಿಡಿದು ಶೋಧ ಕಾರ್ಯ ನಡೆಸಿದಾಗ ಶುಕ್ರವಾರ ಆರೋಪಿಗಳು ಸಿಕ್ಕಿಬಿದ್ದರು. ಕಳೆದ 6 ತಿಂಗಳ ಹಿಂದೆ ಆರೋಪಿಗಳು ತಿ.ನರಸೀಪುರ ಟೌನ್ ಕೆಎಸ್‌ಆರ್‌ಟಿಸಿ ಬಸ್ ಸ್ಟ್ಯಾಂಡ್‌ನ ವಾಟರ್ ಪಂಪ್‌ಹೌಸ್ ಬಳಿ ನಿಲ್ಲಿಸಿದ್ದ ಬಜಾಜ್ ಪಲ್ಸರ್ ಬೈಕ್ ಕಳವು ಮಾಡಿ ನಂಬರ್ ಪ್ಲೇಟ್ ಬದಲಾಯಿಸಿಕೊಂಡು ಓಡಿಸುತ್ತಿದ್ದ ಎಂಬುದು ತಿಳಿಯಿತು ಎಂದು ಹೇಳಿದ್ದಾರೆ. ಸಬ್ ಇನ್ಸ್‌ಪೆಕ್ಟರ್ ಕೃಷ್ಣಕಾಂತ್ ಕೋಳಿ, ಸಿಬ್ಬಂದಿಗಳಾದ ಭಾಸ್ಕರ್, ರಮೇಶ್, ಸಿ.ಪ್ರಭಾಕರ್, ಗೋವಿಂದರಾಜು, ಮಾದೇಶ, ಮನು, ಮದನ್‌ಕುಮಾರ್ ಹಾಗೂ ಇತರರು ಪತ್ತೆ ಕಾರ್ಯದಲ್ಲಿ ಪಾಲ್ಗೊಂಡಿದ್ದರು. ಎಎಸ್ಪಿ ನಂದಿನಿ, ಡಿವೈಎಸ್ಪಿ ಗೋವಿಂದರಾಜು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.


ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು,ಜು.16–ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ 2021–22ನೇ ಸಾಲಿನ ಪರಿಷ್ಕೃತ & 2022–23ನೇ ಆಯ–ವ್ಯಯದಲ್ಲಿ ಕನ್ನಡ ಭಾಷೆಯನ್ನು ಪ್ರೋತ್ಸಾಹಿಸುವ ಸಲುವಾಗಿ, ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುವ ನಾಗರಿಕ ಮಕ್ಕಳಿಗೆ ಕನ್ನಡ ಭಾಷೆಯಲ್ಲಿ ಶೇ.95ಕ್ಕಿಂತ ಹೆಚ್ಚಿನ ಅಂಕಗಳಿಸಿದ ಪ್ರತಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ 5000 ರೂ.ಗಳ ಪ್ರೋತ್ಸಾಹ ಧನ ನೀಡಲಾಗುತ್ತಿದ್ದು, ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾಭ್ಯಾಸವನ್ನು ಸರ್ಕಾರಿ ಶಾಲೆ ಮತ್ತು ಕಾಲೇಜುಗಳಲ್ಲಿ ಪೂರೈಸಿರಬೇಕು. ಸಂಬಂಧಿತ ಸರ್ಕಾರಿ ಶಾಲಾ ಅಥವಾ ಕಾಲೇಜುಗಳ ಮುಖ್ಯೋಪಾಧ್ಯಾಯರು ಹಾಗೂ ಪ್ರಾಂಶುಪಾಲರ ಮೂಲಕ ನೇರವಾಗಿ ನಿಗದಿತ ನಮೂನೆಯಲ್ಲಿ ವಾಸಸ್ಥಳ ದೃಢೀಕರಣ ಪತ್ರ, ವ್ಯಾಸಂಗ ದೃಢೀಕರಣ ಪತ್ರ, ಆಧಾರ್ ಕಾರ್ಡ್ ಹಾಗೂ 2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಕನ್ನಡ ಭಾಷೆಯಲ್ಲಿ 95ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿರುವ ಕುರಿತು ದೃಢೀಕೃತ ಅಂಕಪಟ್ಟಿ ಇತ್ಯಾದಿ ಅವಶ್ಯಕ ದಾಖಲಾತಿಗಳನ್ನು ಆಗಸ್ಟ್ 31ರ ಒಳಗಾಗಿ ಅರ್ಜಿಯೊಂದಿಗೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಜಿ.ಬಿ.ಸರಗೂರಲ್ಲಿ ಜು.19ಕ್ಕೆ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಅನಾವರಣ

ಮೈಸೂರು,ಜು.16(ಎಂಟಿವೈ)–ಹೆಚ್.ಡಿ.ಕೋಟೆ ತಾಲೂಕಿನ ಜಿ.ಬಿ.ಸರಗೂರಿನ ಗೊಲ್ಲನಬೀಡು ಮುದ್ದಯ್ಯನಹುಂಡಿ ಗ್ರಾಮಸ್ಥರ ಸಹಯೋಗದಲ್ಲಿ ಮುದ್ದಯ್ಯನಹುಂಡಿ ವೃತ್ತದಲ್ಲಿ ನಾಡಪ್ರಭು ಕೆಂಪೇಗೌಡ ಪ್ರತಿಮೆಯ ಅನಾವರಣ ಸಮಾರಂಭ ಜು.19 ರಂದು ಜರುಗಲಿದೆ ಎಂದು ಗ್ರಾಮದ ಮುಖಂಡರೂ ಆದ ಚಿತ್ರ ನಿರ್ದೇಶಕ ಸಿದ್ದೇಗೌಡ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಜಿ.ಬಿ.ಸರಗೂರು, ಗೊಲ್ಲನಬೀಡು, ಮುದ್ದಯ್ಯನಹುಂಡಿ ಗ್ರಾಮಸ್ಥರು, ಶ್ರೀ ಚಾಮುಂಡೇಶ್ವರಿ ಗಾರೆ ಕೆಲಸಗಾರರ ಸಂಘ ಹಾಗೂ ಶ್ರೀ ಕಾಶಿ ವಿಶ್ವನಾಥ ದೇವಸ್ಥಾನ ಸಮಿತಿ ಸಹಯೋಗದಲ್ಲಿ 10 ಲಕ್ಷ ರೂ. ವೆಚ್ಚದಲ್ಲಿ 9 ಅಡಿ ಎತ್ತರ ಕೆಂಪೇಗೌಡ ಪ್ರತಿಮೆ ನಿರ್ಮಿಸಲಾಗಿದೆ. ಇದನ್ನು ಜು.19ರಂದು ಬೆಳಗ್ಗೆ 11.30ಕ್ಕೆ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕೆಂಪೇಗೌಡರ ಪ್ರತಿಮೆ ಅನಾವರಣ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಮಾಜಿ ಸಚಿವರಾದ ಸಾ.ರಾ.ಮಹೇಶ್, ಜಿ.ಟಿ.ದೇವೇಗೌಡ, ಸಂಸದರಾದ ವಿ.ಶ್ರೀನಿವಾಸಪ್ರಸಾದ್, ಪ್ರತಾಪ್ ಸಿಂಹ, ಶಾಸಕ ಅನಿಲ್ ಚಿಕ್ಕಮಾದು ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ತಾಪಂ ಮಾಜಿ ಉಪಾಧ್ಯಕ್ಷ ದಳಪತಿ ಕೃಷ್ಣೇಗೌಡ, ಜಿ.ಬಿ.ಸರಗೂರು ಗ್ರಾಪಂ ಸದಸ್ಯರಾದ ಶಿವರಾಜು, ರಾಮೇಗೌಡ, ರಾಜೇಶ್ ಹಳ್ಳದ ಮನುಗನ ಹಳ್ಳಿ, ಸುತ್ತಮುತ್ತಲ ಗ್ರಾಮಗಳಾದ ಹಳ್ಳದ ಮನುಗನಹಳ್ಳಿ, ಕಟ್ಟೆಹುಂಡಿ, ಕಣಿಯನಹುಂಡಿ, ಬೆಟ್ಟದ ಬೀಡು, ಶಿಂಡೇನಹಳ್ಳಿ ಗ್ರಾಮಸ್ಥರು ಮತ್ತು ಮುಖಂಡರು ಪಾಲ್ಗೊಳ್ಳಿದ್ದಾರೆ ಎಂದರು. ಗೋಷ್ಠಿಯಲ್ಲಿ ಕುನ್ನೇಗೌಡ ಗೊಲ್ಲನಬೀಡು, ಗ್ರಾಪಂ ಸದಸ್ಯರಾದ ವೆಂಕಟೇಶ್, ಕೆಂಡಗಣ್ಣ, ತರಕಾರಿ ಸಿದ್ದೇಗೌಡ, ಪಾಪಣ್ಣ ಇನ್ನಿತರರು ಇದ್ದರು.



ಕರ್ನಾಟಕ ಸರ್ಕಾರ
ಮೈಸೂರು ಅರಮನೆ ಮಂಡಳಿ
ಮೈಸೂರು.

ಟೆಂಡರ್ ಅಧಿಸೂಚನೆ ಸಂಖ್ಯೆ: ಕಾನಿಅ/ಅಮಂ/ಉನಿ/ವಿದ್ಯುತ್/ಟೆಂಡರ್ ಸಂಖ್ಯೆ: 05/2022–23 ದಿನಾಂಕ: 14.07.2022

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ ನಿರ್ದೇಶಕರು, ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಒಟ್ಟು ಅಂದಾಜು ಮೊತ್ತ **ರೂ.18.50 ಲಕ್ಷಗಳಿಗೆ** ಸಂಬಂಧಿಸಿದ **04 ಸಂಖ್ಯೆ** ನಿರ್ವಹಣೆ /ಖರೀದಿ/ ದುರಸ್ತಿ ಕಾಮಗಾರಿಗೆ ಸಂಬಂಧಿಸಿದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ನೊಂದಾಯಿತ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ/ ನೋಂದಾಯಿತ ಏಜೆನ್ಸಿ/ ತಯಾರಕರುಗಳಿಂದ ದ್ವಿಪ್ರತಿಯಲ್ಲಿ ಮೊಹರಾದ ಲಕೋಟೆಯಲ್ಲಿ ಶೇಕಡವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (1) ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 28.07.2022 ಸಂಜೆ 4.00 ಗಂಟೆಯವರೆಗೆ.** (2) ಖಾಲಿ ಟೆಂಡರ್ ಫಾರಂಗಳನ್ನು ಗುತ್ತಿಗೆದಾರರಿಗೆ ನೀಡುವ **ದಿನಾಂಕ: 29.07.2022 ಸಂಜೆ 4.00 ಗಂಟೆಯವರೆಗೆ.** (3) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ **ದಿನಾಂಕ: 30.07.2022 ಸಂಜೆ 4.00 ಗಂಟೆಯವರೆಗೆ.** (4) ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 30.07.2022 ರ ಸಂಜೆ 4.30 ಗಂಟೆಗೆ** (5) ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ **ರೂ.5.00 ಲಕ್ಷಗಳು** ಹಾಗೂ ಕನಿಷ್ಠ ಮೊತ್ತ **ರೂ.4.50 ಲಕ್ಷಗಳು.** ಯಾವುದಾದರೂ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವ ಕಾರಣಗಳನ್ನೂ ನೀಡದೆ ಸ್ವೀಕರಿಸುವ / ತಿರಸ್ಕರಿಸುವ ಹಕ್ಕು ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರಿಗೆ ಸೇರಿರುತ್ತದೆ. ಇಷ್ಟಲ್ಲದೆ ಇನ್ನುಳಿದ ಯಾವುದಾದರೂ ಮಾಹಿತಿಗಳನ್ನು ಗುತ್ತಿಗೆದಾರರು ಬಯಸಿದಲ್ಲಿ ಅವುಗಳನ್ನು ಈ ಕಛೇರಿಯ ಕೆಲಸದ ಎಲ್ಲಾ ದಿನಗಳಂದು ಮತ್ತು ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/–
ಉಪನಿರ್ದೇಶಕರು,
ವಾಸಾಸಂಇ/ಮೈಸೂರು/ಶಿರಡಿ ಸಾಯಿ/253/2022–23 ಮೈಸೂರು ಅರಮನೆ ಮಂಡಳಿ, ಮೈಸೂರು

ಕರ್ನಾಟಕ ಸರ್ಕಾರ
ಮೈಸೂರು ಅರಮನೆ ಮಂಡಳಿ
ಮೈಸೂರು.

ಟೆಂಡರ್ ಅಧಿಸೂಚನೆ ಸಂಖ್ಯೆ: ಕಾನಿಅ/ಅಮಂ/ಉನಿ/ಸಕಾಇಂ/ವಿದ್ಯುತ್/ಟೆಂಡರ್ ಸಂಖ್ಯೆ: 06/2022–23 ದಿನಾಂಕ: 16-07-2022

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರು, ಮೈಸೂರು ಅರಮನೆಯ ವಿದ್ಯುತ್ ಉಪ–ವಿಭಾಗಕ್ಕೆ ಸಂಬಂಧಿಸಿದಂತೆ ಒಟ್ಟು 02 ಸಂಖ್ಯೆ ಖರೀದಿ / ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ನೊಂದಾಯಿತ ಅರ್ಹ ಗುತ್ತಿಗೆದಾರರು / ಏಜೆನ್ಸಿ / ತಯಾರಕರು / ಸಂಸ್ಥೆಯಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. (1) ವಿದ್ಯುನ್ಮಾನ (ಇ–ಟೆಂಡರ್) ವ್ಯವಸ್ಥೆ ಮುಖಾಂತರ ಮಾತ್ರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **01–08–2022** ಸಂಜೆ **17.30 ಗಂಟೆಯವರೆಗೆ.** (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ : **03–08–2022** ಬೆಳಿಗ್ಗೆ **11.30 ಗಂಟೆಯ ನಂತರ.** (3) ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ **ರೂ.10.00 ಲಕ್ಷಗಳು** ಹಾಗೂ ಕನಿಷ್ಠ ಮೊತ್ತ **ರೂ.7.50 ಲಕ್ಷಗಳು.** ಟೆಂಡರ್‌ನ ನಿಬಂಧನೆಗಳು, ಷರತ್ತುಗಳು ಹಾಗೂ ಕಾಮಗಾರಿಯ ಹೆಚ್ಚಿನ ವಿವರಗಳಿಗೆ **http://www.eproc.karnataka.gov.in** ಅಂತರ್ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/–
ಉಪನಿರ್ದೇಶಕರು,
ವಾಸಾಸಂಇ/ಮೈಸೂರು/ಶಿರಡಿ ಸಾಯಿ/260/2022–23 ಮೈಸೂರು ಅರಮನೆ ಮಂಡಳಿ, ಮೈಸೂರು

PUBLIC NOTICE

NOTICE IS HEREBY issued to the general public that **1) M. DEVARAJU** S/o **Sri. Mayigowda 2) B. THANUJA DEVARAJ** W/o **Devaraju. M** both are residing at #606, 2nd Cross, 3rd Main, Aravinda Nagar, Mysuru-570 023, are jointly selling the schedule property to my client.

The owners have represented that they are the absolute owners and are in possession of the Schedule property and the Schedule Property is free from any kind of encumbrance, suits, and proceedings under any statute. Any person / persons asserting any right, title, interest, claim or demand whatsoever in the Schedule Property or any part thereof, by way of sale, exchange, mortgage, charge, lien, gift, inheritance, bequest, possession, lis pendences, maintenance, easement, memorandum of understanding, agreement, power of attorney, option, right of first refusal, pre-emption or otherwise whatsoever is hereby required to notify the same in writing to the undersigned within a period of Seven (07) days from the date of issuance of this notice with all documentary proof thereof failing which my client will treat the title of the schedule property is clear and marketable and will proceed to purchase the schedule property.

SCHEDULE

All the piece and parcel of the Residential Site **No. 1187/2 CH 24/2.** measuring East to West **31½ Feet** and North to South **52 Feet.** measuring **1638 Sq.Ft.,** and another portion towards North of the above property measuring East to West **40 Feet** and North to South, **(20 + 20'.7")/2_Feet,** measuring **812Sq.Ft., totally measuring 2450 Sq.Ft.,** situated at Balakrishna Rao Road, Chamarajapuram, Chamaraja Mohalla, Mysuru, and bounded on:

EAST: By Property No. 1187/1 which belongs to Ranganatha Rao
WEST: By Property No. 1186 which belongs to P. Bhaskara Rao
NORTH: By Property No. 1187 which belongs to Ramachandra Rao
SOUTH: By Balakrishna Rao Road.

Sd/- Mallikarjuna N.L. LL.B., MBA.,
Advocate, KAR 644/08
No.366, 5th Cross, 3rd Main, Bogadi Layout, 2nd Stage, (North), Mysuru-26 **Mob : 98446 76013**

ನಕ್ಕರೆ ಅದೇ ಸ್ವರ್ಗ

ಓರ್ವ : (ಮದುವೆ ಛತ್ರದ ಭೋಜನ ಶಾಲೆಯಲ್ಲಿ) "ಬೆಂಡೆಕಾಯಿ ಪಲ್ಯಕ್ಕೆ ಉಪ್ಪು ಜಾಸ್ತಿಯಾಗಿದೆಯಲ್ಲವೇ?"

ಮತ್ತೊಬ್ಬ : "ಇಲ್ಲ, ಉಪ್ಪಿನ ಪ್ರಮಾಣಕ್ಕೆ ಬೆಂಡೆಕಾಯಿ ಕಡಿಮೆಯಾಗಿದೆ ಅಷ್ಟೆ"

ಮೈಸೂರು ಮಿತ್ರ

ಭಾನುವಾರ, 17 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಮಹತ್ತರವಾದ ಕಾರ್ಯಗಳನ್ನು ಸಾಧಿಸುವುದಕ್ಕಾಗಿ ದೇವರು ನಮ್ಮನ್ನು ಸೃಷ್ಟಿಸಿದ್ದಾನೆ ಎಂಬುದನ್ನು ಅರಿಯಿರಿ. – ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ

ನಿಮ್ಮ ಪತ್ರಗಳು

ರಾಜಕೀಯ ನೇತಾರರು ಬುದ್ಧಿ ಕಲಿಯಬೇಕು

ಮಾನ್ಯರೆ,

ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ತಮ್ಮ ವಿಧಾನಸಭಾ ಕ್ಷೇತ್ರದ ಕೆರೂರಿನಲ್ಲಿ ನಡೆದ ಒಂದು ಗಲಭೆಯಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡುತ್ತಿರುವವರ ಯೋಗಕ್ಷೇಮ ವಿಚಾರಿಸಿ, ಚಿಕಿತ್ಸೆಗಾಗಿ ಧನ ಸಹಾಯ ಮಾಡಿದ್ದನ್ನು ಗಾಯಾಳುಗಳು ಮತ್ತು ಅವರ ಕುಟುಂಬದವರು ನಿರಾಕರಿಸಿದ ಘಟನೆ ಮಾಧ್ಯಮಗಳಲ್ಲಿ ಪ್ರಕಟವಾಗಿವೆ. ರಾಜಕೀಯ ನೇತಾರರು ತಮ್ಮ ಕ್ಷೇತ್ರದಲ್ಲಿ ಯಾವುದಾದರು ಗಲಾಟೆಯಾಗಿ ಹೊಡೆದಾಟಗಳಾದರೆ, ಆ ಗಲಾಟೆಯ ಮೂಲ ಹುಡುಕಿ ಅದನ್ನು ಶಾಶ್ವತವಾಗಿ ನಿವಾರಣೆ ಮಾಡುವುದನ್ನು ಬಿಟ್ಟು, ಒಂದಿಷ್ಟು ಹಣವನ್ನು ಅಂಥಹವರ ಕೈಯಲ್ಲಿಟ್ಟು ಮಾಧ್ಯಮಗಳಲ್ಲಿ ಪ್ರಚಾರ ತೆಗೆದುಕೊಳ್ಳುವುದು ಸಾಮಾನ್ಯ. ಆದರೆ ಕೆರೂರಿನಲ್ಲಿ ಸಿದ್ದರಾಮಯ್ಯನವರಿಗೆ ಆದ ಮುಖಭಂಗದಿಂದಲಾದರೂ ರಾಜಕೀಯ ನೇತಾರರು ಬುದ್ಧಿ ಕಲಿಯಬೇಕು. ಎಲ್ಲವನ್ನೂ ದುಡ್ಡಿನಿಂದ ಅಳೆಯದೆ ಮಾನವೀಯವಾಗಿ ವರ್ತಿಸುವುದನ್ನು ಕಲಿಯಬೇಕು ಎಂಬುದಕ್ಕೆ ಕೆರೂರು ಘಟನೆ ನಾಂದಿ ಹಾಡಿದೆ ಎಂದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ನಮಗೆ ಸಹಬಾಳ್ವೆ ಮುಖ್ಯ. ಎಲ್ಲರೂ ಶಾಂತಿ, ನೆಮ್ಮದಿಯ ವಾತಾವರಣದಲ್ಲಿ ಬದುಕುವಂತಾಗಬೇಕೆಂದು ಕೊಟ್ಟ ಹಣವನ್ನು ತಿರಸ್ಕರಿಸಿದ ಎಲ್ಲರೂ ಪ್ರಶಂಸಾರ್ಹರು.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

ಇಂತಹ ಹೇಸಿಗೆ ಪರಿಸ್ಥಿತಿಯಿಂದ ನಮ್ಮನ್ನು ಕಾಪಾಡಿ... ಕಾಪಾಡಿ...

ಮಾನ್ಯರೆ,

ಬಿಎಂಶ್ರೀ ನಗರ ಮೇಟಗಳ್ಳಿಯಲ್ಲಿ ನೂತನ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ ಎರಡು ವಾರಗಳ ಹಿಂದೆ ಪ್ರಾರಂಭವಾಗಿದೆ ಆದರೆ ವಾರ ಮುಂಚೆಯೇ ರಸ್ತೆಯನ್ನು ಕಿತ್ತು, ಚರಂಡಿಗಳನ್ನು ಒಡೆದು ಹಾಕಲಾಗಿದೆ. ಈಗ ಒಂದು ವಾರವಾದರೂ ಇನ್ನೂ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ ಆರಂಭವಾಗಿಲ್ಲ. ಈಗ ಮನೆಗಳಿಗೆ ಚರಂಡಿಯಿಂದ ಇಲಿಗಳು, ಹೆಗ್ಗಣಗಳು, ಜಿರಲೆಗಳು ನುಸುಳುವುದು ಹೆಚ್ಚಾಗಿದೆ. ಇದರ ಜೊತೆಗೆ ಚರಂಡಿಗಳಿಂದ ಕೆಟ್ಟ ವಾಸನೆ ಬರುತ್ತಿದೆ. ಇದರಿಂದ ಮನೆಯಲ್ಲಿ ಊಟ ಮಾಡಲು ಸಾಧ್ಯವಿಲ್ಲದಂತಹ ಹೇಸಿಗೆ ಪರಿಸ್ಥಿತಿ. ಈ ಮಳೆ ನೀರಿನ ಚರಂಡಿ ಒಡೆದು ಹಾಕಿದ್ದರಿಂದ ರಸ್ತೆ ಕೆಸರುಮಯವಾಗಿ ಮಾರ್ಪಟ್ಟಿದೆ. ಇದರಿಂದಾಗಿ ಜನರು ಮತ್ತು ವಾಹನ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಇತ್ತ ಗಮನ ಹರಿಸಬೇಕಾಗಿ ವಿನಂತಿ.

–ಅಭಿಷೇಕ್ ಎಚ್.ಎಸ್., ಮಹಾರಾಜ ಕಾಲೇಜು, ಮೈಸೂರು.

ಉಚಿತ ಬೂಸ್ಟರ್ ಡೋಸ್ ನೀಡಿಕೆ ಸ್ವಾಗತಾರ್ಹ

ಮಾನ್ಯರೆ,

18 ರಿಂದ 59 ವಯೋಮಾನದವರಿಗೆ ಕೋವಿಡ್ ಬೂಸ್ಟರ್ ಡೋಸ್ ಅನ್ನು ಉಚಿತವಾಗಿ ನೀಡಲಾಗುವುದು ಎಂದು ಕೇಂದ್ರ ಸರ್ಕಾರ ಘೋಷಿಸಿರುವುದು ಸ್ವಾಗತಾರ್ಹ. ಆಜಾದಿ ಕಾ ಅಮೃತ್ ಮಹೋತ್ಸವ ಆಚರಣೆಯ ಭಾಗವಾಗಿ ಬೂಸ್ಟರ್ ಡೋಸ್ ಅನ್ನು ದೇಶದ ಜನತೆಗೆ ಉಚಿತವಾಗಿ ನೀಡಲಾಗುವುದು ಎಂದು ಸರ್ಕಾರ ತಿಳಿಸಿದೆ. 75 ದಿನಗಳವರೆಗೆ ಉಚಿತವಾಗಿ ಬೂಸ್ಟರ್ ಡೋಸ್ ನೀಡುತ್ತಿರುವುದು ದೇಶದ ಬಡ ಹಾಗೂ ಮಧ್ಯಮ ವರ್ಗದ ಕೋಟ್ಯಾಂತರ ಜನರಿಗೆ ಅನುಕೂಲವಾಗಲಿದೆ.

–ಚನ್ನಕೇಶವ ಜಿ. ಕೆ, ತರೀಕೆರೆ

ವೃಕ್ಷೋದ್ಯಾನವನಕ್ಕೆ ಪ್ರವೇಶ ಶುಲ್ಕದ ಹೊರೆ ಬೇಡ

ಮಾನ್ಯರೆ,

ಉದ್ಯಾನವನ ಎಂದ ಕೂಡಲೇ ಜಾತಿ, ಮತ, ಭೇದವಿಲ್ಲದೆ ಎಲ್ಲಾ ವಯೋಮಾನದವರು ಮನಸ್ಸಿನ ಸಂತೋಷಕ್ಕಾಗಿ ಆರೋಗ್ಯ ವೃದ್ಧಿಸಿಕೊಳ್ಳಲು ಹಾಗೂ ಮಕ್ಕಳು ಅಲ್ಲಿರುವ ಆಟಿಕೆ ಸಲಕರಣೆಗಾಗಿ ಹೊಸ ಸ್ನೇಹಿತರ ಗೆಳೆತನ ಬೆಳೆಸಲು ಬಂದು ಸಂಭ್ರಮಿಸುತ್ತಾರೆ. ಇದು ಎಲ್ಲರಿಗೂ ಸಂತೋಷ ಕೊಡುವ ತಾಣವಾಗಿದೆ. ಹಿರಿಯರು ವಾಯುವಿಹಾರದ ಮೂಲಕ ತಮ್ಮ ಆರೋಗ್ಯವನ್ನು ಹತೋಟಿಯಲ್ಲಿ ಇಟ್ಟುಕೊಂಡಿರುತ್ತಾರೆ. ಉದ್ಯಾನವನದಲ್ಲಿ ಎಲ್ಲಾ ವಿಷಯಗಳ ಬಗ್ಗೆ ಚರ್ಚೆಯ ಸ್ಥಾನವಾಗಿರುತ್ತದೆ. ಹೆಣ್ಣು ಮಕ್ಕಳು ಹಲವಾರು ಗೆಳತಿಯರನ್ನು ಭೇಟಿ ಮಾಡಿ ಸಂತೋಷದಿಂದ ಸಮಯ ಕಳೆಯುತ್ತಾರೆ. ಉದ್ಯಾನವನಕ್ಕೆ ಪ್ರವೇಶ ಶುಲ್ಕ ವಿಧಿಸಿದರೆ ಅಲ್ಲಿಗೆ ಬರಲು ಸಾರ್ವಜನಿಕರು ಹಿಂಜರಿಯುತ್ತಾರೆ. ಎಷ್ಟು ಚೆನ್ನಾಗಿ ನಿರ್ವಹಣೆ ಮಾಡಿದರೂ ಹಣ ಕೊಟ್ಟು ಯಾರೂ ಉದ್ಯಾನವನವನ್ನು ಪ್ರವೇಶಿಸುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಆಗ ಸಾರ್ವಜನಿಕರು ವಾಯುವಿಹಾರಕ್ಕಾಗಿ ರಸ್ತೆಗಿಳಿಯುತ್ತಾರೆ. ವಾಯುಮಾಲಿನ್ಯದಿಂದಾಗಿ ಆರೋಗ್ಯ ಸಮಸ್ಯೆ ಉಂಟಾಗುತ್ತದೆ. ಟ್ರಾಫಿಕ್ ಸಮಸ್ಯೆಯಾಗಿ ರಸ್ತೆಯಲ್ಲಿ ಜನಸಂದಣಿಯಿಂದ ಕೂಡಿ ಅಪಘಾತಕ್ಕೆ ಆಹ್ವಾನ ಕೊಟ್ಟಂತಾಗುತ್ತದೆ. ನಾವು ಕಟ್ಟುವ ತೆರಿಗೆ ಹಣದಿಂದ ನಿರ್ವಹಣೆ ಮಾಡಿ ಅನಗತ್ಯವಾಗಿ ಸಾರ್ವಜನಿಕರಿಗೆ ಶುಲ್ಕದ ಹೊರೆ ಹೇರಿ ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಬೇಡಿ ಎಲ್ಲರಿಗೂ ನೆಮ್ಮದಿ ನೀಡಿ.

–ಎಂ. ಎಸ್. ಉಷಾಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ,ಮೈಸೂರು


ಬೇಗ ಕೆಲಸ ಮುಗಿಸಿ; ಇಲಿಗಳು, ಜಿರಲೆಗಳು ಮನೆಗೆ ಬರ್ತಿವೆ...

ಮಾನ್ಯರೆ,



ಮೈಸೂರಿನ ಬಿ.ಎಂ.ಶ್ರೀನಗರ ಮತ್ತು ಮೇಟಗಳ್ಳಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿ ಆರಂಭವಾಗಿ ಒಂದು ವಾರವಾದರೂ ರಸ್ತೆ ಮತ್ತು ಒಳಚರಂಡಿ ಕಾಮಗಾರಿ ಪೂರ್ಣಗೊಂಡಿಲ್ಲ. ಚರಂಡಿಗಳಿಂದ ಇಲಿಗಳು, ಹೆಗ್ಗಣಗಳು, ಜಿರಲೆಗಳು ಮನೆಗಳಿಗೆ ನುಗ್ಗುತ್ತಿವೆ. ಅಲ್ಲದೆ ಚರಂಡಿ ತೆಗೆದಿರುವುದರಿಂದ ಕೆಟ್ಟ ವಾಸನೆ ಬರುತ್ತಿದೆ. ಇದರಿಂದ ಮನೆಯಲ್ಲಿ ಊಟ ಮಾಡಲು ಆಗುತ್ತಿಲ್ಲ. ಮಳೆ ಬರುತ್ತಿರುವುದರಿಂದ ರಸ್ತೆ ಕೆಸರು ಗದ್ದೆಯಂತಾಗಿದ್ದು, ಜನರು ಹಾಗೂ ವಾಹನಗಳು ಓಡಾಡಲು ತುಂಬಾ ತೊಂದರೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ರಸ್ತೆ ಕಾಮಗಾರಿ ಪೂರ್ಣಗೊಳಿಸಿ ನಿವಾಸಿಗಳು ನೆಮ್ಮದಿಯಿಂದ ಇರಲು ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಅಭಿಷೇಕ್ ಎಚ್.ಎಸ್, ಮಹಾರಾಜ ಕಾಲೇಜು, ಮೈಸೂರು.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಸೂಚಿ... ದಿಕ್ಕುದೆಸೆ

ಜನರ ವಾಯುಯಾನ ಕನಸು ಆಗಲಿದೆ ನನಸು



ಆಧುನಿಕ ವಿಮಾನಯಾನದ ಇತಿಹಾಸದಲ್ಲಿ ಪ್ರಥಮ ಮಾನವ ರಹಿತ ವಿಮಾನವನ್ನು ಯಶಸ್ವಿಯಾಗಿ ಹಾರಾಟ ಮಾಡಿದ ಕೀರ್ತಿ ಭಾರತಕ್ಕೆ ಸಲ್ಲಬೇಕಿತ್ತು. ರೈಟ್ ಸಹೋದರರು ವಿಮಾನ ಹಾರಿಸಿದ ಎಂಟು ವರ್ಷ ಮೊದಲು 1895ರಲ್ಲಿ ಕರ್ನಾಟಕದ ಆನೇಕಲ್ ಸುಬ್ಬಾಶಾಸ್ತ್ರಿ (1866–1940) ಹಾಗೂ ಮುಂಬೈನ ಎಸ್.ಬಿ.ತಲ್ಪಾಡೆಯವರು (1864–1916) ಮಹರ್ಷಿ ಭಾರದ್ವಾಜರ 'ಬೃಹತ್ ವೈಮಾನಿಕ ಶಾಸ್ತ್ರ'ದ ಆಧಾರದಲ್ಲಿ ವಿಮಾನವನ್ನು ರೂಪಿಸಿದರು. ಈ ವಿಮಾನಕ್ಕೆ ಇಂದಿಗೂ ಕ್ರಾಂತಿಕಾರಿ ಎನಿಸಬಹುದಾದ ಗ್ರಂಥದಲ್ಲಿದ್ದಂತೆ ಗಾಳಿ ಮತ್ತು ಸೂರ್ಯನ ಕಿರಣಗಳಿಂದ ಇಂಧನ ಉತ್ಪಾದಿಸುವಂತಹ ತಂತ್ರಜ್ಞಾನ ಅಳವಡಿಸಿದ್ದರು. ಮಾರುತ ಸಖಾ (ಪವನ ಮಿತ್ರ) ಎಂದು ಅರ್ಥಪೂರ್ಣವಾಗಿ ಹೆಸರಿಸಿದ ಈ ವಿಮಾನವು ಮುಂಬೈನ ಚೌಪಾಟಿ ಬೀಚ್‌ನಲ್ಲಿ ಬರೋಡಾದ ಮಹಾರಾಜ ಸಯ್ಯಾಜಿರಾವ್ ಗಾಯಕ್ವಾಡ್, ಮಹಾದೇವ ಗೋವಿಂದ ರಾನಡೆ ಮೊದಲಾದ ಗಣ್ಯರ ಸಮ್ಮುಖದಲ್ಲಿ ಕೆಲವೇ ನಿಮಿಷಗಳ ಕಾಲ 1500 ಅಡಿ ಎತ್ತರದಲ್ಲಿ ಹಾರಾಟ ನಡೆಸಿ ಇತಿಹಾಸ ನಿರ್ಮಿಸಿತು. ಆದರೆ ಭಾರತೀಯರ ಈ ಸಾಧನೆ ಬ್ರಿಟಿಷ್ ಸರಕಾರಕ್ಕೆ ಸಹಿಸಲಾಗಲಿಲ್ಲ. ಅದಕ್ಕಾಗಿ ಈ ಸಾಧನೆಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ನಾಶ ಮಾಡಿದರು. ಭವಿಷ್ಯದಲ್ಲಿ ಈ ಶೋಧಕರಿಗೆ ಎಲ್ಲಿಯೂ ಉದ್ಯೋಗ, ಸಂಶೋಧನೆಗೆ ಅವಕಾಶ ನೀಡದಂತೆ ನಿರ್ಬಂಧಿಸಿತು. ಬ್ರಿಟಿಷರು ಬರೆದ ಇತಿಹಾಸವನ್ನು ಕಲಿತ ನಾವು ವಿಮಾನ ಶೋಧನೆ ಬಗ್ಗೆ ಪ್ರಶ್ನೆ ಕೇಳಿದರೆ ಬಸ್ ನಿರ್ವಾಹಕರಂತೆ 'ರೈಟ್' ಎನ್ನುತ್ತೇವೆ. ಈ ರೀತಿ ಬ್ರಿಟಿಷರು ಭಾರತೀಯರ ಸಾಧನೆಯನ್ನು ವ್ಯವಸ್ಥಿತವಾಗಿ ಮುಚ್ಚಿ ಹಾಕಿದರು. ಆ ನಂತರ ಭಾರತದ ಪ್ರಥಮ ವಾಣಿಜ್ಯ ವಿಮಾನ ಹಾರಾಟವು ದಿ.18–02–1911 ರಂದು ಹದಿನೈದು ನಿಮಿಷದಲ್ಲಿ ಪ್ರಯಾಗ್‌ರಾಜ್‌ನಿಂದ ಯಮುನಾ ನದಿಯ ಮೇಲಿಂದ 6 ಮೈಲಿಯಷ್ಟು ಹಾರಾಟ ನಡೆಸಿ ನೈನಿ ಎಂಬಲ್ಲಿಗೆ ತಲುಪಿತು. ಭಾರತದ ಪ್ರಥಮ ವಿಮಾನ ನಿಲ್ದಾಣವನ್ನು JRD ಟಾಟಾರವರು 1928ರಲ್ಲಿ ಮುಂಬೈನ ಜುಹುನಲ್ಲಿ ನಿರ್ಮಿಸಿದರು. ಈ ರೀತಿ ಭಾರತದಲ್ಲಿ ನಿಧಾನವಾಗಿ ವಾಯುಯಾನ ಸಾರಿಗೆ ಆರಂಭವಾಯಿತು.

ಭಾರತದಂತಹ ಬಡ ದೇಶದಲ್ಲಿ ನಾಗರಿಕ ವಿಮಾನ ಯಾನ ಸೌಲಭ್ಯ ಉದ್ಯಮವಾಗಿ ಬೆಳೆಯುವ ಬಗ್ಗೆ ಅನುಮಾನಗಳಿದ್ದವು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ವಿಮಾನ ಪಯಣ ದುಬಾರಿ ಎಂಬ ಭಾವನೆಯಿತ್ತು. ಅದೇ ರೀತಿ ವಿಮಾನ ನಿಲ್ದಾಣಗಳಲ್ಲಿ ನಡೆಯುತ್ತಿದ್ದ ತಪಾಸಣೆ, ಇಂಗ್ಲಿಷ್ ಭಾಷೆಯಲ್ಲೇ ಮಾತನಾಡಬೇಕು ಎಂಬ ತಪ್ಪು ಕಲ್ಪನೆಗಳಿಂದ ಜನಸಾಮಾನ್ಯರು ವಿಮಾನದಲ್ಲಿ ಪಯಣಿಸಲು ಹಿಂಜರಿಯುತ್ತಿದ್ದರು. ಆದರೆ ಕಾಲ ಬದಲಾಗುತ್ತಿದ್ದಂತೆ ಭಾರತದ ಮಧ್ಯಮ, ಮೇಲ್ ಮಧ್ಯಮ ವರ್ಗದವರಿಗೆ ವಿಮಾನ ಯಾನ ಮೆಚ್ಚಿನ ಮೊದಲ ಆಯ್ಕೆಯಾಗುತ್ತಿದೆ. ಸಮಯದ ಉಳಿತಾಯ, ಸುರಕ್ಷೆ, ಸುಖಕರ ಪಯಣ, ಜನರಿಗೆ ಇಂಗ್ಲಿಷ್ ಭಾಷೆಯಲ್ಲಿ ಹೆಚ್ಚಾದ ಪ್ರಭುತ್ವ ಹಾಗೂ ಆರ್ಥಿಕವಾಗಿಯೂ ದುಬಾರಿಯಲ್ಲ ಎಂಬ ಭಾವನೆ ಬಂದಿದೆ. ಇದಕ್ಕೆ ಪೂರಕವಾಗಿ ವಿಮಾನ ಯಾನ ದರಗಳಲ್ಲೂ ಇಳಿಕೆಯಾಗುತ್ತಿದ್ದು, ವಿಮಾನ ಯಾನದ ಆಕರ್ಷಣೆ ವೃದ್ಧಿಯಾಗುತ್ತಿದೆ. 2016ರ ನಂತರ ವಿಮಾನ ಯಾನದಲ್ಲಿ ಈ ರೀತಿಯ ಧನಾತ್ಮಕ ಬೆಳವಣಿಗೆ ಪ್ರಾರಂಭವಾಗಿದೆ.

2016ರಲ್ಲಿ ಪ್ರಧಾನಿ ಮೋದಿಯವರ ಯೋಜನೆಯಂತೆ ಪ್ರಥಮ ಬಾರಿಗೆ ವಿಮಾನದಲ್ಲಿ ಪ್ರಯಾಣಿಸುವ ಆಕಾಂಕ್ಷೆ ಹೊಂದಿದ್ದ ಮಧ್ಯಮ ವರ್ಗದವರಿಗೆ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಹವಾಯ್ ಚಪ್ಪಲಿ ಧರಿಸುವವರಿಗಾಗಿ ವಿಮಾನ ನಿಲ್ದಾಣದ ದ್ವಾರಗಳು ತೆರೆದವು. ಈ ಬದಲಾವಣೆ ಕೇವಲ ನಗರ ಪ್ರದೇಶದವರಿಗೆ ಸೀಮಿತವಾಗಲಿಲ್ಲ. ಭಾರತದ ವಾಯುಯಾನ ಭೂಪಟದಲ್ಲಿ ಕಾಣದೇ ಇದ್ದ ಎರಡನೇ,

> "2016ರಲ್ಲಿ ಪ್ರಧಾನಿ ಮೋದಿಯವರ ಯೋಜನೆಯಂತೆ ಪ್ರಥಮ ಬಾರಿಗೆ ವಿಮಾನದಲ್ಲಿ ಪ್ರಯಾಣಿಸುವ ಆಕಾಂಕ್ಷೆ ಹೊಂದಿದ್ದ ಮಧ್ಯಮ ವರ್ಗದವರಿಗೆ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಹವಾಯ್ ಚಪ್ಪಲಿ ಧರಿಸುವವರಿಗಾಗಿ ವಿಮಾನ ನಿಲ್ದಾಣದ ದ್ವಾರಗಳು ತೆರೆದವು. ಈ ಬದಲಾವಣೆ ಕೇವಲ ನಗರ ಪ್ರದೇಶದವರಿಗೆ ಸೀಮಿತವಾಗಲಿಲ್ಲ. ಭಾರತದ ವಾಯುಯಾನ ಭೂಪಟದಲ್ಲಿ ಕಾಣದೇ ಇದ್ದ ಎರಡನೇ, ಮೂರನೇ ಶ್ರೇಣಿಯ ಸಣ್ಣ ನಗರಗಳಲ್ಲಿ ವಿಮಾನ ನಿಲ್ದಾಣಗಳು ನಿರ್ಮಾಣವಾಗುತ್ತಿದ್ದಂತೆ ಭಾರೀ ಸಂಖ್ಯೆಯಲ್ಲಿ ಜನರು ವಿಮಾನದಲ್ಲಿ ಪಯಣಿಸಲು ಪ್ರಾರಂಭಿಸಿದರು.

ಮೂರನೇ ಶ್ರೇಣಿಯ ಸಣ್ಣ ನಗರಗಳಲ್ಲಿ ವಿಮಾನ ನಿಲ್ದಾಣಗಳು ನಿರ್ಮಾಣವಾಗುತ್ತಿದ್ದಂತೆ ಭಾರೀ ಸಂಖ್ಯೆಯಲ್ಲಿ ಜನರು ವಿಮಾನದಲ್ಲಿ ಪಯಣಿಸಲು ಪ್ರಾರಂಭಿಸಿದರು. ಬಿಹಾರದ ದರ್ಭಾಂಗ್ ಎಂಬ ಸಣ್ಣ ನಗರದಲ್ಲಿ ವಿಮಾನಗಳು 2020 ನವೆಂಬರ್‌ನಲ್ಲಿ ವಾಣಿಜ್ಯ ಹಾರಾಟ ಪ್ರಾರಂಭಿಸಿದವು. ಈ ವಿಮಾನ ನಿಲ್ದಾಣದಿಂದ 2021 ಏಪ್ರಿಲ್‌ನಿಂದ 2022 ಮಾರ್ಚ್ ಅವಧಿಯಲ್ಲಿ ಸುಮಾರು 6.20 ಲಕ್ಷ ಪ್ರಯಾಣಿಕರು ಸಂಚರಿಸಿದರೆ, 95 ಟನ್ ಸರಕು ಸಾಗಾಟವಾಯಿತು. ಈ ನಿಲ್ದಾಣದಲ್ಲಿ ಆಗಮನ–ನಿರ್ಗಮನ ಯಾನವು 4350 ಆಗಿತ್ತು. ದೇಶದ ಇನ್ನೊಂದು ಹಿಂದುಳಿದ ರಾಜ್ಯ ಒಡಿಶಾದ ಜಿರ್ಸೊಗೊಡ್‌ನಲ್ಲಿ 2018, ಸೆಪ್ಟೆಂಬರ್‌ನಲ್ಲಿ ವಾಯುಯಾನ ಸೇವೆ ಪ್ರಾರಂಭವಾಯಿತು. 2020–2021ರಲ್ಲಿ ಈ ನಿಲ್ದಾಣದಿಂದ 2.03 ಲಕ್ಷ ಪ್ರಯಾಣಿಕರು ಸಂಚರಿಸಿದರು. ಸುಮಾರು 3472 ವಿಮಾನ ಹಾರಾಟಗಳಾದವು. ಇದೇ ರೀತಿ 2017 ಅಕ್ಟೋಬರ್‌ನಲ್ಲಿ ರಾಜಸ್ಥಾನದ ಕಿಶನ್‌ಘರ್ ವಿಮಾನ ನಿಲ್ದಾಣ ಕಾರ್ಯಾರಂಭ ಮಾಡಿತು.

ಉಡಾನ್ ಯೋಜನೆ (ಉಥೆ ದೇಶ್ ಕಾ ಆಮ್ ನಾಗರಿಕ): ಜೀವನದಲ್ಲಿ ಕನಿಷ್ಠ ಒಮ್ಮೆಯಾದರೂ ವಿಮಾನದಲ್ಲಿ ಪ್ರಯಾಣಿಸಬೇಕೆಂಬ ಜನಸಾಮಾನ್ಯರ ಆಸೆ ಪೂರೈಸಲು ಪ್ರಧಾನಿ ಮೋದಿಯವರ ನೇತೃತ್ವದ ಕೇಂದ್ರ ಸರಕಾರ 'ಉಡಾನ್' ಯೋಜನೆ ಪ್ರಾರಂಭಿಸಿತು. 2016ರಲ್ಲಿ ಆರಂಭವಾದ ಈ ಉಡಾನ್ ಯೋಜನೆ ಹಾಗೂ ಇತ್ತೀಚಿನ 'ಹೆಲಿ' ನೀತಿ ನಾಗರಿಕ ವಿಮಾನ ಯಾನ ಕ್ಷೇತ್ರದಲ್ಲಿ ಸರಕಾರದ ಎರಡು ಅತಿ ಮಹತ್ವ ಸಾಧನೆಗಳಾಗಿವೆ. ಉಡಾನ್ ಯೋಜನೆಯನ್ವಯ ಇದುವರೆಗೆ ದೇಶದಲ್ಲಿ 65 ವಿಮಾನ ನಿಲ್ದಾಣಗಳು ಹಾಗೂ ಎರಡು ಜಲ ವಿಮಾನ ನಿಲ್ದಾಣಗಳು (ವಾಟರ್ ಏರೋಡ್ರೋಮ್) ಹಾಗೂ ಎಂಟು ಹೆಲಿಕಾಪ್ಟರ್ ನಿಲ್ದಾಣಗಳು ಕಾರ್ಯಾರಂಭಿಸಿವೆ. ಉಡಾನ್ ಯೋಜನೆಯಲ್ಲಿ ಇದುವರೆಗೆ 405 ವಾಯು ಮಾರ್ಗಗಳಲ್ಲಿ 90 ಲಕ್ಷ ಪ್ರಯಾಣಿಕರು ಸಂಚರಿಸಿದ್ದಾರೆ. ಗಮನಾರ್ಹವೆಂದರೆ ಈ ಮಾರ್ಗಗಳು 2014ರ ಮೊದಲು ವಾಯು ಮಾರ್ಗದ ನಕ್ಷೆಯಲ್ಲಿರಲಿಲ್ಲ.

ವಿಮಾನ ಯಾನ ಉದ್ಯಮದಲ್ಲಿ ವ್ಯಾಪಕ ವಿಸ್ತರಣೆ ಸಾಧಿಸುವ ಭರದಲ್ಲಿ ಗುಣಮಟ್ಟದಲ್ಲಿ ಹೊಂದಾಣಿಕೆ ಮಾಡದೆ ಸಾಧಿಸಲಾಗಿದೆ. ದೇಶೀಯ ವಿಮಾನ ಯಾನದಲ್ಲಿ 2013–14ರಲ್ಲಿ 60 ಮಿಲಿಯನ್ ಪ್ರಯಾಣಿಕರು ಸಂಚರಿಸಿದರೆ, ಈ ಪ್ರಮಾಣ 2019–20ರಲ್ಲಿ 141 ಮಿಲಿಯನ್‌ಗೆ ಏರಿಕೆಯಾಯಿತು. 2023–24ರಲ್ಲಿ 400 ಮಿಲಿಯನ್ ಪ್ರಯಾಣಿಕರು ಸಂಚರಿಸಬಹುದೆಂದು ಅಂದಾಜು ಮಾಡಲಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ 2013ರವರೆಗೆ ದೇಶದಲ್ಲಿ ಕೇವಲ 74 ವಿಮಾನ ನಿಲ್ದಾಣಗಳ ನಿರ್ಮಾಣವಾಗಿತ್ತು.

ವಾಯುಯಾನ ಉದ್ಯಮದಲ್ಲಿ ಬರುತ್ತಿದ್ದ ಅತಿಯಾದ ನಿರ್ವಹಣಾ ವೆಚ್ಚ ಹಾಗೂ ಸರಕಾರದ ಅತಿಯಾದ ನೀತಿ–ನಿಯಮಗಳಿಂದಾಗಿ ಖಾಸಗಿಯವರು ಈ ವಲಯಕ್ಕೆ ಪ್ರವೇಶಿಸಲು ಹಿಂಜರಿಯುತ್ತಿದ್ದರು. 2005–2013ರ ಅವಧಿಯಲ್ಲಿ ಆರು ಕಂಪೆನಿಗಳು ಭಾರೀ ನಷ್ಟದಿಂದ ಮುಚ್ಚಿದವು. 2014ರಲ್ಲಿ ದೇಶದ ಆಡಳಿತದ ಚಿತ್ರಣ ಸಂಪೂರ್ಣ ಬದಲಾಯಿತು. ಕನಿಷ್ಠ ಸರಕಾರ ಗರಿಷ್ಠ ಆಡಳಿತ ನೀತಿಯೊಂದಿಗೆ ಸರಕಾರದ ಅತಿಯಾದ ಹಸ್ತಕ್ಷೇಪಗಳನ್ನು ತೊಡೆದು ಹಾಕಲಾಯಿತು. ವಿಮಾನ ಯಾನಕ್ಕೆ ಸಂಬಂಧಿಸಿದ ಹೆಚ್ಚಿನೆಲ್ಲ ಪ್ರಕ್ರಿಯೆಗಳನ್ನು ಆನ್‌ಲೈನ್‌ನಲ್ಲಿ ಮಾಡಲು ಆರಂಭಿಸಿದರು. ಹನ್ನೊಂದು ಹೊಸ ಪ್ರಾದೇಶಿಕ ವಾಯುಯಾನ ಕಂಪನಿಗಳು ಪ್ರಾರಂಭವಾಗಲಿದ್ದು, ಎರಡು ಕಂಪನಿಗಳು ಶೀಘ್ರದಲ್ಲೇ ತಮ್ಮ ಯಾನವನ್ನು ಪ್ರಾರಂಭಿಸಲಿವೆ.

ವಾಯುಯಾನ ಕ್ಷೇತ್ರದಲ್ಲಿ ಹೂಡಿಕೆ: ಇತ್ತೀಚಿನ ವರ್ಷಗಳಲ್ಲಿ ಸರಕಾರ ಮತ್ತು ಖಾಸಗಿ ಹೂಡಿಕೆದಾರರನ್ನು ಈ ಕ್ಷೇತ್ರ ಭಾರೀ ಪ್ರಮಾಣದಲ್ಲಿ ಆಕರ್ಷಿಸುತ್ತಿದೆ. ಕೋವಿಡ್–19 ಕಾಲದಲ್ಲೂ ವಿಮಾನ ನಿಲ್ದಾಣಗಳ ವಿಸ್ತರಣಾ ಕಾಮಗಾರಿ ಸ್ಥಗಿತಗೊಳಿಸಲಿಲ್ಲ. ಈ ಅವಧಿಯಲ್ಲಿ 93 ಸಾವಿರ ಕೋಟಿ ರೂ. ಹೂಡಿಕೆ ಮಾಡಲಾಯಿತು. ಪರಿಸರ ಕಾಳಜಿಗಳನ್ನು ಗಮನದಲ್ಲಿಟ್ಟು ಕಳೆದ ಎಂಟು ವರ್ಷಗಳಲ್ಲಿ ಎಂಟು ಗ್ರಿನ್ ಫೀಲ್ಡ್ ವಿಮಾನ ನಿಲ್ದಾಣಗಳನ್ನು ಪ್ರಾರಂಭಿಸಲಾಯಿತು. 1999–2013ರವರೆಗೆ ಕೇವಲ ಮೂರು ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣಗಳೂ ಕಾರ್ಯಾರಂಭಿಸಿದ್ದವು. ಭಾರತವು ಮೂಲ ಸೌಕರ್ಯಗಳ ನಿರ್ಮಾಣಕ್ಕೆ ಆದ್ಯತೆ ನೀಡುವುದರೊಂದಿಗೆ ವಾಯುಯಾನದಲ್ಲಿ ಸಂಪರ್ಕ ಕ್ರಾಂತಿ ತರುವ ಯೋಜನೆ ರೂಪಿಸಲಾಗುತ್ತಿದೆ. ಈ ಮೂಲಕ ಜಾಗತಿಕ ವಾಯುಯಾನ ಕ್ಷೇತ್ರದಲ್ಲಿ ಉನ್ನತ ಸ್ಥಾನ ಗಳಿಸುವತ್ತ ವ್ಯವಸ್ಥಿತವಾಗಿ ಮುಂದುವರಿಯುತ್ತಿದೆ.

ಇತ್ತೀಚಿನವರೆಗೆ ಬಾನಲ್ಲಿ ವಿಮಾನದ ಸದ್ದು ಕೇಳುತ್ತಿದ್ದಂತೆ ಮಕ್ಕಳಿಂದ ಹಿರಿಯರಾದಿಯಾಗಿ ಆಗಸದತ್ತ ತಲೆಯೆತ್ತಿ ಕುತೂಹಲ, ಕಾತರದಿಂದ ಲೋಹದ ಹಕ್ಕಿಯನ್ನು ನೋಡುತ್ತಿದ್ದೆವು. ಆಗ ಪ್ರತಿಯೊಬ್ಬನು ಜೀವನದಲ್ಲಿ ಒಮ್ಮೆಯಾದರೂ ವಿಮಾನದಲ್ಲಿ ಪ್ರಯಾಣಿಸಬೇಕೆಂದು ಕನಸು ಕಾಣುತ್ತಿದ್ದನು. ಈ ಕನಸನ್ನು ನನಸಾಗಿ ಮಾಡಲು ಉಡಾನ್ ಯೋಜನೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಭಾರೀ ಸಂಖ್ಯೆಯಲ್ಲಿ ಜನಸಾಮಾನ್ಯರು ವಿಮಾನಗಳಲ್ಲಿ ಸಂಚರಿಸುವುದನ್ನು ಕಾಣಬಹುದು.

ಮೈಸೂರಿನ ಬಸ್ ಡ್ರೈವರ್ ಪುತ್ರ ಭಾರತೀಯ ವಾಯುಪಡೆ ಅಧಿಕಾರಿ!



ಮೈಸೂರು,ಜು.16(ಪಿಎಂ)–ತಂದೆ ಕೆಎಸ್‌ಆರ್‌ಟಿಸಿ ಬಸ್ ಚಾಲಕರಾದರೆ, ಪುತ್ರನ ಆಕಾಂಕ್ಷೆ ಮಾತ್ರ ಆಗಸದಲ್ಲಿ ಹಾರಾಡುವುದಾಗಿತ್ತು. ಹೌದು, ಮೈಸೂರಿನ ಯುವ ಸಾಧಕರೊಬ್ಬರ ಯಶೋಗಾಥೆ ಇದು. ತಮ್ಮ ನಿರಂತರ ಪರಿಶ್ರಮದ ಮೂಲಕ ಅಂದುಕೊಂಡಂತೆ ಇದೀಗ ಭಾರತೀಯ ವಾಯುಪಡೆ ತರಬೇತಿ ಮುಗಿಸಿ, ಸೇವೆಗೆ ಸೇರ್ಪಡೆಯಾಗಿದ್ದಾರೆ ಮೈಸೂರಿನ ಎಂ.ಪ್ರಶಾಂತ್.

ಭಾರತೀಯ ವಾಯುಪಡೆಗೆ (ಐಎಎಫ್) ಸೇರಬೇಕೆಂಬ ಹಂಬಲ ಹೊಂದಿದ್ದ ಎಂ.ಪ್ರಶಾಂತ್, ತಮ್ಮ 6ನೇ ಪ್ರಯತ್ನದಲ್ಲಿ ಯಶಸ್ಸು ಗಳಿಸಿದ್ದಾರೆ. ಮೈಸೂರಿನ ಬನ್ನಿಮಂಟಪದ ಮಂಜುನಾಥ್ ಹಾಗೂ ಶಾರದಮ್ಮ ದಂಪತಿ ಪುತ್ರ ಪ್ರಶಾಂತ್, ಸದ್ಯ ಹೈದರಾಬಾದ್‌ನಲ್ಲಿರುವ ಇಂಡಿಯನ್ ಏರ್ಸ್ ಅಕಾಡೆಮಿಯಲ್ಲಿ ತರಬೇತಿ ಪೂರ್ಣಗೊಳಿಸಿ, ಜು.4ರಂದು ಇಲ್ಲಿ ಹವಾಮಾನ ಅಧಿಕಾರಿಯಾಗಿ ಕರ್ತವ್ಯ ಆರಂಭಿಸಿದ್ದಾರೆ. ಎಂ.ಪ್ರಶಾಂತ್ ಬೆಂಗಳೂರಿನ ಆಚಾರ್ಯ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಏರೋನಾಟಿಕಲ್ ಇಂಜಿನಿಯರಿಂಗ್ ಪದವಿ ಮತ್ತು ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ಯೂನಿವರ್ಸಿಟಿಯಲ್ಲಿ ಎಂ.ಟೆಕ್ ಪದವಿ ಪಡೆದಿದ್ದಾರೆ. ಇದಾದ ಬಳಿಕ ಏರ್‌ಫೋರ್ಸ್ ಸೆಲೆಕ್ಷನ್ ಬೋರ್ಡ್‌ಗೆ (ಎಎಫ್‌ಎಸ್‌ಬಿ) ಅರ್ಜಿ ಸಲ್ಲಿಸುತ್ತಿದ್ದ ಅವರು, ತಮ್ಮ 6ನೇ ಪ್ರಯತ್ನದಲ್ಲಿ ಆಯ್ಕೆಯಾಗುವ ಮೂಲಕ ತಮ್ಮ ಗುರಿ ಮುಟ್ಟಿದ್ದಾರೆ.

ಅಮ್ಮನ ಅಗಲಿಕೆ ನೋವು: ತಾಯಿ ಅಗಲಿಕೆ ನೋವಿನಲ್ಲೂ ಸಾಧನೆ ಹಾದಿ ಕ್ರಮಿಸಿ, ತಮ್ಮ ತಾಯಿಯ ಆಸೆ ಈಡೇರಿಸುವಲ್ಲಿ ಸಫಲರಾಗಿದ್ದಾರೆ ಪ್ರಶಾಂತ್. ಇವರು ವಾಯುಪಡೆಯ ಸಂದರ್ಶನದಲ್ಲಿ ಇದ್ದಾಗ, ತಾಯಿ ಶಾರದಮ್ಮ ಕ್ಯಾನ್ಸರ್‌ನಿಂದಾಗಿ ನಿಧನರಾದರು. ಅಮ್ಮನ ಅಗಲಿಕೆಯ ನೋವನ್ನೂ ನುಂಗಿಕೊಂಡು ಫ್ಲೈಯಿಂಗ್ ಆಫೀಸರ್ ಆಗಿ ನೇಮಕಗೊಳ್ಳುವ ಮೂಲಕ ತಾಯಿ ಆಸೆ ಈಡೇರಿಸಿದ್ದಾರೆ. ಸದ್ಯ ಕರ್ನಾಟಕದಿಂದ ಇವರ ಬ್ಯಾಚ್‌ನಲ್ಲಿ ಆಯ್ಕೆಯಾದ ಏಕೈಕ ಅಭ್ಯರ್ಥಿ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ ಪ್ರಶಾಂತ್. ಆ ಮೂಲಕ ರಾಜ್ಯದ ಕೀರ್ತಿ ಪತಾಕೆ ಹಾರಿಸಿದ ಹೆಗ್ಗಳಿಕೆ ತಮ್ಮದಾಗಿಸಿಕೊಂಡಿರುವ ಪ್ರಶಾಂತ್, ವಿಮಾನಯಾನದ ಹವಾಮಾನ ವರದಿ ವಿಭಾಗದಲ್ಲಿ ಕಾರ್ಯನಿರ್ವಹಿಸಲಿದ್ದಾರೆ.

ಸೋಲಿಗೆ ಧೃತಿಗೆಡಲಿಲ್ಲ: ಆರಂಭದಲ್ಲಿ ಸೋಲಿನ ಕಹಿ ಅನುಭವಿಸಿದೆ. ಆದರೂ ಹಿಂದೇಟು ಹಾಕಲಿಲ್ಲ. ಈ ನಡುವೆ ಅಮ್ಮ ಕ್ಯಾನ್ಸರ್‌ನಿಂದ ಸಾವನ್ನಪ್ಪಿದರು. ಈ ನೋವು ನುಂಗಿಕೊಂಡೇ 6ನೇ ಬಾರಿಯ ಸಂದರ್ಶನ ಎದುರಿಸಿದೆ. ಅಂತಿಮ ಆಯ್ಕೆಗಾಗಿ ಮಾಡಿದ್ದ ಆಯ್ದ ಅಭ್ಯರ್ಥಿಗಳ 40 ಮಂದಿಯ ಪಟ್ಟಿಯಲ್ಲಿ ನಾನೂ ಇದ್ದೆ. ಇದು ನನ್ನಲ್ಲಿ ಆತ್ಮವಿಶ್ವಾಸ ಇಮ್ಮಡಿಗೊಳಿಸಿತು. ಅಂತಿಮವಾಗಿ ನಿರಂತರ ಅಭ್ಯಾಸದಿಂದ ಭಾರತೀಯ ವಾಯುಪಡೆಗೆ ಸೇರಬೇಕೆಂಬ ನನ್ನ ಕನಸು ನನಸಾಯಿತು ಎಂದು ಎಂ.ಪ್ರಶಾಂತ್ ತಮ್ಮ ಅನುಭವ ಹಂಚಿಕೊಳ್ಳುತ್ತಾರೆ.

ಕ್ರೀಡೆಯಲ್ಲಿ ಪ್ರಶಾಂತ್: ಪ್ರಶಾಂತ್ ಮಧ್ಯಮ ವರ್ಗದ ಕುಟುಂಬದವರು. ತಂದೆ ಕೆಎಸ್‌ಆರ್‌ಟಿಸಿ ಬಸ್ ಚಾಲಕರಾಗಿ ಸೇವೆ ಸಲ್ಲಿಸಿ, ಇದೀಗ ನಿವೃತ್ತರಾಗಿದ್ದಾರೆ. ಕ್ರಿಕೆಟ್, ಟೇಬಲ್ ಟೆನ್ನಿಸ್ ಹಾಗೂ ಬೇಸ್ ಬಾಲ್‌ನಲ್ಲಿ ವಿವಿ ಮಟ್ಟದ ನಾನಾ ಸ್ಪರ್ಧೆಗಳಲ್ಲಿ ಪ್ರಶಾಂತ್ ಭಾಗವಹಿಸಿದ್ದಾರೆ. ಅಲ್ಲದೆ, ಎನ್‌ಸಿಸಿಗೂ ಜೂನಿಯರ್ ಅಂಡರ್ ಆಫೀಸರ್ ಆಗಿ ಸೇರಿ, ಎರಡು ಬೇಸಿಕ್ ಕ್ಯಾಂಪ್‌ಗಳಲ್ಲೂ ಪಾಲ್ಗೊಂಡು 'ಸಿ' ಸರ್ಟಿಫಿಕೇಟ್ ಪಡೆದಿದ್ದಾರೆ.

ಕಾರ್ಯಾರಂಭ ಮಾಡಿದ ಪ್ರಶಾಂತ್...

ಪ್ರಸ್ತುತ ಹೈದರಾಬಾದ್‌ನಲ್ಲಿರುವ ಇಂಡಿಯನ್ ಏರ್ಸ್ ಅಕಾಡೆಮಿಯಲ್ಲಿ ಪ್ರಶಾಂತ್ ಮೀಟರಾಲಜಿ ಅಧಿಕಾರಿಯಾಗಿ ಸೇವೆ ಆರಂಭಿಸಿದ್ದಾರೆ. ಹವಾಮಾನ ವರದಿ ವಿಭಾಗ ಅವರ ಕಾರ್ಯಕ್ಷೇತ್ರ. ವಿಮಾನ ಹಾರಾಟದಲ್ಲಿ ಹವಾಮಾನ ಮಹತ್ವದ ಪಾತ್ರ ವಹಿಸಲಿದೆ. ವಿಮಾನ ಹಾರಾಡುವ ದಿಕ್ಕು, ಅಲ್ಲಿನ ಹವಾಮಾನ, ಇದರಿಂದ ಆಗಬಹುದಾದ ಅಡೆತಡೆಗಳು, ಯಾವ ದಿಕ್ಕಿನಲ್ಲಿ ಹೋದರೆ ಅಪಾಯ ಎಂಬಿತ್ಯಾದಿ ಮಾಹಿತಿ ಕಲೆ ಹಾಕುವ ಜವಾಬ್ದಾರಿ ಹವಾಮಾನ ವರದಿ ವಿಭಾಗದ್ದು.

ಇಂದು ಐಸಿಎಸ್‌ಇ 10ನೇ ತರಗತಿ ಫಲಿತಾಂಶ ಪ್ರಕಟ

ನವದೆಹಲಿ: ಐಸಿಎಸ್‌ಇ 10ನೇ ತರಗತಿಯ ಫಲಿತಾಂಶ ಜುಲೈ 17ರಂದು ಸಂಜೆ 5 ಗಂಟೆಗೆ ಪ್ರಕಟವಾಗಲಿದೆ. ಈ ಕುರಿತು ಐಸಿಎಸ್‌ಇ ಮಂಡಳಿಯ ಕಾರ್ಯದರ್ಶಿ ಗೆರ್ರಿ ಅರಾಥೂನ್ ಶನಿವಾರ ಮಾಹಿತಿ ನೀಡಿದ್ದು, ಐಸಿಎಸ್‌ಇ 10ನೇ ತರಗತಿಯ ಫಲಿತಾಂಶಗಳನ್ನು ಜು.17ರಂದು ಪ್ರಕಟಿಸಲಾಗುವುದು ಮತ್ತು ಅಂತಿಮ ಅಂಕಗಳ ನೀಡಿಕೆಯಲ್ಲಿ ಮೊದಲ ಮತ್ತು 2ನೇ ಸೆಮಿಸ್ಟರ್‌ಗಳ ಅಂಕಗಳನ್ನು ಸಮಾನವಾಗಿ ಪರಿಗಣಿಸಲಾಗುತ್ತದೆ. ಸೆಮಿಸ್ಟರ್ 1 ಅಥವಾ ಸೆಮಿಸ್ಟರ್ 2 ಪರೀಕ್ಷೆಗಳಿಗೆ ಹಾಜರಾಗದ ಅಭ್ಯರ್ಥಿಗಳನ್ನು ಗೈರುಹಾಜರೆಂದು ಗುರುತಿಸಲಾಗುತ್ತದೆ. ಅವರ ಫಲಿತಾಂಶಗಳನ್ನು ಪ್ರಕಟಿಸಲಾಗುವುದಿಲ್ಲ ಎಂದು ತಿಳಿಸಿದ್ದಾರೆ. ವಿದ್ಯಾರ್ಥಿಗಳು ಫಲಿತಾಂಶವನ್ನು cisce.org, results.cisce.org ವೆಬ್‌ಸೈಟ್‌ಗಳಲ್ಲಿ ಪರಿಶೀಲಿಸಬಹುದು.

ಮೈಸೂರು ದಕ್ಷಿಣ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಮೂಲ ಸೌಕರ್ಯವಿಲ್ಲದೆ ಕೆಲಸ ಕಾರ್ಯಗಳಿಗೆ ಬರುವ ಜನರು ಹೈರಾಣು

ವಯೋವೃದ್ಧರೊಬ್ಬರ ದಯಾನೀಯ ಸ್ಥಿತಿ ಕಂಡ ಜನರಿಂದ ಸರ್ಕಾರಕ್ಕೆ ಹಿಡಿಶಾಪ



ಮೈಸೂರು, ಜು.16– ಮೈಸೂರಿನ ರಾಮಕೃಷ್ಣ ನಗರದಲ್ಲಿರುವ ದಕ್ಷಿಣ ಉಪನೊಂದಣಾಧಿಕಾರಿ ಕಚೇರಿ ಅವ್ಯವಸ್ಥೆಗಳ ಆಗರವಾಗಿದ್ದು, ಕನಿಷ್ಠ ಮೂಲ ಸೌಕರ್ಯಗಳಿಲ್ಲದೆ ಸಾರ್ವಜನಿಕರು ಪರದಾಡುವಂತಾಗಿದೆ.

ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ವಿಕಲ ಚೇತನರು, ವೃದ್ಧರು, ಅಶಕ್ತರಿಗೆ ರ್‍ಯಾಂಪ್, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ಇರಬೇಕು ಎಂಬ ನಿಯಮವಿದೆ. ಬಾಡಿಗೆ ಕಟ್ಟಡದಲ್ಲಿ ಅನೇಕ ಸರ್ಕಾರಿ ಕಚೇರಿಗಳು ಕಾರ್ಯನಿರ್ವಹಣೆ ಮಾಡುತ್ತಿದ್ದು, ಅಲ್ಲಿ ಸರ್ಕಾರದ ಯಾವುದೇ ನಿಯಮ ಪಾಲನೆಯಾಗುತ್ತಿಲ್ಲ. ಇಂತಹ ಕಡೆ ನಾನಾ ಕೆಲಸಗಳಿಗೆ ಹೋಗುವ ಸಾರ್ವಜನಿಕರು ಪ್ರತಿನಿತ್ಯ ಸಂಕಟ ಪಡುವಂತಾಗಿದೆ.


ಇದೇ ಸ್ಥಿತಿ ರಾಮಕೃಷ್ಣನಗರದಲ್ಲಿರುವ ದಕ್ಷಿಣ ಉಪನೊಂದಣಾಧಿಕಾರಿ ಕಚೇರಿಯಲ್ಲಿದ್ದು, ಕಚೇರಿಗೆ ಆಸ್ತಿ ನೊಂದಣಿ ವಿಚಾರವಾಗಿ ನಡೆಯಲು ಸಾಧ್ಯವಾಗದ ವಯೋವೃದ್ಧರೊಬ್ಬರನ್ನು ಕುಟುಂಬಸ್ಥರು ಇಂದು ಕರೆತಂದಿದ್ದರು. ಕಚೇರಿ ಕಾರ್ಯನಿರ್ವಹಿಸುತ್ತಿರುವುದು ಮೊದಲ ಮಹಡಿಯಲ್ಲಿ ಮೇಲೆ ಹೋಗಲು ಲಿಫ್ಟ್ ವ್ಯವಸ್ಥೆ ಇಲ್ಲದೆ ಅವರನ್ನು ಸ್ಟ್ರೆಚ್ಚರ್ ಮೂಲಕ ಮೊದಲ ಮಹಡಿಗೆ ಹೊತ್ತೊಯ್ಯಬೇಕಾಯಿತು.ಅಲ್ಲಿ ಸೂಕ್ತ ವ್ಯವಸ್ಥೆ ಇಲ್ಲದೆ ನಾಲ್ವರು ಸ್ಟ್ರೆಚ್ಚರ್‌ನಲ್ಲಿ ಹಿಡಿದೇ ಅವರಿಂದ ಸಹಿ ಮಾಡಿಸಿ, ನೊಂದಣಿ ಕಾರ್ಯ ಮಾಡಿಸಬೇಕಾಯಿತು. ಮತ್ತೆ ಪ್ರಯಾಸ ಪಟ್ಟು ಅವರನ್ನು ಕೆಳಗೆ ಕರೆತರಲಾಯಿತು.

ಈ ಸಾಹಸ ಕಾರ್ಯ ನೋಡುತ್ತಿದ್ದ ಸಾರ್ವಜನಿಕರು, ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ. ನಿತ್ಯವು ನೂರಾರು ಮಂದಿ ಈ ಕಚೇರಿಗೆ ತಮ್ಮ ಆಸ್ತಿ ನೊಂದಣಿ ಸೇರಿದಂತೆ ಇತರೆ ಕೆಲಸ ಕಾರ್ಯಗಳಿಗೆ ಭೇಟಿ ನೀಡುತ್ತಾರೆ. ಅದರಲ್ಲೂ ವೃದ್ಧರು, ಅಂಗವಿಕಲರು ಮತ್ತು ಗರ್ಭಿಣಿ ಮಹಿಳೆಯರು ಈ ಕಚೇರಿಗೆ ಬಂದರೆ ಮಹಡಿ ಹತ್ತಿ ತಮ್ಮ ಕಾರ್ಯವನ್ನು ಮುಗಿಸಿ ಬರುವಷ್ಟರಲ್ಲಿ ಹೈರಾಣಾಗುತ್ತಾರೆ. ಮೊದಲನೇ ಮಹಡಿಯಲ್ಲಿರುವ ಕಚೇರಿಯನ್ನು ಕೆಳಗೆ ಶಿಫ್ಟ್ ಮಾಡಬೇಕು ಇಲ್ಲವೇ ಇರುವ ಕಚೇರಿಯಲ್ಲಿಯೇ ವೃದ್ಧರು, ಅಂಗವಿಕಲರು ಮತ್ತು ಗರ್ಭಿಣಿ ಮಹಿಳೆಯರು ಬಂದು ಸುಲಭವಾಗಿ ತಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗುವ ವ್ಯವಸ್ಥೆ ಜೊತೆ ಮೂಲ ಸೌಕರ್ಯಗಳನ್ನು ಒದಗಿಸಬೇಕು. ಇದರಿಂದ ಸಾರ್ವಜನಿಕರಿಗೆ ಬಹಳಷ್ಟು ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಮೈಸೂರಿನಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಹುತೇಕ ಸರ್ಕಾರಿ ಕಚೇರಿಗಳ ಸ್ಥಿತಿ ಇದಕ್ಕಿಂತ ಭಿನ್ನವಾಗೇನು ಇಲ್ಲ. ಪ್ರಭಾವಿಗಳ ನೀಡುವ ಕಮಿಷನ್ ಇಲ್ಲವೆ ಮಡಾರಿಗಳ ಪ್ರಭಾವದ ಫಲವಾಗಿ ಇಂತಹ ಕಟ್ಟಡಗಳಲ್ಲಿ ಸರ್ಕಾರಿ ಕಚೇರಿಗಳು ಕಾರ್ಯನಿರ್ವಹಿಸುವಂತಾಗಿದೆ. ಆದರೆ ಇದರಿಂದ ತೆರಿಗೆ ನೀಡುವ ಜನತೆ ಸಂಕಷ್ಟ ಅನುಭವಿಸಬೇಕಾಗಿ ಬಂದಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ
ಭಾನುವಾರ
17-7-2022



ಜುಲೈ 18, ಅಸಾಧಾರಣ ಸಂಗೀತಗಾರರೂ, ಅನನ್ಯ ಸಾಹಿತಿಗಳೂ, ಅಪೂರ್ವ ವಾಗ್ಗೇಯಕಾರರೂ, ಅನುಪಮ ಕಲಾವಿದರೂ, ಅಪ್ರತಿಮ ಆಡಳಿತಗಾರರೂ ಆಗಿ ದೇಶ-ವಿದೇಶಗಳ ಇತರೇ ಮಹಾರಾಜರುಗಳಿಗೆ ಮಾದರಿಯಾಗಿದ್ದ ಮಹಾರಾಜ ಜಯಚಾಮರಾಜ ಒಡೆಯರ್ ಜಯಂತಿ. ತನ್ನಿಮಿತ್ತ ಈ ಲೇಖನ.

ಜನಪರ ಮಹಾರಾಜ
ಜಯಚಾಮರಾಜ ಒಡೆಯರ್



ಬನ್ನೂರು ಕೆ.ರಾಜು
ಮೊ. 9481533167

ಮಹಾರಾಜರಾಗಷ್ಟೇ ಇರದೆ ಸ್ವತಃ ಸಾಹಿತಿಯೂ, ಕೀರ್ತನಕಾರರೂ, ಸಂಗೀತಗಾರರೂ, ವಾಗ್ಗೇಯಕಾರರೂ, ಸಂಸ್ಕೃತ ಪಂಡಿತರೂ, ಜ್ಯೋತಿಷ್ಯಶಾಸ್ತ್ರಜ್ಞರೂ, ಉಪನ್ಯಾಸಕರೂ, ಶಿಕ್ಷಣತಜ್ಞರೂ, ಛಾಯಾ ಚಿತ್ರಕಾರರೂ, ಸಂಶೋಧಕರೂ, ವೇದಾಂತಿಗಳೂ, ತತ್ವಜ್ಞಾನಿಗಳೂ, ದಾರ್ಶನಿಕರೂ ಒಟ್ಟಾರೆ ಮಹಾನ್ ಮಾನವತಾವಾದಿಯಾಗಿದ್ದರು ಜಯಚಾಮರಾಜ ಒಡೆಯರ್. ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಹೋದರ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಹಾಗೂ ಯುವರಾಣಿ ಕೆಂಪು ಚೆಲುವಾಜಮ್ಮಣ್ಣಿಯವರ ಸುಪುತ್ರರಾಗಿ 1919ರ ಜುಲೈ 18 ರಂದು ಜಯಚಾಮರಾಜ ಒಡೆಯರ್ ಜನಿಸಿದರು. ಈ ವೇಳೆ ಬಂಡಿಗಳಲ್ಲಿ ಮೂಟೆಗಟ್ಟಲೆ ಸಕ್ಕರೆಯನ್ನು ನಾಡಿನ ತುಂಬಾ ಊರು ಊರಿಗೆ, ಕೇರಿ ಕೇರಿಗೆ ಹಂಚಲ್ಪಟ್ಟಿದ್ದನ್ನು ಈಗಲೂ ಕಣ್ಣಿಗೆ ಕಟ್ಟಿದಂತೆ ಹಿರಿಯರು ನೆನಪಿಸಿ ಕೊಳ್ಳುತ್ತಾರೆ. ಒಡೆಯರ ಜನನ ಆಗ ಅಂಥ ಸಿಹಿ ಸಂಭ್ರಮವಾಗಿತ್ತು. ವಿಜಯಲಕ್ಷ್ಮಮ್ಮಣ್ಣಿ ಸುಜಯಕಾಂತಮ್ಮಣ್ಣಿ ಹಾಗೂ ಜಯಚಾಮುಂಡಮ್ಮಣ್ಣಿ ಇವರ ಒಡಹುಟ್ಟಿದ ಸಹೋದರಿಯರು. ಕಿರಿಯ ಸಹೋದರಿ ಜಯಚಾಮುಂಡಮ್ಮಣ್ಣಿ ಭರತಪುರದ ರಾಜರಿಗೆ ಮದುವೆಯಾಗಿದ್ದು 1954 ಜುಲೈ 26ರಂದು ನಿಧನ ಹೊಂದಿದರು.

ರಾಜಪರಂಪರೆಯ ಪದ್ಧತಿಯಂತೆ ಅರಮನೆಯ ರಾಯಲ್ ಶಾಲೆಯಲ್ಲೇ ಎಸ್ಸೆಸ್ಸೆಲ್ಸಿ ತನಕ ಕಲಿತ ಜಯಚಾಮರಾಜ ಒಡೆಯರ್ ಇಂಗ್ಲೀಷ್, ಸಂಸ್ಕೃತದೊಂದಿಗೆ ಪ್ರೌಢ ವೇದಾಂತ ಗ್ರಂಥಗಳ ಜ್ಯೋತಿಷ್ಯಶಾಸ್ತ್ರದ ಅಭ್ಯಾಸವನ್ನೂ ನಡೆಸಿದ್ದರು. ಆ ನಂತರ ರಾಜಪುತ್ರರೆಂಬ ಗತ್ತು ದೌಲತ್ತು ಗಾಂಭೀರ್ಯ, ದೊಡ್ಡಸ್ಥಿಕೆ ಇದಾವುದೂ ಇಲ್ಲದೆ ಸಾಮಾನ್ಯ ವಿದ್ಯಾರ್ಥಿಗಳೊಂದಿಗೆ ಬೆರೆತು, ಕಲಿತು ದೊಡ್ಡಪ್ಪ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದಿಂದಲೇ ಕನ್ನಡ, ಇಂಗ್ಲೀಷ್, ಇತಿಹಾಸ, ರಾಜ್ಯಶಾಸ್ತ್ರದೊಂದಿಗೆ 1938ರಲ್ಲಿ ಐದು ಚಿನ್ನದ ಪದಕಗಳ ಜೊತೆ ಬಿ.ಎ. ಪದವಿ ಗಳಿಸಿದರು. ಇವರಿಗೆ ರಾಲೋ, ವಾಡಿಯಾ, ಸತ್ಯಗಿರಿನಾಥ ಅಚ್ಚುಮೆಚ್ಚಿನ ಗುರುಗಳು. ದೊಡ್ಡಪ್ಪ ನಾಲ್ವಡಿಯವರ ಗರಡಿಯಲ್ಲೇ ರಾಜ್ಯಾಡಳಿತದ ಸಕಲ ಪಟ್ಟುಗಳನ್ನೂ ಕಲಿತ ಜಯಚಾಮರಾಜ ಒಡೆಯರ್, ರಾಜಮನೆತನಕ್ಕೆ ಬೇಕಾದ ಎಲ್ಲಾ ಧೀರೋದಾತ್ತ ಗುಣಗಳನ್ನು ಅವರಿಂದಲೇ ಮೈಗೂಡಿಸಿಕೊಂಡಿದ್ದರು. ಅವರು ಅಪ್ಪಟ ಕನ್ನಡ ಪ್ರೇಮಿಯಾದರೂ ಜ್ಞಾನದ ಹಸಿವಿನಿಂದ ಇಂಗ್ಲೀಷ್, ಹಿಂದಿ, ತಮಿಳು, ತೆಲುಗು, ಮಲೆಯಾಳಿ ಹೀಗೆ ಭಾರತದ ಭಾಷೆಗಳಲ್ಲದೆ ದೇಶ ವಿದೇಶಗಳ ಬಹಳಷ್ಟು ಭಾಷೆಗಳನ್ನು ಕಲಿತು ಬಹುಭಾಷಾ ಪಂಡಿತರಾಗಿ ಎಳೆವಯಸ್ಸಿನಲ್ಲೇ ಬಹಳ ಎತ್ತರದ ಜ್ಞಾನ ಶಿಖರವನ್ನು ತಲುಪಿದ್ದರು.

ತಮ್ಮ 18ನೆಯ ವಯಸ್ಸಿಗೆ 1938 ಮೇ 15ರಲ್ಲಿ ಸತ್ಯಪ್ರೇಮ ಕುಮಾರಿ ದೇವಿಯವರನ್ನು ವಿವಾಹವಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ಜಯಚಾಮರಾಜ ಒಡೆಯರ್, ನಂತರದ ದಿನಗಳಲ್ಲಿ ಸತ್ಯಪ್ರೇಮ ಕುಮಾರಿಯವರಿಂದ ತಮಗೆ ಮಕ್ಕಳ ಭಾಗ್ಯ ಲಭಿಸದ ಕಾರಣ ತಮ್ಮ 21ನೇ ವಯಸ್ಸಿಗೆ 1942ರಲ್ಲಿ ತ್ರಿಪುರ ಸುಂದರಮ್ಮಣ್ಣಿಯವರೊಡನೆ ಎರಡನೇ ವಿವಾಹವಾದರು. ಇವರಿಗೆ ಐವರು ಪುತ್ರಿಯರು ಹಾಗೂ ಓರ್ವ ಪುತ್ರ ಸೇರಿದಂತೆ ಒಟ್ಟು ಆರು ಮಕ್ಕಳು. ಅವರುಗಳೆಂದರೆ ಗಾಯಿತ್ರಿದೇವಿ, ಮೀನಾಕ್ಷಿದೇವಿ, ಕಾಮಾಕ್ಷಿದೇವಿ, ವಿಶಾಲಾಕ್ಷಿದೇವಿ, ಇಂದ್ರಾಕ್ಷಿದೇವಿ ಮತ್ತು ಶ್ರೀಕಂಠದತ್ತ ನರಸಿಂಹರಾಜ ಒಡೆಯರು. ಹಿರಿಯ ರಾಜಕುಮಾರಿ ಗಾಯಿತ್ರಿದೇವಿ 1974 ಜೂನ್ 30ರಂದು ನಿಧನರಾದರು.

> **ಜಯಚಾಮರಾಜ ಒಡೆಯರ್‌ರವರು ಸ್ವತಃ ಸಾಹಿತಿಯೂ ಆಗಿದ್ದು ಇವರು ಇಂಗ್ಲೀಷ್‌ನಲ್ಲಿ ರಚಿಸಿದ 'ದತ್ತಾತ್ರೇಯ ದ ವೇ ಅಂಡ್ ದ ಗೋಲ್' ಗೀತೆ ಮತ್ತು ಭಾರತ ಸಂಸ್ಕೃತಿ, ಮತ ಮತ್ತು ಮಾನವ, ಭಾರತೀಯ ಸೌಂದರ್ಯದ ಹಲವು ಮುಖಗಳು, ಆತ್ಮ ಮತ್ತು ಬ್ರಹ್ಮ, ಮತ ಮತ್ತು ಧ್ಯೇಯ ಮುಂತಾದ ಮೌಲಿಕ ಕೃತಿಗಳು ಇವರ ಪಾಂಡಿತ್ಯವನ್ನು ತೆರೆದಿಡುತ್ತವೆ. ಇವು ಆಗಿನ ಕಾಲದಲ್ಲೇ ದೇಶ-ವಿದೇಶಿಯರ ವಿದ್ವಜ್ಜನರ ಗಮನ ಸೆಳೆದು ಜಯಚಾಮರಾಜ ಒಡೆಯರ್ ಸಾಹಿತ್ಯ ಕೀರ್ತಿಯನ್ನು ಜಾಗತಿಕವಾಗಿಯೂ ಬೆಳಗಿದ್ದವು.**

1940 ಮಾರ್ಚ್ 24ರಂದು ಭಾನುವಾರ ರಾತ್ರಿ ಇವರ ತಂದೆ ಕಂಠೀರವ ನರಸಿಂಹರಾಜ ಒಡೆಯರ್ ಮತ್ತು 1940 ಆಗಸ್ಟ್ 3ರ ಶನಿವಾರ ರಾತ್ರಿ ದೊಡ್ಡಪ್ಪ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ನಿಧನಾನಂತರ 1940ರ ಸೆಪ್ಟೆಂಬರ್ 8ರಂದು ವಿಕ್ರಮ ಸಂವತ್ಸರದ ಭಾದ್ರಪದ ಶುಕ್ಲ ಸಪ್ತಮಿಯಂದು 21 ವರ್ಷದ ಜಯಚಾಮರಾಜ ಒಡೆಯರ್ ಪಟ್ಟಾಭಿಷಿಕ್ತರಾದರು. ಆ ಕಾಲಕ್ಕೆ 80 ಲಕ್ಷ ಪ್ರಜೆಗಳ ಕ್ಷೇಮಪಾಲನೆಯ ಜವಾಬ್ದಾರಿಯನ್ನು ಮಹಾಪ್ರಭುಗಳಾಗಿ ಅವರು ಹೊತ್ತಿದ್ದರು. ಆ ಕ್ಷಣದಿಂದ ಅವರು ನಾಡಪ್ರಭುವಾಗಿ ನಾಡಿನ ಸರ್ವತೋಮುಖ ಪ್ರಗತಿಗಾಗಿ ಅಹರ್ನಿಶಿ ದುಡಿಯಲು ಕಂಕಣ ಕಟ್ಟಿ ನಿಂತಿದ್ದರು. ದೊಡ್ಡಪ್ಪ ನಾಲ್ವಡಿಯವರನ್ನು ಮಾದರಿಯನ್ನಾಗಿ ಮಾಡಿಕೊಂಡಿದ್ದ ಅವರು ತಮ್ಮ ದೊಡ್ಡಪ್ಪನಂತೆಯೇ ಪ್ರಜೆಗಳು ಮೆಚ್ಚಿದ ಪ್ರಭುವಾಗಿ ಎಲ್ಲದರಲ್ಲೂ ಸೈ ಎನಿಸಿಕೊಂಡರು. ದೊಡ್ಡಪ್ಪನಷ್ಟು ಸುದೀರ್ಘಕಾಲ ಆಳ್ವಿಕೆ ನಡೆಸುವ ಅವಕಾಶ ಮತ್ತು ಅದೃಷ್ಟ ಇವರಿಗಿರಲಿಲ್ಲ. ಆದರೆ ಇದ್ದಷ್ಟು ಕಾಲ ಅಂದರೆ ಕೇವಲ ಏಳು ವರ್ಷಗಳಲ್ಲಿ ರಾಜ್ಯಕ್ಕೆ ಇವರಿತ್ತ ಕೊಡುಗೆ ಅಪಾರ. ಅದರಲ್ಲೂ ಕನ್ನಡ ನಾಡು, ನುಡಿ, ಕಲೆ, ಸಾಹಿತ್ಯ, ಸಂಗೀತ, ಶಿಲ್ಪ, ಸಂಸ್ಕೃತಿ, ನಾಟಕ, ದೃಶ್ಯ... ಹೀಗೆ ಒಟ್ಟಾರೆ ಕನ್ನಡದ ಅಭಿವೃದ್ಧಿಗೆ ಶ್ರಮಿಸಿ 'ಕನ್ನಡ ಕಣ್ಮಣಿ'ಯಾಗಿದ್ದರು.

ಕರ್ನಾಟಕ ಸಂಗೀತ ಮತ್ತು ಪಾಶ್ಚಾತ್ಯ ಸಂಗೀತಗಳೆರಡರಲ್ಲೂ ಪ್ರಭುತ್ವ ಸಾಧಿಸಿದ್ದ ಜಯಚಾಮರಾಜ ಒಡೆಯರ್ ಶ್ರೇಷ್ಠ ಪಿಯಾನೊ ವಾದಕರಾಗಿದ್ದರು. ಪೈಪ್ ಆರ್ಗನ್ ನುಡಿಸುವುದರಲ್ಲಿ ನಿಸ್ಸೀಮರಾಗಿದ್ದರು. ಪಾಶ್ಚಾತ್ಯ ಸಂಗೀತದ ಘಟಾನುಘಟಿಗಳಾದ ವ್ಯಾಗ್ನರ್, ಮೆಹ್ಲರ್, ಬಾಬ್, ಬಿಥೋವನ್ ಮುಂತಾದವರ ಬಗ್ಗೆ ಒಲವು ಹೊಂದಿದ್ದ ಒಡೆಯರ್‌ರವರು 1937ರಲ್ಲಿ ಲಂಡನ್‌ನ ಗಿಲ್ಡ್‌ಹಾಲ್ ಸ್ಕೂಲ್ ಆಫ್ ಮ್ಯೂಸಿಕ್‌ನ ಲೈಸೆನ್ಸಿಯೇಟ್ ಪದವೀಧರರಾಗಿದ್ದು, 1945ರಲ್ಲಿ ಕಾಲೇಜ್ ಆಫ್ ಮ್ಯೂಸಿಕ್‌ನಲ್ಲಿ ಲಂಡನ್‌ನ ಆನರರಿ ಫೆಲೋ ಪದವಿಗೆ ಪಾತ್ರರಾಗಿದ್ದರಲ್ಲದೆ, ಭಾರತದ ಕೇಂದ್ರಸಂಗೀತ ಮತ್ತು ನಾಟಕ ಅಕಾಡೆಮಿಯ ಮೊದಲ ಅಧ್ಯಕ್ಷರಾಗಿದ್ದ ಹೆಗ್ಗಳಿಕೆ ಇವರ ಹೆಸರಿನಲ್ಲಿದೆ. ಇವರ ಅಗಾಧವಾದ ಸಂಗೀತ ಪ್ರತಿಭೆಗೆ 1965ರಲ್ಲಿ ಹಂಪೆಯಲ್ಲಿ ನಡೆದ ಪ್ರತಿಷ್ಠಿತ ಪುರಂದರದಾಸರ ಚತುರ್ಥ ಶತಮಾನೋತ್ಸವದ ಅಧ್ಯಕ್ಷತೆಯ ಗೌರವ ಕಿರೀಟ ಇವರ ಸಿರಿಮುಡಿಗೇರಿತ್ತು.

ಇಂದಿಗೂ ಪೊಲೀಸ್ ಬ್ಯಾಂಡ್, ಪ್ಯಾಲೇಸ್ ಬ್ಯಾಂಡ್ ಎಂದು ಬಹು ಪ್ರಸಿದ್ಧಿಯಾಗಿರುವ ಮೈಸೂರಿನಲ್ಲಿರುವ ಕರ್ನಾಟಕ ಸರ್ಕಾರದ 'ಪೊಲೀಸ್ ವಾದ್ಯವೃಂದ'ವು ಜಯ ಚಾಮರಾಜ ಒಡೆಯರ್ ಅವರ ಪ್ರೋತ್ಸಾಹದ ಫಲವಾಗಿದ್ದು ದಕ್ಷಿಣ ಭಾರತದಲ್ಲೇ ಇದು ಏಕೈಕವೆನಿಸಿದೆ. ನಾಡಿನ ವಿವಿಧ ಕಡೆಗಳಿಂದ ಆಯ್ಕೆಯಾದ 350 ಮಂದಿ ಸಂಗೀತಗಾರರ ಪೊಲೀಸ್ ವಾದ್ಯವೃಂದಕ್ಕೆ ಜಯ ಚಾಮರಾಜ ಒಡೆಯರೇ ಸ್ಫೂರ್ತಿ. ಇವರ ಒತ್ತಾಸೆಯಿಂದ ಪ್ರಾರಂಭವಾದ ಈ ವಿಶೇಷ ವಾದ್ಯವೃಂದಕ್ಕೆ ಫ್ರಾನ್ಸಿನ ಖ್ಯಾತ ಸಂಗೀತಗಾರ ಡಿಫ್ರಿಜ್ ಮೊದಲ ಬ್ಯಾಂಡ್ ಮಾಸ್ಟರ್ ಆಗಿದ್ದರು. ಪ್ರಾರಂಭದಲ್ಲಿ ಪಾಶ್ಚಾತ್ಯ ಸಂಗೀತವನ್ನಷ್ಟೇ ನುಡಿಸುತ್ತಿದ್ದ ಈ ವಾದ್ಯವೃಂದಕ್ಕೆ ಒಡೆಯರು ಕರ್ನಾಟಕ ಸಂಗೀತವನ್ನೂ ಸೇರಿಸಿ ಪೂರ್ವ-ಪಶ್ಚಿಮದ ರಾಗ ಸಂಗಮ ಮಾಡಿದ್ದು, ಇದರಿಂದ ಇದರ ಇಂಪು ಇನ್ನಷ್ಟು ಹೆಚ್ಚಾಗಿ ಕೇಳುಗರು ರೋಮಾಂಚನಗೊಳ್ಳುವಂತಾಯಿತು. ಹಾಗಾಗಿ ಇಂದಿಗೂ ಸಹ ಪ್ಯಾಲೇಸ್ ಬ್ಯಾಂಡ್ ಅರ್ಥಾತ್ ಪೊಲೀಸ್ ಬ್ಯಾಂಡ್ ತನ್ನ ಆಕರ್ಷಣೆಯನ್ನು ಉಳಿಸಿಕೊಂಡಿದೆ. ಇದರ ಸಂಗೀತದ ಖದರ್ರೇ ಖದರ್, ಅದು ಬೇರೆ ಯಾವ ವಾದ್ಯವೃಂದಕ್ಕೂ ಬರಲಾರದು!

ಭಾರತೀಯ ಸಂಸ್ಕೃತಿಯ ರಾಯಭಾರಿಯಾಗಿ, ಸ್ಕೌಟ್ ಮಹಾರಾಜರೆನಿಸಿ 1942ರಲ್ಲಿ ಕಾಶಿ ವಿಶ್ವವಿದ್ಯಾನಿಲಯದಿಂದ ಎಲ್.ಎಲ್.ಬಿ. ಪದವಿ, 1945 ರಲ್ಲಿ ಬ್ರಿಟಿಷ್ ಚಕ್ರಾಧಿಪತ್ಯದ ಜೆಸಿಎಸ್‌ಐ, 1958ರಲ್ಲಿ ಜಿಸಿಬಿ ಗೌರವಗಳನ್ನು ಹಾಗೂ 1945ರಲ್ಲಿ ಅಣ್ಣಾಮಲೈ ವಿಶ್ವವಿದ್ಯಾನಿಲಯದಿಂದ ಡಿ.ಲಿಟ್ ಪದವಿಗೆ ಪಾತ್ರರಾಗಿ ವಿದ್ವತ್ತಿನ ಮೇರುಪರ್ವತವಾಗಿದ್ದ ಜಯಚಾಮರಾಜ ಒಡೆಯರ್‌ರವರು ಉತ್ತಮ ವಾಗ್ಮಿಗಳೂ ಆಗಿದ್ದರು. ದೇಶದಲ್ಲಷ್ಟೇ ಅಲ್ಲದೆ ವಿದೇಶಗಳಲ್ಲೂ ತಮ್ಮ ವಿದ್ವತ್‌ಪೂರ್ಣ ಭಾಷಣಗಳಿಂದ ಎಲ್ಲರ ಮೆಚ್ಚಿನ ಮಹಾರಾಜರಾಗಿದ್ದರು. ಸ್ವಾತಂತ್ರ್ಯ ಹೋರಾಟ ದೇಶದಲ್ಲಿ ತೀವ್ರವಾಗಿ ನಡೆಯುತ್ತಿದ್ದಾಗಲೇ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಕಾರಣರಾಗಿ ಒಡೆಯರ್‌ರವರು ತಮ್ಮ ಆಶ್ರಯದಲ್ಲೇ ಕೆ.ಸಿ.ರೆಡ್ಡಿಯವರ ನೇತೃತ್ವದ ಸಚಿವ ಸಂಪುಟದ ರಚನೆಗೂ ಕಾರಣಕರ್ತರಾಗಿ ಇತಿಹಾಸ ನಿರ್ಮಿಸಿದ್ದರು.

1947 ಆಗಸ್ಟ್ 15ರಂದು ದೇಶ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯದ ಗಾಳಿ ಕುಡಿದಾಗ ಸಿಂಹಾಸನದಿಂದ ಕೆಳಗಿಳಿದ ಜಯಚಾಮರಾಜ ಒಡೆಯರ್, ಬದಲಾದ ವ್ಯವಸ್ಥೆಗೆ ಬಹುಬೇಗ ಹೊಂದಿಕೊಂಡರು. ಸ್ವಾತಂತ್ರ್ಯ ನಂತರ ಭಾರತದ ಅದೆಷ್ಟೋ ಸಂಸ್ಥಾನಗಳ ಮಹಾರಾಜರು ಪ್ರಭುತ್ವವನ್ನು ತ್ಯಜಿಸಿದ್ದರು. ಆಗ ಮಹಾರಾಜರ ಜಂಬೂ ಸವಾರಿಯ ವಿಶ್ವವಿಖ್ಯಾತ ಮೈಸೂರು ದಸರಾ ಕೂಡ ಜನತಾ ದಸರೆಯಾಗಿ ಮಾರ್ಪಾಡು ಹೊಂದಿತು. 1948 ರಿಂದ 1956ರವರೆಗೆ ರಾಜ ಪ್ರಮುಖರಾಗಿದ್ದ ಒಡೆಯರು ನಂತರ ಏಕೀಕೃತ ಕರ್ನಾಟಕದ ಮೊದಲ ರಾಜ್ಯಪಾಲರಾಗಿ, ಭಾರತದ ಮೊದಲ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದ್‌ರ ಸಮ್ಮುಖದಲ್ಲಿ 1956ರ ನವೆಂಬರ್ 1 ರಂದು ಪ್ರಮಾಣವಚನ ಸ್ವೀಕರಿಸಿದರು. ಒಂದು ರೀತಿಯಲ್ಲಿ ಅವರ ಪ್ರಭುತ್ವ ಹೋದರೂ ಮತ್ತೊಂದು ರೀತಿಯಲ್ಲಿ ಅವರು ತಾವು ಬದುಕಿರುವ ತನಕವೂ ಪ್ರಭುಗಳಾಗಿಯೇ ಬದುಕಿದ್ದರು. ಏಕೆಂದರೆ ಅವರು ಕೇವಲ ಮಹಾರಾಜರಾಗಿರಲಿಲ್ಲ. ಅದಕ್ಕೂ ಮೀರಿದ ಪ್ರಭುತ್ವವನ್ನು ಅವರು ಸಂಪಾದಿಸಿಕೊಂಡಿದ್ದರು. ರಾಷ್ಟ್ರಕವಿ ಕುವೆಂಪುರವರು ಜಯಚಾಮರಾಜ ಒಡೆಯರ್‌ರವರ ಕುರಿತು ಒಂದು ಕಡೆ ಹೇಳಿರುವ ಮಾತುಗಳಿವು – "ಎಲ್ಲರೂ ಸಿಂಹಾಸನವನ್ನೇರಿ ಮಹಾರಾಜರಾದರೆ ಇವರು ಸಿಂಹಾಸನದಿಂದ ಇಳಿದು ಮಹಾರಾಜರಾಗಿದ್ದಾರೆ".

ಜಯಚಾಮರಾಜ ಒಡೆಯರ್ 1974ರ ಸೆಪ್ಟೆಂಬರ್ 23ರಂದು ಬೆಂಗಳೂರು ಅರಮನೆಯಲ್ಲಿ ಕೊನೆಯುಸಿರೆಳೆದರು. ಕಾಕತಾಳೀಯವೆಂದರೆ ಇವರ ದೊಡ್ಡಪ್ಪ ನಾಲ್ವಡಿ ಕೃಷ್ಣರಾಜ ಒಡೆಯರ್ ಕೂಡ 1940 ರಲ್ಲಿ ಇದೇ ಬೆಂಗಳೂರು ಅರಮನೆಯಲ್ಲಿ ಪ್ರಾಣ ಬಿಟ್ಟಿದ್ದರು. ಇನ್ನೊಂದು ಆಶ್ಚರ್ಯಕರ ವಿಚಾರವೆಂದರೆ ಶಂಕರ ಭಗವತ್ಪಾದರ ಸಿದ್ಧಾಂತಗಳಲ್ಲಿ ನಂಬಿಕೆಯಿಟ್ಟಿದ್ದ ಜಯಚಾಮರಾಜ ಒಡೆಯರ್ ನಿಧನರಾಗುವ ಒಂದೆರಡು ದಿನಗಳ ಮುಂಚೆ ಶೃಂಗೇರಿ ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಿ, ಅಲ್ಲಿನ ಪವಿತ್ರ ತಾಣವಾದ ಶ್ರೀ ಶಂಕರಮಠವನ್ನೂ, ತಾಯಿ ಶೃಂಗೇರಿ ಶಾರದೆಯ ದರ್ಶನ ಮಾಡಿ ಬಂದಿದ್ದರು.



ವಾರಭವಿಷ್ಯ
17.7.2022 ರಿಂದ 23.7.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ-ಕಟಕ, ಚಂದ್ರ-ಕುಂಭ, ಮೀನ, ಮೇಷ, ವೃಷಭ, ಕುಜ-ಮೇಷ, ಬುಧ-ಕಟಕ, ಗುರು-ಮೀನ, ಶುಕ್ರ-ಮಿಥುನ, ಶನಿ-ಮಕರ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದ ಪೂರ್ವಾರ್ಧದಲ್ಲಿ ಐಷಾರಾಮಿ ವಸ್ತುಗಳ ಖರೀದಿ. ಮಹಿಳಾ ಮಣಿಯರು ಪ್ರಸಾಧನ, ಶೃಂಗಾರ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯಿಸುವರು. ನಿಮ್ಮ ಕಾರ್ಯ ತಂತ್ರಗಳೇ ನಿಮಗೆ ಹೊರೆ ಎನಿಸಲಿದೆ. ಸರ್ಕಾರಿ ಅಧಿಕಾರಿಗಳಿಗೆ ಪದಭ್ರಷ್ಟತೆಯ ಭಯ ಕಾಡಿಸುವುದು. ವಿದ್ಯಾರ್ಥಿಗಳಿಗೆ ಪರಿಶ್ರಮವಿಲ್ಲದೆ ಪ್ರತಿಫಲ ದೊರೆಯದು. ವಾರಾಂತ್ಯಕ್ಕೆ ವಿದ್ವತ್ತಿನಿಂದ ಧನಾಗಮನ. ಸತ್ಕಾರ್ಯ ಪ್ರವೃತ್ತಿ. – ಶ್ರೀಲಕ್ಷ್ಮೀನೃಸಿಂಹ ಕರಾವಲಂಬನ ಸ್ತೋತ್ರಪಠಣ, ಶುಭಸಂಖ್ಯೆ–4.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಹೊಸ ಹುರುಪಿನಿಂದ ಸ್ವಂತ ಕೆಲಸಗಳನ್ನು ಸಂಪನ್ನಗೊಳಿಸಿಕೊಳ್ಳುವಿರಿ. ವ್ಯಾಪಾರ ವಹಿವಾಟುಗಳು ಪ್ರಗತಿಯ ಹಾದಿಯಲ್ಲಿ ಸಾಗುವುದು. ಸ್ತ್ರೀ ಸುಖ ಹಾಗೂ ವಿಲಾಸ ಜೀವನ. ಸರ್ಕಾರಿ ನೌಕರರಿಗೆ ಬಡ್ತಿ ಯೋಗ ಉಂಟು. ವಧು-ವರಾನ್ವೇಷಣೆ ಮುಂದುವರಿಯಲಿದೆ. ಮನೆಯಲ್ಲಿ ಮಂಗಳ ಕಾರ್ಯ ಜರುಗುವುದು. ವೈಶ್ವದೇವಾದಿ ಸತ್ಕರ್ಮಾನುಷ್ಠಾನ. ಸಾವಯವ ಧಾನ್ಯ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ಸ್ನಾಯು ದೌರ್ಬಲ್ಯ ಕಾಡುವುದು. – ಶ್ರೀದೇವೀ ಉಪಾಸನೆ, ಶುಭಸಂಖ್ಯೆ–2.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಮೃಗಶಿರಾ ನಕ್ಷತ್ರದವರಿಗೆ ವಿಶೇಷ ಧನಲಾಭ, ಪ್ರಿಯ ಜನರೊಂದಿಗೆ ಮಧುರ ಬಾಂಧವ್ಯ. ವಿದ್ಯಾಪ್ರಸಂಗಗಳಲ್ಲಿ ಪ್ರಶಸ್ತಿ ಪ್ರಾಪ್ತಿ. ಐಟಿ ಬಿಟಿಯವರಿಗೆ ವರಮಾನದಲ್ಲಿ ಹೆಚ್ಚಳ. ಸಂದರ್ಭೋಚಿತವಾದ ಮಾತಿನಿಂದ ಕಾರ್ಯಸಾಧನೆ. ಲೆಕ್ಕ ಪರಿಶೋಧಕರಿಗೆ ಹೊಸ ಕಕ್ಷಿದಾರರು ದೊರೆಯುವರು. ನ್ಯಾಯಾಲಯ ವ್ಯವಹಾರಗಳು ನಿಮ್ಮ ಪರವಾಗಿ ಇರದು. ಆರೋಗ್ಯವನ್ನು ಕಾಪಾಡಿಕೊಳ್ಳಿ. ದೂರ ಪ್ರಯಾಣಗಳನ್ನು ಅವಾಯ್ಡ್ ಮಾಡಿ. – ಶ್ರೀ ಸತ್ಯನಾರಾಯಣ ದರ್ಶನ, ಶುಭಸಂಖ್ಯೆ–8.

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)
ವಾರದಾರಂಭಕ್ಕೆ ಉತ್ತಮ ಕೆಲಸಗಳಿಂದ ಜನಾದರ ಗಳಿಸುವಿರಿ. ಆಸ್ತಿ ಸಂಪಾದನೆಯಲ್ಲಿ ಹಿತೈಷಿಗಳ ಸಹಕಾರ ಹಸ್ತ ದೊರೆಯುವುದು. ಭಾಗ್ಯಸ್ಥಾನ ಗುರುವಿನಿಂದ ಟೈಂ ಟೈಂಗೆ ಹಣ ಒದಗಿ ಬರುವುದು. ಪ್ರಯತ್ನಪಟ್ಟ ಶುಭ ಕಾರ್ಯಗಳು ಸಫಲತೆಯನ್ನು ಹೊಂದುವುದು. ಉತ್ತಮ ಸ್ತ್ರೀ ಸಂಗ, ಸಾಂಸಾರಿಕವಾಗಿ ತೃಪ್ತಿಕರ ಜೀವನ ಸಾಗಿದರೂ, ಅಷ್ಟಮ ಶನಿದೇವ ಮಹತ್ತರ ಕೆಲಸಗಳಲ್ಲಿ ಅಡಚಣೆಗಳನ್ನು ತರುವನು. – ಶ್ರೀ ಪದ್ಮಾವತಿ ಸ್ತೋತ್ರ ಪಠಿಸಿ, ಶುಭಸಂಖ್ಯೆ–3.

ಸಿಂಹ (ಮ.ಮಿ.ಮು.ಮೆ.ಮೆ.ಟ.ಟಿ.ಟು.ಟೆ)
ಸಪ್ತಾಹದ ಆದಿಗೆ ಚಂದ್ರಗ್ರಹದ ಶುಭ ಸಂಚಾರ ನಿಮ್ಮ ಅಭಿವೃದ್ಧಿಗೆ ಪೂರಕವಾಗುವುದು. ಅರಳೆ ಹಾಗೂ ಎಳ್ಳು ವ್ಯಾಪಾರ ತೇಜಿಯಾಗಿ ನಡೆಯುವುದು. ವಕ್ರೀ ಶನಿದೇವನಿಂದ ಋಣಮುಕ್ತರಾಗುವಿರಿ ಹಾಗೂ ಶತ್ರುಗಳ ಮೇಲೆ ವಿಜಯವನ್ನು ಸಾಧಿಸುವಿರಿ. ರಾಜಕೀಯ ರಂಗದವರಿಗೆ ವಿರೋಧಿಗಳ ಉಪಟಳದಿಂದ ಹಿನ್ನಡೆ ಉಂಟಾಗುವುದು. ವಾರಾಂತ್ಯಕ್ಕೆ ಶಾರೀರಿಕ, ಮಾನಸಿಕ ಒತ್ತಡದಿಂದ ಜರ್ಝರಿತರಾಗುವಿರಿ. – ಶ್ರೀ ಸೂರ್ಯಾಷ್ಟಕ ಪಠಿಸಿ, ಶುಭಸಂಖ್ಯೆ–5.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಗುರುಕೃಪೆಯಿಂದ ನಿಮ್ಮ ಮಹತ್ವದ ಕೆಲಸ ಕಾರ್ಯಗಳು ನಿಗದಿತ ಸಮಯಕ್ಕೆ ಸಂಪನ್ನಗೊಳ್ಳುವುದು. ಗುತ್ತಿಗೆದಾರರಿಗೂ, ಸಣ್ಣ ಉದ್ಯಮಪತಿಗಳಿಗೂ ಉತ್ತಮ ಧನಲಾಭವಾಗುವುದು. ಸ್ಥಿರಾಸ್ತಿ ಖರೀದಿಗೆ ಬ್ಯಾಂಕ್ ಸಾಲಕ್ಕೆ ಪ್ರಯತ್ನ ಪಡಬಹುದು. ಪ್ರೀತಿ, ಪ್ರಣಯ ವಿಚಾರಗಳಲ್ಲಿ ಉಂಟಾಗಿದ್ದ ಕಸಿವಿಸಿಗಳು ನಿವಾರಣೆಯಾಗುವುದು. ಮಠಮಾನ್ಯ ಗುರುಗಳ ಭೇಟಿಯಿಂದ ಧನ್ಯತಾ ಭಾವ. ಸಣ್ಣಪುಟ್ಟ ಶಸ್ತ್ರಚಿಕಿತ್ಸೆ ಉಂಟಾಗಬಹುದು. – ಶ್ರೀ ವಿಷ್ಣು ನಾಮಸ್ಮರಣೆ, ಶುಭಸಂಖ್ಯೆ–1.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಗ್ರಹಗಳು ಕಾಲಾಧೀನವಾಗಿವೆ. ಬಯಸಿದ್ದೆಲ್ಲಾ ಸಿಗುವುದಿಲ್ಲ. ಸಿಕ್ಕಿದ್ದನ್ನೇ ಬಳಸಿಕೊಳ್ಳುವುದು ಜಾಣತನ. ಕೋರ್ಟ್, ಕಚೇರಿಗಳಿಗೆ ವೃಥಾ ಅಲೆದಾಟ, ಅಧಿಕಾರಿಗಳಿಂದ ಬೇಸರ. ವಾರದ ಉತ್ತರಾರ್ಧದಲ್ಲಿ ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ಆದಾಯ. ಸ್ವಾತಿ ನಕ್ಷತ್ರದವರು ಸಾಲ ಕೊಟ್ಟು ಕೈ ಸುಟ್ಟುಕೊಳ್ಳುವರು. ಹೊಸ ಬಂಡವಾಳ ಹೂಡುವಾಗ ಹಲವು ಬಾರಿ ಯೋಚಿಸಿ ಮುಂದಡಿ ಇಡಿ. ವಿಷಾಹಾರದಿಂದ ಜಾಗ್ರತರಾಗಿರಿ. – ಶ್ರೀ ಚಾಮುಂಡಿ ದರ್ಶನ, ಶುಭಸಂಖ್ಯೆ–7.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ವಾರದ ಪೂರ್ವಾರ್ಧದಲ್ಲಿ ಬೃಹಸ್ಪತಿ ಕೃಪೆಯಿಂದ ಉದ್ಯೋಗ, ವ್ಯವಹಾರಗಳು ಲಾಭದಾಯಕವಾಗಿ ನಡೆಯುವುದು. ಶಿಕ್ಷಣ ಕ್ಷೇತ್ರದವರಿಗೆ ಸರ್ಕಾರದಿಂದ ಪ್ರಶಸ್ತಿ ಪುರಸ್ಕಾರಗಳು ದೊರೆಯುವುದು. ವಿವಾಹ ಯೋಗ್ಯರಿಗೆ ಸೂಕ್ತ ವಧು-ವರ ದೊರೆಯುವ ಸಾಧ್ಯತೆ ಇರುತ್ತದೆ. ನೆರೆಹೊರೆಯಲ್ಲಿ ಆಸ್ತಿ ಸಂಬಂಧ ವಾದ-ವಿವಾದಗಳು ಉಂಟಾದೀತು. ಆಪ್ತಮಿತ್ರರಲ್ಲಿ ಕಷ್ಟ-ಸುಖ ಹಂಚಿಕೊಳ್ಳಿ. ಕರುಳು ಸಂಬಂಧಿ ಕಾಯಿಲೆ ಕಾಡಬಹುದು. – ಶ್ರೀ ಗಣಪತಿ ಸೇವೆ, ಶುಭಸಂಖ್ಯೆ–3.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಈ ಸಪ್ತಾಹದಲ್ಲಿ ಆದಾಯ ಹೆಚ್ಚಾದಂತೆ ಖರ್ಚುಗಳೂ ಹೆಚ್ಚಾಗುವುದು. ಬದುಕಿನಲ್ಲಿ ಹೊಸ ತಿರುವು ಬರುವ ಸಾಧ್ಯತೆ. ಪ್ರಭಾವಿ ವ್ಯಕ್ತಿಗಳ ಸಂಪರ್ಕದಿಂದ ಕಾರ್ಯ ಸಾಧನೆ. ರಾಜಕಾರಣಿಗಳಿಗೆ ಶುಭಯೋಗವಿದೆ. ಸತಿ-ಸುತರು ಎದುರಾಡುವುದರಿಂದ ಮನಸ್ಸಿಗೆ ಬೇಸರ. ವೃಥಾ ಅಪವಾದಗಳಿಗೆ ಗುರಿಯಾಗುವಿರಿ. ಕೃಷಿಕರಿಗೆ ಉತ್ತಮ ಫಸಲು ಹಾಗೂ ಬೆಲೆ ದೊರೆಯುವುದು. ವಾರಾಂತ್ಯಕ್ಕೆ ಕುಟುಂಬದೊಂದಿಗೆ ದೇವಾಲಯಕ್ಕೆ ಪ್ರಯಾಣ –ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ, ಶುಭಸಂಖ್ಯೆ–2.

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)
ನಾನಾ ರೀತಿಯಿಂದ ಧನಲಾಭವಾಗುವುದು. ಹಲವರಿಗೆ ವಾಹನ ಖರೀದಿ ಯೋಗವಿದೆ. ಕೃಷಿ ಉಪಕರಣ, ರಾಸಾಯನಿಕಗಳ ಮಾರಾಟಗಾರರಿಗೆ ಹೆಚ್ಚಿನ ಧನಲಾಭ. ಸರ್ಕಾರಿ ನೌಕರರಿಗೆ ಬೇಡದ ಸ್ಥಾನಕ್ಕೆ ವರ್ಗವಾಗಬಹುದು. ಮಕರಕ್ಕೆ ಸಮಸಪ್ತಕದಲ್ಲಿ ರವಿ ಸಂಚಾರವಿದ್ದು, ಪಾಲುದಾರಿಕೆ ವ್ಯವಹಾರಗಳಲ್ಲಿ ಕಲಹ, ನಷ್ಟಗಳು ಸಂಭವಿಸಬಹುದು. ಮನೆಯಲ್ಲಿ ಹಿರಿಯರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಗ್ಯಾಸ್ ಟ್ರಬಲ್ ಕಾಡಬಹುದು. – ಶ್ರೀ ಹನುಮಾನ್ ಚಾಲೀಸ ಪಠಿಸಿ, ಶುಭಸಂಖ್ಯೆ–9.


ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ವಾರದ ಆದಿಗೆ ನಿಮ್ಮ ರಾಶಿಗೆ ಪ್ರವೇಶಿಸುವ ಚಂದ್ರನಿಂದ ನವ ಉಲ್ಲಾಸ. ಶುಭ ಕಾರ್ಯಕ್ಕೆ ಪ್ರೇರಣೆ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆದೀತು. ಮುತ್ತು, ಹವಳ ಮಾರಾಟಗಾರರಿಗೆ ಉತ್ತಮ ಧನಲಾಭವಾಗುವುದು. ಕ್ಷೀರೋತ್ಪನ್ನ ವ್ಯವಸಾಯಗಳಿಗೆ ಪಶು ಸಂಪತ್ತು ಹೆಚ್ಚುವುದು. ಹಳೆಯ ಸಾಲ ತಿರುವಳಿಗೆ ಪ್ರಯತ್ನ ಪಡುವಿರಿ. ಪಿತೃಸಮಾನ ವ್ಯಕ್ತಿಯ ವಿಯೋಗವಾದೀತು. ವಾರಾಂತ್ಯಕ್ಕೆ ನಿಮ್ಮ ಆರೋಗ್ಯ ಕೈ ಕೊಡಬಹುದು. – ಶ್ರೀ ಲಿಂಗಾಷ್ಟಕ ಪಠಿಸಿ, ಶುಭಸಂಖ್ಯೆ–5.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಚಂದ್ರ ಗ್ರಹ ಕೃಪೆಯಿಂದ ಹಣಕಾಸಿನ ಪರಿಸ್ಥಿತಿಯಲ್ಲಿ ಕೊರತೆ ಏನೂ ಕಾಣದು. ಕಲಾಕ್ಷೇತ್ರದವರಿಗೂ, ಸೃಜನಶೀಲರಿಗೂ ಶುಭ ವಾರ ಹಾಗೂ ಉತ್ತಮ ಫಲ. ವಾರ ಮಧ್ಯೆ ಆತ್ಮೀಯ ಗೆಳೆಯರ ಸಂಪರ್ಕದಿಂದ ಹರುಷ. ಗುರು ಜನರ ಆಶೀರ್ವಾದ ದೊರಕುವುದು. ಆಸ್ತಿ ವಿಚಾರಗಳು ಇತ್ಯರ್ಥವಾಗದೆ ಬೇಸರವಾಗುವುದು. 'ಚತುರತೆಗಿಂತ ವಿಧಿಯಾಟ ಮೇಲು' ಆರೋಗ್ಯದಲ್ಲಿ ಸ್ಥಿರತೆ ಕಾರಣ ವೈದ್ಯರ ಭೇಟಿ. – ಶ್ರೀ ದತ್ತಗುರು ಆರಾಧನೆ, ಶುಭಸಂಖ್ಯೆ–6.

ಮಕ್ಕಳ ಚಿತ್ರ ಕಥೆ

ಹನುಮ ಉತ್ತರಿಸಿದ್ದು ಹೀಗೆ..!

–ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ಸಿದ್ದರಾಮಯ್ಯ ಕೊಡಗು ಭೇಟಿ ಮುಂದೂಡಿಕೆ



ಮಡಿಕೇರಿ,ಜು.16– ಕೊಡಗು ಜಿಲ್ಲೆಯ ಪ್ರವಾಹ ಪೀಡಿತ ಹಾಗೂ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಉದ್ದೇಶಿತ ಭೇಟಿ ಮುಂದೂಡಲಾಗಿದೆ.ಅವರು ಜು.19 ರಂದು ಮಡಿಕೇರಿಗೆ ಆಗಮಿಸಿ ವಾಸ್ತವ್ಯ ಹೂಡಿ, ಜು.20ರಂದು ಕೊಡಗಿನ ವಿವಿಧ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಆದರೆ ಕಾರಣಾಂತರಗಳಿಂದ ಸಿದ್ದರಾಮಯ್ಯ ಅವರ ಕೊಡಗು ಭೇಟಿ ಮುಂದೂಡಲಾಗಿದೆ ಎಂದು ಕೊಡಗು ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಮಳೆಗೆ 8 ಮನೆಗಳು ಹಾನಿ

● 452 ಮಂದಿ ಕಾಳಜಿ ಕೇಂದ್ರಕ್ಕೆ ಸ್ಥಳಾಂತರ ● 4 ಜಾನುವಾರುಗಳ ಸಾವು

ಮಡಿಕೇರಿ,ಜು.16– ಕೊಡಗು ಜಿಲ್ಲೆಯಲ್ಲಿ ಭಾರೀ ಗಾಳಿ ಸಹಿತ ಮಳೆ ಸುರಿದ ಹಿನ್ನೆಲೆಯಲ್ಲಿ ಕಳೆದ 24 ಗಂಟೆ ಅವಧಿಯಲ್ಲಿ 8 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಜಿಲ್ಲೆಯ ವಿವಿಧ ಕಡೆಗಳಲ್ಲಿ 127 ಕುಟುಂಬಗಳ 452 ಮಂದಿಯನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಹೆಚ್ಚುವರಿ 2 ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದ್ದು, 452 ಮಂದಿ ಆಶ್ರಯ ಪಡೆದಿದ್ದಾರೆ.

ಮಳೆ ಗಾಳಿಗೆ ಕಳೆದ 24 ಗಂಟೆ ಅವಧಿಯಲ್ಲಿ 134 ವಿದ್ಯುತ್ ಕಂಬಗಳಿಗೆ ಹಾನಿಯಾಗಿದ್ದು, 13.40 ಲಕ್ಷ ರೂ. ನಷ್ಟವಾಗಿದೆ. 193 ಸೇತುವೆಗಳಿಗೆ ಹಾನಿಯಾಗಿದ್ದು, ಮಳೆ ಗಾಳಿಗೆ 4 ಜಾನುವಾರುಗಳು ಜೀವ ತೆತ್ತಿವೆ.

ಮಳೆಯಿಂದ ಕೆಲವು ತಗ್ಗು ಪ್ರದೇಶಗಳಲ್ಲಿ ಪ್ರವಾಹ ನೀರು ನಿಂತಿದ್ದು, ವಿದ್ಯುತ್ ಲೈನ್‌ಗಳ ದುರಸ್ತಿ ದೊಡ್ಡ ಸವಾಲಾಗಿ ಪರಿಣಮಿಸಿತ್ತು. ವಿರಾಜಪೇಟೆ ತಾಲೂಕಿನ ವಿವಿಧ ಗ್ರಾಮಗಳಿಗೆ ವಿದ್ಯುತ್ ಪೂರೈಸುವ 11 ಕೆ.ವಿ ಮಾರ್ಗಕ್ಕೆ ಬೇಟೋಳಿ ಬಳಿ ಹಾನಿಯಾಗಿ ದುರಸ್ತಿ ಕಾರ್ಯಕ್ಕೆ ಕಾವೇರಿ ನದಿ ನೀರು ಪ್ರವಾಹ ಅಡ್ಡಿಯಾಗಿತ್ತು.

ಈ ಸಂದರ್ಭ ಚೆಸ್ಕಾಂ ಇಲಾಖೆ ಎನ್.ಡಿ.ಆರ್.ಎಫ್ ರಕ್ಷಣಾ ಸಿಬ್ಬಂದಿಗಳ ಸಹಾಯ ಕೋರಿತ್ತು. ತಕ್ಷಣವೇ ಸ್ಪಂದಿಸಿದ ರಕ್ಷಣಾ ಸಿಬ್ಬಂದಿಗಳು ಎಲ್ಲಾ ಸುರಕ್ಷತಾ ಪರಿಕರಗಳ ಸಹಿತ ಚೆಸ್ಕಾಂ ಸಿಬ್ಬಂದಿಗಳೊಂದಿಗೆ ಕೈಜೋಡಿಸಿ, ವಿದ್ಯುತ್ ಪೂರೈಕೆ ಮರು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ.



ಭಾರೀ ಮಳೆಯಿಂದ ಹಾನಿಗೊಳಗಾಗಿರುವ ಮನೆ.

ಅಪಾಯದ ಸ್ಥಿತಿಯಲ್ಲಿ ಜಿಲ್ಲಾಡಳಿತ ಭವನದ ಕಾಂಕ್ರೀಟ್ ತಡೆಗೋಡೆ

ಭಾರೀ ಮಳೆಯಿಂದ ಬಿರುಕು, ಕುಸಿಯುವ ಆತಂಕ



ಮಡಿಕೇರಿ,ಜು.16– ಭಾರೀ ಮಳೆಯಿಂದ ಜಿಲ್ಲಾಡಳಿತ ಭವನದ ತಡೆಗೋಡೆಯ ಕಾಂಕ್ರಿಟ್ ಬ್ಲಾಕ್‌ಗಳು ಬಾಯ್ತೆರೆದುಕೊಂಡು ಆತಂಕ ಸೃಷ್ಟಿಸಿವೆ. ಜಿಲ್ಲಾಡಳಿತ ಭವನದ ಕೆಳ ಭಾಗದಲ್ಲಿ ಮಂಗಳೂರು ರಸ್ತೆಗೆ ಹೊಂದಿಕೊಂಡಂತೆ ಇತ್ತೀಚೆಗೆ ನಿರ್ಮಿಸಲಾಗಿರುವ ತಡೆಗೋಡೆಯ ಕಾಂಕ್ರಿಟ್ ಬ್ಲಾಕ್‌ಗಳು ಮಳೆಗಾಲದ ಆರಂಭದಲ್ಲಿಯೇ ಕೊಂಚ ವಾಲಿದಂತೆ ಕಂಡು ಬಂದಿತ್ತು. ಮಳೆ ಬಿರುಸಾಗುತ್ತಿದ್ದಂತೆ ಬ್ಲಾಕ್‌ಗಳ ನಡುವಿನ ಅಂತರ ಹೆಚ್ಚಾಗುವುದರೊಂದಿಗೆ ಮೇಲಿನಿಂದ ಇಂಗುವ ನೀರು ಬ್ಲಾಕ್‌ಗಳ ನಡುವಿನಿಂದ ಹರಿದು ಬರುತ್ತಿತ್ತು. ನೀರು ಇಳಿಯುತ್ತಿದ್ದ ಹಿನ್ನೆಲೆ ಮಣ್ಣಿನ ಒತ್ತಡ ಹೆಚ್ಚಾಗಿ ಕೆಲ ಬ್ಲಾಕ್‌ಗಳು ಉಬ್ಬಿ ಬಂದಿದ್ದವು. ಈ ಹಿನ್ನೆಲೆ ಸಾರ್ವಜನಿಕರು ಈ ಬೃಹತ್ ತಡೆಗೋಡೆ ಬೀಳುವ ಆತಂಕ ವ್ಯಕ್ತಪಡಿಸಿದ್ದರು.

ನೂತನ ತಡೆಗೋಡೆಯನ್ನು ಆಧುನಿಕ ತಂತ್ರಜ್ಞಾನದೊಂದಿಗೆ ನಿರ್ಮಿಸಲಾಗಿದ್ದು, ಕೆಲವು ಬ್ಲಾಕ್‌ಗಳು ವಾಲಿದಂತಿದೆ. ಇದರಿಂದ ಯಾವುದೇ ಅಪಾಯವಿಲ್ಲ ಎಂದು ಜಿಲ್ಲಾಡಳಿತ ಪತ್ರಿಕಾ ಹೇಳಿಕೆ ಮೂಲಕ ಸ್ಪಷ್ಟಪಡಿಸಿತ್ತು. ಈಗ ದಿನದಿಂದ ದಿನಕ್ಕೆ ಈ ಬ್ಲಾಕ್ಸ್ ನಡುವಿನ ಅಂತರ ಹೆಚ್ಚಾಗುತ್ತಲೇ ಇದ್ದು, ಮತ್ತಷ್ಟು ವಾಲಿದಂತೆ ಕಂಡು ಬರುತ್ತಿದೆ. ಈ ಬಗ್ಗೆ ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ. ಇನ್ನು ಲೋಕೋಪಯೋಗಿ ಇಲಾಖೆ ನೀರಿನ ಹರಿವಿಗೆ ಅಡಚಣೆ ಉಂಟಾಗದಂತೆ ಬ್ಲಾಕ್‌ಗಳಲ್ಲಿ ರಂಧ್ರ ಕೊರೆದು ನೀರಿನ ಹರಿಯುವಿಕೆಗೆ ದಾರಿ ಮಾಡಿಕೊಡುತ್ತಿದೆ. ಆ ಮೂಲಕ ನೀರಿನ ಒತ್ತಡ ಕಡಿಮೆ ಮಾಡಲು ಮುಂದಾಗಿದೆ. ಮಳೆ ಕಡಿಮೆಯಾದ ಬಳಿಕ ತಡೆಗೋಡೆಯ ದುರಸ್ತಿ ಮಾಡಲಿರುವುದಾಗಿ ಲೋಕೋಪಯೋಗಿ ಇಲಾಖೆ ಮಾಹಿತಿ ನೀಡಿದೆ.

ಬಸವ-ಅಂಬೇಡ್ಕರ್ ವಸತಿ ಯೋಜನೆಯಡಿ ಮನೆ ನಿರ್ಮಾಣ

373 ಫಲಾನುಭವಿಗಳಿಗೆ ಕಾರ್ಯಾದೇಶ ಪತ್ರ ವಿತರಿಸಿದ ಕೆ.ಜಿ. ಬೋಪಯ್ಯ



ಮಡಿಕೇರಿ ಜು.16– ಬಸವ ಮತ್ತು ಅಂಬೇಡ್ಕರ್ ವಸತಿ ಯೋಜನೆಯಡಿ ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಡಿಕೇರಿ ತಾಲೂಕಿನ 373 ಫಲಾನುಭವಿಗಳ ಮನೆ ನಿರ್ಮಾಣಕ್ಕೆ ರಾಜ್ಯ ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿ ಅಧ್ಯಕ್ಷರು ಹಾಗೂ ಶಾಸಕರಾದ ಕೆ.ಜಿ.ಬೋಪಯ್ಯ ಶನಿವಾರ ಕಾರ್ಯಾದೇಶ ಪತ್ರ ವಿತರಿಸಿದರು.

ನಗರದ ತಾ.ಪಂ.ಎಸ್‌ಜಿಎಸ್‌ವೈ ಸಭಾಂಗಣದಲ್ಲಿ ವಿವಿಧ ವಸತಿ ಯೋಜನೆಯಡಿ ಫಲಾನುಭವಿಗಳ ಮನೆ ನಿರ್ಮಾಣದ ಆದೇಶ ಪತ್ರ ವಿತರಿಸಿ ಮಾತನಾಡಿದ ಬೋಪಯ್ಯ ಅವರು, ವಸತಿ ರಹಿತರಿಗೆ ಮನೆ ನಿರ್ಮಾಣಕ್ಕೆ ಕಾರ್ಯಾದೇಶ ನೀಡಲಾಗಿದ್ದು, ಫೆಬ್ರವರಿ ಅಂತ್ಯದೊಳಗೆ ಮನೆಗಳ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸುವಂತೆ ಸಲಹೆ ನೀಡಿದರು.

ವಸತಿ ರಹಿತ ಫಲಾನುಭವಿಗಳ ಸಂಬಂಧ ಗ್ರಾ.ಪಂ.ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಸಲ್ಲಿಸಿರುವ ಪಟ್ಟಿಗೆ ಒಪ್ಪಿಗೆ ನೀಡಲಾಗಿದೆ. ಆ ನಿಟ್ಟಿನಲ್ಲಿ ಪ್ರತಿಯೊಬ್ಬ ಬಡವರಿಗೂ ಸಹ ಸರ್ಕಾರದ ವಸತಿ ಯೋಜನೆಗಳು ತಲುಪಬೇಕು. ಯಾರೂ ಸಹ ವಾಸಕ್ಕೆ ಮನೆ ಹಾಗೂ ವಿದ್ಯುತ್ ಸಂಪರ್ಕ ಇಲ್ಲ ಎಂಬುದು ಕೇಳಿ ಬರಬಾರದು. ಆ ನಿಟ್ಟಿನಲ್ಲಿ ಗ್ರಾಪಂಗಳು ಅಭಿವೃದ್ಧಿಯತ್ತ ಮುನ್ನಡೆಯಬೇಕು ಎಂದು ಅವರು ತಿಳಿಸಿದರು. ಮಡಿಕೇರಿ ತಾಲೂಕಿಗೆ 830 ಮನೆಗಳ ನಿರ್ಮಾಣಕ್ಕೆ ಅನುಮತಿ ಸಿಕ್ಕಿದ್ದು, ಆ ನಿಟ್ಟಿನಲ್ಲಿ ಪ್ರಥಮ ಹಂತದಲ್ಲಿ 373 ಮನೆಗಳ ನಿರ್ಮಾಣಕ್ಕೆ ಕಾರ್ಯಾದೇಶ ಪತ್ರ ವಿತರಿಸಲಾಗಿದೆ ಎಂದ ಅವರು, ಅಂಬೇಡ್ಕರ್ ವಸತಿ ಯೋಜನೆಯಡಿ 2.20 ಲಕ್ಷರೂ. ಹಾಗೂ ಬಸವ ವಸತಿ ಯೋಜನೆಯಡಿ 1.62 ಲಕ್ಷರೂ. ಹಂತ-ಹಂತವಾಗಿ ದೊರೆಯಲಿದೆ. ಜೊತೆಗೆ ತಾವು ಸಹ ಹಣ ಹೊಂದಿಸಿ ಉತ್ತಮ ಮನೆಯನ್ನು ನಿರ್ಮಾಣ ಮಾಡಿಕೊಳ್ಳಬಹುದು. ಆದರೂ ಸರ್ಕಾರದ ಮಾರ್ಗಸೂಚಿಯಂತೆ ಮನೆ ನಿರ್ಮಾಣ ಮಾಡಿಕೊಳ್ಳಲು ಮುಂದಾಗುವಂತೆ ಸಲಹೆ ನೀಡಿದರು. ಚೆಂಬು ಗ್ರಾಪಂ ವ್ಯಾಪ್ತಿಯಲ್ಲಿ ಭೂ ಕಂಪನ ಸಂಬಂಧಿಸಿದಂತೆ ವಿಜ್ಞಾನಿಗಳ ವರದಿ ಆಧಾರದಂತೆ ಯಾರೂ ಸಹ ಆತಂಕ ಪಡಬೇಕಿಲ್ಲ, ಆದರೆ ಜಾಗ್ರತೆ ವಹಿಸುವುದು ಅತ್ಯಗತ್ಯ ಎಂದು ತಿಳಿಸಿದ ಅವರು, ಪ್ರಾಕೃತಿಕ ವಿಕೋಪದಡಿ ಪ್ರತೀ ಗ್ರಾಪಂಗೆ ಜಿಲ್ಲಾಡಳಿತದಿಂದ 50 ಸಾವಿರ ರೂ. ಬಿಡುಗಡೆ ಆಗಿದೆ. ಆ ನಿಟ್ಟಿನಲ್ಲಿ ಗ್ರಾಪಂ ಕಾರ್ಯಪಡೆಯು ಸರ್ಕಾರದ ಮಾರ್ಗಸೂಚಿಯಂತೆ ಕಾರ್ಯನಿರ್ವಹಿಸಬೇಕು ಎಂದರು.

ವಿದ್ಯುತ್ ವ್ಯತ್ಯಯ ಸಂಬಂಧ ಸಹಾಯವಾಣಿ(1912)ಗೆ ಕರೆ ಮಾಡಿ ಮಾಹಿತಿ ನೀಡ ಬೇಕು. ಸಮಸ್ಯೆಗಳಿದ್ದಲ್ಲಿ ತಮ್ಮ ಗಮನಕ್ಕೆ ತರುವಂತಾಗಬೇಕು. ವಸತಿ ಯೋಜನೆ, ಶಿಷ್ಯವೇತನ, ಸ್ವಸಹಾಯ ಗುಂಪುಗಳಿಗೆ ಸಹಾಯಧನ, ವಿದ್ಯುತ್ ಇಲ್ಲದ ಮನೆಗಳಿಗೆ ವಿದ್ಯುತ್ ಸಂಪರ್ಕ... ಹೀಗೆ ಸರ್ಕಾರದ ಒಂದಲ್ಲ ಒಂದು ಯೋಜನೆಗಳು ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ತಲುಪಬೇಕು. ಆ ನಿಟ್ಟಿನಲ್ಲಿ ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳುವಂತಾಗಬೇಕು ಎಂದು ಶಾಸಕರು ನುಡಿದರು.

ಜಿಲ್ಲೆಯಲ್ಲಿ ವ್ಯಾಪಕ ಮಳೆಯಾಗಿರುವುದರಿಂದ ಬೆಳೆ ಪರಿಹಾರ ಸಂಬಂಧ ಸರ್ವೇ ಕಾರ್ಯ ಆರಂಭವಾಗಲಿದೆ. ಆ ಸಂದರ್ಭದಲ್ಲಿ ಎಲ್ಲರೂ ಕೈಜೋಡಿಸಿ ಕಾರ್ಯನಿರ್ವಹಿಸುವಂತೆ ಕೆ.ಜಿ.ಬೋಪಯ್ಯ ತಿಳಿಸಿದರು.

ತಾಪಂ ಇಒ ಶೇಖರ್ ಅವರು ಮಾತನಾಡಿ, ಸರ್ವರಿಗೂ ಸೂರು ಕಲ್ಪಿಸಬೇಕು ಎಂಬ ಉದ್ದೇಶದಿಂದ ಸರ್ಕಾರ ಮಡಿಕೇರಿ ತಾಲೂಕಿನ 830 ಫಲಾನುಭವಿಗಳ ಗುರಿಯಲ್ಲಿ ಮೊದಲ ಹಂತದಲ್ಲಿ 373 ಫಲಾನುಭವಿಗಳಿಗೆ ಮನೆ ನಿರ್ಮಾಣಕ್ಕೆ ಕಾರ್ಯಾದೇಶ ನೀಡಲಾಗುತ್ತದೆ ಎಂದರು.

ಹಳ್ಳಿಗಳ ಅಭಿವೃದ್ಧಿಗಾಗಿ ಜಿಲ್ಲಾಧಿಕಾರಿ ನಡೆ, ಹಳ್ಳಿ ಕಡೆ ಕಾರ್ಯಕ್ರಮ



ಮಂಡ್ಯ, ಜು.16– ಹಳ್ಳಿಗಳ ಅಭಿವೃದ್ಧಿಗಾಗಿ ಸರ್ಕಾರ ವಿಶಿಷ್ಟವಾದ ಯೋಜನೆ ರೂಪಿಸಿದೆ. ಸರ್ಕಾರದ ಆಡಳಿತವನ್ನು ನೇರವಾಗಿ ಜನರಿಗೆ ತಲುಪಿಸುವ ಯೋಜನೆ ಇದಾಗಿದೆ. ನಿಮ್ಮ ಗ್ರಾಮಕ್ಕೆ ಎಲ್ಲ ತಾಲೂಕು ಮಟ್ಟದ ಅಧಿಕಾರಿಗಳು ಬಂದಿದ್ದು, ಎಲ್ಲ ಯೋಜನೆಗಳನ್ನೂ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಹಸೀಲ್ದಾರ್ ಕುಂಞ ಅಹಮದ್ ಸಲಹೆ ನೀಡಿದರು.

ತಾಲೂಕಿನ ಟಿ.ಮಲ್ಲಿಗೆರೆ ಗ್ರಾಮದಲ್ಲಿ ತಾಲೂಕು ಆಡಳಿತ ಹಾಗೂ ಕಂದಾಯ ಇಲಾಖೆಯಿಂದ ನಡೆದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಟಿ.ಮಲ್ಲಿಗೆರೆ ಹಲವಾರು ಸಮಸ್ಯೆಗಳನ್ನು ಗುರುತಿಸಲಾಗಿತ್ತು. ಈ ಹಿಂದೆಯೇ ನಮ್ಮ ಅಧಿಕಾರಿಗಳು ಮತ್ತು ನೌಕರರು ಇಲ್ಲಿರುವ ಪ್ರತೀ ಮನೆ ಮನೆಗೂ ಭೇಟಿ ನೀಡಿ ಸಮಸ್ಯೆಗಳನ್ನು ಪಟ್ಟಿ ಮಾಡಿದ್ದರು. ಗ್ರಾಮದಲ್ಲಿರುವ ಕೆಲವು ಅಸಹಾಯಕರಿಗೆ ಪಿಂಚಣಿ ವಿತರಣಾ ಕಾರ್ಯವೂ ನಡೆದಿಲ್ಲ. ಕೆಲವರು ಆರೋಗ್ಯ ಸಮಸ್ಯೆಗಳಿಂದಲೂ ಬಳಲುತ್ತಿರುತ್ತಾರೆ. ಅಂತಹವರಿಗೆ ಪಿಂಚಣಿಯ ಅಗತ್ಯವಿದ್ದು, ಇಂತಹ ಪ್ರಕರಣಗಳ ಬಗ್ಗೆಯೂ ಗಮನಹರಿಸಿ ತಕ್ಷಣ ಆರೋಗ್ಯಾಧಿಕಾರಿಗಳನ್ನು ಸ್ಥಳಕ್ಕೆ ಕರೆಯಿಸಿ ಪರಿಶೀಲನೆ ನಡೆಸಿ ಸ್ಥಳದಲ್ಲೇ ಪಿಂಚಣಿ ಮಂಜೂರು ಮಾಡಲಾಗಿದೆ ಎಂದರು.

ಗ್ರಾಮದಲ್ಲಿರುವ ಕೆಲವರಿಗೆ ಆಧಾರ್ ಕಾರ್ಡ್‌ನಲ್ಲಿ ಹೆಸರು ತಪ್ಪಾಗಿರುವುದು, ಹುಟ್ಟಿದ ದಿನಾಂಕಗಳು ಸರಿಯಾಗಿಲ್ಲದಿರುವುದು ಕಂಡು ಬಂದಿದೆ. ಇದನ್ನು ಸರಿಪಡಿಸುವ ಉದ್ದೇಶದಿಂದ ಆಧಾರ್ ಕೇಂದ್ರವನ್ನು ತೆರೆದು ಎಲ್ಲವನ್ನೂ ಸರಿಪಡಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮಕ್ಕೂ ಮೊದಲು ತಹಸೀಲ್ದಾರ್ ಕುಂಞ ಅಹಮದ್ ಅವರನ್ನು ಗ್ರಾಮದ ಮುಖ್ಯ ದ್ವಾರದಿಂದ ಮೆರವಣಿಗೆಯಲ್ಲಿ ವೇದಿಕೆಗೆ ಕರೆತರಲಾಯಿತು. ಗ್ರಾಪಂ ಅಧ್ಯಕ್ಷೆ ಲಲಿತಾ, ಸದಸ್ಯ ಬಸವಣ್ಣ, ತಾಪಂ ಮಾಜಿ ಸದಸ್ಯ ಬೆಟ್ಟಸ್ವಾಮಿ, ತಾಲೂಕು ಯೋಜನಾಧಿಕಾರಿ ಶ್ರೀನಿವಾಸ್, ಅಧಿಕಾರಿಗಳಾದ ಪುಷ್ಪಲತಾ, ಜೈರಾಮ್, ವೀರಯ್ಯ ಸೇರಿದಂತೆ ಇತರರು ಇದ್ದರು.

ಕೆಆರ್‌ಎಸ್‌ನಿಂದ ಹೆಚ್ಚಿನ ನೀರು ಬಿಡುಗಡೆ

ಕಾವೇರಿ ನದಿಪಾತ್ರದ ದೇಗುಲಗಳು ಜಲಾವೃತ ಭೀತಿ

ಶ್ರೀರಂಗಪಟ್ಟಣ, ಜು.16– ಕೆಆರ್‌ಎಸ್ ಜಲಾಶಯದಿಂದ ಹೆಚ್ಚಿನ ನೀರನ್ನು ನದಿಗೆ ಬಿಡುಗಡೆ ಮಾಡಲಾಗಿದ್ದು, ಕಾವೇರಿ ನದಿ ತೀರದ ಹಲವು ದೇಗುಲಗಳು ನೀರಿನಲ್ಲಿ ಮುಳುಗಡೆಯಾಗುವ ಭೀತಿ ಉಂಟಾಗಿದೆ.

ಗಂಜಾಮ್ ಬಳಿಯ ಪ್ರಸಿದ್ಧ ನಿಮಿಷಾಂಬ ದೇಗುಲದ ಸಮೀಪದವರೆಗೂ ನೀರು ಬಂದಿದೆ. ಅಲ್ಲದೇ ಪಶ್ಚಿಮ ವಾಹಿನಿ ಬಳಿಯ ವೇಣು ಗೋಪಾಲಸ್ವಾಮಿ, ಶ್ರೀರಂಗಪಟ್ಟಣದ ಸೇತುವೆ ಬಳಿ ಇರುವ ಸಾಯಿ ಮಂದಿರ ಪ್ರವಾಹದ ಮುಳುಗಡೆಯಾಗುವ ಭೀತಿ ಉಂಟಾಗಿದೆ. ಪ್ರವಾಸಿಗರು ನದಿಗಿಳಿಯದಂತೆ ಎಚ್ಚರ ವಹಿಸಲಾಗಿದೆ.

ಜಲಾಶಯ ಬಹುತೇಕ ಭರ್ತಿ: ಕೆಆರ್‌ಎಸ್ ಜಲಾಶಯ ಬಹುತೇಕ ಭರ್ತಿಯಾಗಿದ್ದು, ಅಪಾರ ಪ್ರಮಾಣದ ನೀರು ಹೊರಬಿಡಲಾಗುತ್ತಿದೆ. 124.80 ಅಡಿ ಸಾಮರ್ಥ್ಯದ ಜಲಾಶಯದಲ್ಲಿ ಸದ್ಯಕ್ಕೆ 123.54 ಅಡಿ ನೀರಿದೆ. 88,836 ಕ್ಯೂಸೆಕ್ ನೀರು ಒಳ ಹರಿವಿದೆ. ಜಲಾಶಯದಿಂದ 85,639 ಕ್ಯೂಸೆಕ್ ನೀರನ್ನು ಹೊರ ಬಿಡಲಾಗುತ್ತದೆ. 49.452 ಟಿಎಂಸಿ ಸಾಂದ್ರತೆ ಇರುವ ಕೆಆರ್‌ಎಸ್‌ನಲ್ಲಿ 47.707 ಟಿಎಂಸಿ ಸಂಗ್ರಹವಿದೆ ಹೊರ ಹರಿವಿನ ಪ್ರಮಾಣದಲ್ಲಿ ಹೆಚ್ಚಳವಾಗಿದ್ದು ಕಾವೇರಿ ನದಿ ಪ್ರವಾಹದ ಪ್ರದೇಶದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.



ಕಾವೇರಿಯಲ್ಲಿ ಕೊಚ್ಚಿ ಹೋದ ಯುವಕರ ಸುಳಿವಿಲ್ಲ



ಶ್ರೀರಂಗಪಟ್ಟಣ, ಜು.16–ಕಾವೇರಿ ನದಿಯಲ್ಲಿ ಇತ್ತೀಚೆಗೆ ಕೊಚ್ಚಿ ಹೋಗಿದ್ದ ಇಬ್ಬರು ಯುವಕರ ಸುಳಿವು ಪತ್ತೆಯಾಗಿಲ್ಲ. ಇವರಿಗಾಗಿ ಎನ್‌ಡಿಆರ್‌ಎಫ್ ತಂಡ ಹುಡುಕಾಟ ನಡೆಸುತ್ತಿದೆ.

ಜು.11 ರಂದು ಕೆಆರ್‌ಎಸ್‌ಗೆ ಸ್ನೇಹಿತರೊಂದಿಗೆ ಬಂದಿದ್ದ ಮೈಸೂರಿನ ಪಡುವಾರಹಳ್ಳಿಯ ಸೃಜನ್(20) ಹಾಗೂ ಜು.13ರಂದು ಶ್ರೀರಂಗಪಟ್ಟಣದ ಸಂಗಮ ಬಳಿ ಸ್ನಾನಕ್ಕೆ ನದಿಗೆ ಇಳಿದಿದ್ದ ಬೆಂಗಳೂರಿನ ಯಲಹಂಕ ನಿವಾಸಿ ಅಶೋಕ್(26) ಇವರು ನದಿಯಲ್ಲಿ ಕೊಚ್ಚಿ ಹೋಗಿದ್ದು, ಇವರ ಸುಳಿವು ಇನ್ನೂ ಪತ್ತೆಯಾಗಿಲ್ಲ. ಕಳೆದ ಮೂರ್‍ನಾಲ್ಕು ದಿನಗಳಿಂದ 30ಕ್ಕೂ ಹೆಚ್ಚು ಅಗ್ನಿಶಾಮಕ ಸಿಬ್ಬಂದಿ ಹಾಗೂ ಎನ್‌ಡಿಆರ್‌ಎಫ್ ತಂಡ ಬೋಟ್‌ಗಳಲ್ಲಿ ಹುಡುಕಾಟ ನಡೆಸಲಾಗುತ್ತಿದೆ. ಆದರೆ, ಕೆಆರ್‌ಎಸ್‌ನಿಂದ 85 ಸಾವಿರಕ್ಕೂ ಹೆಚ್ಚು ಕ್ಯೂಸೆಕ್ ನೀರು ಬಿಡುಗಡೆ ಮಾಡಿರುವುದರಿಂದ ನೀರಿನ ಹರಿವು ಹೆಚ್ಚಾಗಿದ್ದು, ಹುಡುಕಾಟದ ಕಾರ್ಯಾಚರಣೆಗೆ ಅಡ್ಡಿಯುಂಟಾಗಿದೆ.

ಈ ಸಂಬಂಧ ಸ್ಥಳಕ್ಕೆ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ಜಿಲ್ಲಾಧಿಕಾರಿ ಅಶ್ವಥಿ ಸೇರಿದಂತೆ ಹಿರಿಯ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದ್ದಾರೆ.

ಲಕ್ಷ್ಮೀಸಾಗರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು-ಉಪಾಧ್ಯಕ್ಷರ ಆಯ್ಕೆ



ಪಾಂಡವಪುರ, ಜು.16– ತಾಲೂಕಿನ ಲಕ್ಷ್ಮೀಸಾಗರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಬಿ.ಅಶೋಕ್, ಉಪಾಧ್ಯಕ್ಷರಾಗಿ ರೈತಸಂಘದ ಬೆಂಬಲಿತ ಅಭ್ಯರ್ಥಿ ಕೆಂಚೇಗೌಡ ಅವಿರೋಧವಾಗಿ ಆಯ್ಕೆಯಾದರು.

ಓರ್ವ ನಾಮಿನಿ ನಿರ್ದೇಶಕ ಸೇರಿ ಒಟ್ಟು 12 ಮಂದಿ ನಿರ್ದೇಶಕರ ಸಂಖ್ಯಾಬಲ ಹೊಂದಿರುವ ಕೃಷಿ ಪತ್ತಿನ ಸಹಕಾರ ಸಂಘದ ಹಿಂದಿನ ಅಧ್ಯಕ್ಷ ಎಲ್.ಡಿ.ಮಹೇಶ್, ಉಪಾಧ್ಯಕ್ಷೆ ಕಮಲಮ್ಮ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಶನಿವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಬಿ.ಅಶೋಕ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಕೆಂಚೇಗೌಡ ಮಾತ್ರ ನಾಮಪತ್ರ ಸಲ್ಲಿಸಿದರು. ಇವರನ್ನು ಹೊರತುಪಡಿಸಿ ಉಳಿದ ಯಾವೊಬ್ಬ ನಿರ್ದೇಶಕರು ನಾಮಪತ್ರವನ್ನು ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಪಾರ್ವತಮ್ಮ ಅವಿರೋಧ ಆಯ್ಕೆ ಘೋಷಿಸಿದರು.

ಈ ವೇಳೆ ಮಾಜಿ ಅಧ್ಯಕ್ಷರಾದ ಎಲ್.ಡಿ.ಮಹೇಶ್, ಕೆ.ಜಯಕೃಷ್ಣ, ಮಾಜಿ ಉಪಾಧ್ಯಕ್ಷೆ ಕಮಲಮ್ಮ, ನಿರ್ದೇಶಕರಾದ ಜ್ಞಾನೇಶ್, ಜಯರಾಮೇಗೌಡ, ನಾಗಭೋಯಿ, ಎಸ್.ಲೋಕೇಶ್, ಸಿದ್ದಮ್ಮ, ಕೆಂಪಮ್ಮ, ನಾಮಿನಿ ನಿರ್ದೇಶಕ ಚಂದ್ರಶೇಖರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ವಿಜಯ್, ಲೆಕ್ಕಾಧಿಕಾರಿ ರವಿ ಹಾಗೂ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ಹಾಪ್‌ಕಾಮ್ಸ್ ನಿರ್ದೇಶಕ ಬಸವೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಕುಮಾರ್, ಸದಸ್ಯ ಕೆಂಪೇಗೌಡ, ಮಾಜಿ ಸದಸ್ಯ ರವಿ, ಡೇರಿ ಮಾಜಿ ಅಧ್ಯಕ್ಷ ಜಗದೀಶ್, ಸೊಸೈಟಿ ಮಾಜಿ ನಿರ್ದೇಶಕ ಕೆಂಚೇಗೌಡ, ಸುಂಕಾತೊಣ್ಣೂರು ಗ್ರಾಪಂ ಮಾಜಿ ಅಧ್ಯಕ್ಷ ಜೆ.ದೇವೇಗೌಡ, ಲಕ್ಷ್ಮೀಸಾಗರ ಗ್ರಾಮಸ್ಥರು ಹಾಜರಿದ್ದರು.

ನೀರು ಸರಬರಾಜಿನಲ್ಲಿ ವ್ಯತ್ಯಯ

ಮಂಡ್ಯ, ಜು.16– ಕಾವೇರಿ ನದಿ ಬೇಸಿಸ್‌ನಲ್ಲಿ ಭಾರಿ ಮಳೆ ಆಗುತ್ತಿರುವುದರಿಂದ ಶ್ರೀರಂಗಪಟ್ಟಣ ಸಮೀಪವಿರುವ ಕಾವೇರಿ ನದಿಯಲ್ಲಿ ನೀರಿನ ಪ್ರವಾಹ ಹೆಚ್ಚಾಗಿದ್ದು, ಮೂಲಸ್ಥಾವರದಲ್ಲಿನ ಜಾಕ್‌ವೆಲ್‌ಗೆ ಸರಿಯಾದ ಪ್ರಮಾಣದಲ್ಲಿ ನೀರು ಸರಬರಾಜು ಆಗದ ಕಾರಣ ನಿಗದಿತ ಪ್ರಮಾಣದಲ್ಲಿ ನೀರನ್ನು ಪಂಪು ಮಾಡಲು ಸಾಧ್ಯವಾಗುತ್ತಿರುವುದಿಲ್ಲ. ಹಾಗಾಗಿ, ಮಂಡ್ಯ ನಗರದ ಸಾರ್ವಜನಿಕರಿಗೆ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ನೀರು ಬಂದ ವೇಳೆ ಶೇಖರಿಸಿಟ್ಟುಕೊಂಡು ಜಲ ಮಂಡಳಿಯೊಂದಿಗೆ ಸಹಕರಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ವೆಂಕಟೇಗೌಡ ನಿಧನ



ಭಾರತೀನಗರ, ಜು.16– ಕೆ.ಎಂ.ದೊಡ್ಡಿಯ ಆಸರೆ ಸೇವಾ ಟ್ರಸ್ಟ್ ಅಧ್ಯಕ್ಷ ರಘು ವೆಂಕಟೇಗೌಡ ಅವರ ತಂದೆ ವೆಂಕಟೇಗೌಡ(75) ಶನಿವಾರ ನಿಧನರಾದರು. ಮೃತರು ನಾಲ್ವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಕೆ.ಎಂ. ದೊಡ್ಡಿಯ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿತು.

ಶಾಸಕ ಡಿ.ಸಿ.ತಮ್ಮಣ್ಣ, ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಮನ್‌ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ, ಆರ್‌ಕೆ ವಿದ್ಯಾಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಿನಯ್ ರಾಮಕೃಷ್ಣ ಸೇರಿದಂತೆ ಹಲವು ಗಣ್ಯರು ಮೃತರ ಅಂತಿಮ ದರ್ಶನ ಪಡೆದರು.

ಪಾಳ್ಯದಲ್ಲಿ ಜಿಲ್ಲಾಧಿಕಾರಿಗಳ ನಡಿಗೆ ಹಳ್ಳಿ ಕಡೆಗೆ ಕಾರ್ಯಕ್ರಮ

ಸಮಸ್ಯೆಗಳ ಸರಮಾಲೆ ಹೊತ್ತು ತಂದ ಗ್ರಾಮಸ್ಥರು



ಕೊಳ್ಳೇಗಾಲ, ಜು.16–ಕೊಳ್ಳೇಗಾಲ ತಾಲೂಕಿನ ಪಾಳ್ಯ ಗ್ರಾಮದ ಪ್ರೌಢಶಾಲೆ ಆವರಣದಲ್ಲಿ ಶನಿವಾರ ನಡೆದ ಜಿಲ್ಲಾಧಿಕಾರಿಗಳ ನಡಿಗೆ, ಹಳ್ಳಿಗಳ ಕಡೆಗೆ ಕಾರ್ಯಕ್ರಮದಲ್ಲಿ ತಾಲೂಕು ಹಾಗೂ ಹೋಬಳಿಯ ವಿವಿಧ ಗ್ರಾಮಸ್ಥರು ನೂರಾರು ಸಮಸ್ಯೆಗಳ ಸರಮಾಲೆಯನ್ನೇ ಹೊತ್ತು ತಂದು ಜಿಲ್ಲಾಧಿಕಾರಿಗಳ ಮುಂದಿಟ್ಟರು.

ಸಾಮಾಜಿಕ ಭದ್ರತಾ ಪಿಂಚಣಿ, ಸ್ಮಶಾನ ಜಾಗ, ಪೌತಿ ಖಾತೆ, ಇ-ಸ್ವತ್ತು ವಿಳಂಬ, ಜಮೀನಿಗೆ ದಾರಿ, ಕೆರೆ-ಕಟ್ಟೆ ಅತಿಕ್ರಮ ತೆರವು, ಜಾಗದ ವಿಚಾರದಲ್ಲಿ ದೂರು-ಪ್ರತಿದೂರು ದಾಖಲು, ಮದ್ಯದಂಗಡಿ ವಿಚಾರದಲ್ಲಿ ಪರ-ವಿರೋಧ ಸೇರಿದಂತೆ ಅನೇಕ ಸಮಸ್ಯೆಗಳು ಇಂದಿನ ಜಿಲ್ಲಾಧಿಕಾರಿಗಳ ವಾಸ್ತವ್ಯ ಕಾರ್ಯಕ್ರಮಲ್ಲಿ ಕಂಡು ಬಂತು.

ಅಣಗಳ್ಳಿ ಗ್ರಾಮಸ್ಥ ದಶರಥ್ ಮಾತನಾಡಿ, ಕೆರೆಗಳ ಅತಿಕ್ರಮ ದೂರು ನೀಡಿದ ಹಿನ್ನೆಲೆ ಚಿಕ್ಕರಂಗನಾಥ ಕೆರೆ 5 ಎಕರೆ ಅತಿಕ್ರಮ ಪತ್ತೆಯಾಗಿದೆ. ಅಲ್ಲದೆ ಸುತ್ತಮುತ್ತಲ 17 ಕೆರೆಗಳ ಅತಿಕ್ರಮ ಸರ್ವೆ ಕಾರ್ಯ ಸಮರ್ಪಕ ರೀತಿಯಲ್ಲಿ ನಡೆಸಲು ಅಧಿಕಾರಿಗಳು ಮೀನಾಮೇಷ ಎಣಿಸುತ್ತಿದ್ದಾರೆ. ಕೂಡಲೇ ಕ್ರಮ ವಹಿಸಿ ಎಂದು ದೂರಿದರು.

ಅಳುತ್ತಲೇ ಅಹವಾಲಿತ್ತ ಮಹಿಳೆ

ಧನಗೆರೆ ವ್ಯಾಪ್ತಿಯಲ್ಲಿ ನದಿ ಸಮೀಪದಲ್ಲಿರುವ ರೈತರ ಬೆಳೆ ಮಳೆ ಬಂದಾಗಲೆಲ್ಲ ಹಾಳಾಗುತ್ತದೆ. ಬೆಳೆ ಕೈಗೆ ಬಂದಾಗಲೂ ಸಾಗಣೆಗೆ ದಾರಿಯದ್ದೇ ಸಮಸ್ಯೆಯಾಗಲಿದೆ. ನಾನು ಬಡ ಮಹಿಳೆ, ಪತಿ ಅನಾರೋಗ್ಯಕ್ಕೀಡಾಗಿದ್ದಾರೆ. ನಮ್ಮ ಸಂಕಷ್ಟಕ್ಕೆ ಸ್ಪಂದಿಸಿ ಎಂದು ಜಿಲ್ಲಾಧಿಕಾರಿಗಳ ಮುಂದೆ ರೈತ ಮಹಿಳೆ ಸುವರ್ಣ ಕಣ್ಣೀರಿಡುತ್ತಲೆ ಸಮಸ್ಯೆ ವಿವರಿಸಿದರು.

ಎಸ್ಸಿ, ಎಸ್ಟಿ ಬೀದಿಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳು ಕಳಪೆಯಾಗಿದ್ದು, ಕೂಡಲೇ ಪರಿಶೀಲಿಸಬೇಕು ಎಂದು ಭೀಮನಗರದ ರಾಜಶೇಖರಮೂರ್ತಿ ಆರೋಪಿಸಿದರು.

ಪಾಳ್ಯ ಗ್ರಾಮದ ವಿರೂಪಾಕ್ಷಪ್ಪ, ಪಶು ಆಸ್ಪತ್ರೆ ಗುಂಡೇಗಾಲದಲ್ಲಿದ್ದು, ಅಲ್ಲಿಗೆ ಅನಾರೋಗ್ಯಕ್ಕೀಡಾದ ಜಾನುವಾರು ಸಮೇತ ತೆರಳಲು ತೊಂದರೆಯಾಗುತ್ತದೆ. ಆಸ್ಪತ್ರೆ ಇಲ್ಲೇ ಕಾರ್ಯ ನಿರ್ವಹಿಸುವಂತೆ ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು.

ಗ್ರಾಮದ ರಸ್ತೆ ಶೋಚನೀಯ ಸ್ಥಿತಿ ತಲುಪಿದ್ದು ಕೂಡಲೇ ರಸ್ತೆ ದುರಸ್ತಿ ಪಡಿಸುವಂತೆ ಉಗನಿಯ ಗ್ರಾಮದ ಮೂರ್ತಿ ಅಹವಾಲು ಸಲ್ಲಿಸಿದರು.

ತಾವೇ ಸಮಸ್ಯೆ ಹೇಳಿದ ಶಾಸಕ...

ಹೋಬಳಿಯ ಸಮಸ್ಯೆಗಳನ್ನು ಜಿಲ್ಲಾಧಿಕಾರಿಗಳ ಮುಂದೆ ಸ್ವತಃ ಶಾಸಕ ನರೇಂದ್ರ ಅವರೇ ಬಿಚ್ಚಿಟ್ಟರು. ಸರ್ಕಾರಿ ಸಾರಿಗೆ ಬಸ್ ಕೊರತೆ ಇದ್ದು, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಜಿಲ್ಲಾಧಿಕಾರಿಗಳು ಹೆಚ್ಚುವರಿ ಬಸ್ ವ್ಯವಸ್ಥೆ ಕಲ್ಪಿಸಬೇಕು. ಸಮರ್ಪಕ ರೀತಿ ಇ-ಸ್ವತ್ತು ದೊರೆಯದೆ ಗ್ರಾಮಸ್ಥರಿಗೆ ತೊಂದರೆಯಾಗುತ್ತಿದೆ. ಜನತೆಗೆ ನಾನಾ ಕಾರಣ ಹೇಳಿ ಸತಾಯಿಸಲಾಗುತ್ತಿದೆ ಎಂದು ದೂರಿದರು.

ಧನಗೆರೆ ಗ್ರಾಪಂನಲ್ಲಿ ಕುಡಿಯುವ ನೀರು, ಸ್ವಚ್ಛತೆಗೆ ಗಮನ ನೀಡಬೇಕು. ಪಾಳ್ಯದ ಪಂಚಾಯ್ತಿ ಕಟ್ಟಡ ಪೂರ್ಣವಾಗಿಲ್ಲ ಈ ಸಂಬಂಧ ತುರ್ತು ಕ್ರಮ ಕೈಗೊಳ್ಳಬೇಕು. ಸತ್ತೇಗಾಲ ಪಂಚಾಯ್ತಿಯಲ್ಲಿ ಮನೆ ನಿರ್ಮಾಣಕ್ಕೆ ಚೆಸ್ಕಾಂ ಸಂಪರ್ಕ ಕಲ್ಪಿಸುತ್ತಿಲ್ಲ. ಟಿಸಿಗಳ ಸಮಸ್ಯೆಗೂ ಸ್ಪಂದಿಸಲ್ಲ. ನಿರಾಕ್ಷೇಪಣಾ ಪತ್ರ ನೀಡುತ್ತಿಲ್ಲ ಎಂದು ಕಿಡಿಕಾರಿದರು.

ಖಾತೆ, ಪೌತಿ ಖಾತೆ ಮಾಡಲು ಸತಾಯಿಸಲಾಗುತ್ತಿರುವ ಸಾಕಷ್ಟು ಆರೋಪಗಳಿವೆ, ಧನಗೆರೆ ಮುಖ್ಯ ರಸ್ತೆ ಅಪೂರ್ಣ ಕಾಮಗಾರಿ ಹಿನ್ನೆಲೆ 8 ಅಪಘಾತವಾಗಿದ್ದು, 3ಕ್ಕೂ ಹೆಚ್ಚು ಸಾವಾಗಿದೆ. ಕೂಡಲೇ ರಸ್ತೆ ಸರಿಪಡಿಸಿ, ರಸಗೊಬ್ಬರದ ಸಮಸ್ಯೆ ನಿವಾರಿಸಿ ಎಂದು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಗರಂ ಆದರು.


ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸಿ, ಖುದ್ದು ಅಹವಾಲು ಆಲಿಸಿದರಲ್ಲದೆ, ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಇದೇ ವೇಳೆ ಕೃಷಿ ಇಲಾಖೆಯಿಂದ ಫಲಾನುಭವಿಗಳಿಗೆ ಐರನ್ ಕಿಟ್, ಬಿತ್ತನೆ ಬೀಜ, ಕಂದಾಯ ಇಲಾಖೆಯಿಂದ ವಿವಿಧ ಪಿಂಚಣಿ ಮಂಜೂರಾತಿ ಆದೇಶ ಪತ್ರಗಳನ್ನು ವಿತರಿಸಲಾಯಿತು. ಗ್ರಾಪಂ ಅಧ್ಯಕ್ಷ ರವಿ, ಉಪಾಧ್ಯಕ್ಷೆ ಸುಮಾ, ಎಸಿ ಗೀತಾ ಹುಡೇದ, ತಹಸೀಲ್ದಾರ್ ಮಂಜುಳಾ, ತಾಪಂ ಇಓ ಮಹೇಶ್, ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳಿದ್ದರು.

ಜು.19 ರಂದು ತೊಂಡವಾಡಿ ಶ್ರೀ ಪುರದ ಮಾರಮ್ಮನವರ ಪೂಜಾ ಮಹೋತ್ಸವ, ಆರಾಧನೆ

ಗುಂಡ್ಲುಪೇಟೆ, ಜು. 16–ತಾಲೂಕಿನ ಬೇಗೂರು ಹೋಬಳಿ, ತೊಂಡವಾಡಿ ಗ್ರಾಮದ ಶ್ರೀ ಪುರದ ಮಾರಮ್ಮನವರ 9ನೇ ವರ್ಷದ ಪೂಜಾ ಮಹೋತ್ಸವ ಮತ್ತು ಆರಾಧನೆ ಜುಲೈ 19 (ಮಂಗಳವಾರ)ರಂದು ವಿಜೃಂಭಣೆಯಿಂದ ನಡೆಯಲಿದೆ. ಅಂದು ಬೆಳಗ್ಗೆ 9 ರಿಂದ 12 ಗಂಟೆವರೆಗೆ ಶ್ರೀ ಅಮ್ಮನವರಿಗೆ ಅಭಿಷೇಕ, ಹೋಮ, ಆರಾಧನೆ, ಮಧ್ಯಾಹ್ನ 12.30ಕ್ಕೆ ಮಹಾ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ತೊಂಡವಾಡಿ ಗ್ರಾಮಸ್ಥರು ತಿಳಿಸಿದ್ದಾರೆ.

ರೈತರ ಸಮಸ್ಯೆ ಪರಿಹರಿಸಲು ಶೀಘ್ರವೇ ಸಭೆ ಕರೆಯುವಂತೆ ಆಗ್ರಹ



ಚಾಮರಾಜನಗರ,ಜು.16–ಜಿಲ್ಲೆಯ ರೈತರು ಎದುರಿಸುತ್ತಿರುವ ಸಮಸ್ಯೆಗಳ ಪರಿಹರಿಸುವ ನಿಟ್ಟಿನಲ್ಲಿ ಚರ್ಚಿಸಲು ಜಿಲ್ಲಾ ಉಸ್ತುವಾರಿ ಸಚಿವರು ಅಧಿಕಾರಿಗಳು ಹಾಗೂ ರೈತ ಮುಖಂಡರ ಸಭೆ ಕರೆಯವಂತೆ ಒತ್ತಾಯಿಸಿ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ನಗರದಲ್ಲಿಂದು ಪ್ರತಿಭಟಿಸಿದರು.

ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಗರದ ಪ್ರವಾಸಿ ಮಂದಿರದಲ್ಲಿ ಸಭೆ ನಡೆಸಿದ ಜಿಲ್ಲೆಯ ಮುಖಂಡರು, ರೈತರು ತಮ್ಮ ಅನೇಕ ಸಮಸ್ಯೆಗಳ ಕುರಿತು ಚರ್ಚಿಸಿದರು.

ನಂತರ ಜಿಲ್ಲಾಡಳಿತ ಭವನಕ್ಕೆ ಆಗಮಿಸಿದ ರೈತ ಮುಖಂಡರು, ಭವನ ಮುಂಭಾಗ ಪ್ರತಿಭಟನೆ ಆರಂಭಿಸಿ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲೆಯ ರೈತರು ಹಲವಾರು ಸಮಸ್ಯೆಗಳಲ್ಲಿ ಸಿಲುಕಿದ್ದಾರೆ. ಈ ಬಗ್ಗೆ ಸಮಗ್ರವಾಗಿ ಚರ್ಚಿಸಿ, ಪರಿಹಾರ ಕಂಡುಕೊಳ್ಳಲು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳು ಹಾಗೂ ರೈತ ಮುಖಂಡರ ಸಭೆ ಕರೆಯಬೇಕು. ಇನ್ನು 15 ದಿನಗಳಿಗೆ ಸಭೆ ಕರೆಯದಿದ್ದರೆ ಜಿಲ್ಲೆಯಾದ್ಯಂತ ಹೋರಾಟ ರೂಪಿಸುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದರು.

ಜಿಲ್ಲೆಯಲ್ಲಿ ಕಬ್ಬು ಕಟಾವು ಪ್ರಾರಂಭವಾಗಿದ್ದು, ಕೂಲಿ ಹಾಗೂ ಸಾಗಣೆ ವೆಚ್ಚವನ್ನು ಹೆಚ್ಚಳ ಮಾಡಲಾಗಿದೆ. ಕಾಡು ಪ್ರಾಣಿಗಳ ಹಾವಳಿ ವಿಪರೀತವಾಗಿದೆ. ಟಿಸಿ ಬದಲಾವಣೆ ಸಮರ್ಪಕವಾಗಿ ಆಗುತ್ತಿಲ್ಲ. ಕೆರೆಗಳಿಗೆ ನೀರು ತುಂಬಿಸಲು ವಿಳಂಬವಾಗುತ್ತಿದೆ. ಫಸಲ್ ಭೀಮಾ ಯೋಜನೆಯಡಿ ನಷ್ಟದ ಪರಿಹಾರ ನೀಡುತ್ತಿಲ್ಲ. ಕಾಡುಪ್ರಾಣಿಗಳ ದಾಳಿಯಿಂದ ಮೃತಪಟ್ಟವರ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ ನೀಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಮುಂದಾಗುವಂತೆ ಒತ್ತಾಯಿಸಿದ ಪ್ರತಿಭಟನಾಕಾರರು ಈ ನಿಟ್ಟಿನಲ್ಲಿ ಕೂಡಲೇ ರೈತ ಮುಂಡರ ಸಭೆ ಕರೆಯುವಂತೆ ಆಗ್ರಹಿಸಿದರು.

ಜಿಲ್ಲಾ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಳ್ಳಿ ದೇವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಂಕರ್, ಮುಖಂಡರಾದ ರಾಜಣ್ಣ, ನಾಗರಾಜ್, ಮೂಕಹಳ್ಳಿ ಮಹದೇವಸ್ವಾಮಿ, ಸಿದ್ದೇಶ್, ಮಂಜು, ರಂಗರಾಜ್, ನಾಗರಾಜ್, ಗುರುಪ್ರಸಾದ್, ಗುರುಮಲ್ಲಪ್ಪ ಇತರರು ಪ್ರತಿಭಟನೆಯಲ್ಲಿದ್ದರು.



ಮೈಸೂರಿನ ಅವಧೂತ ದತ್ತ ಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ಜನ್ಮದಿನೋತ್ಸವದ ಅಂಗವಾಗಿ ಗುಂಡ್ಲುಪೇಟೆ ತಾಲೂಕಿನ ಬೊಮ್ಮನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 160 ವಿದ್ಯಾರ್ಥಿಗಳಿಗೆ ಗಣಪತಿ ಸಚ್ಚಿದಾನಂದ ಆಶ್ರಮದಿಂದ ಸಮವಸ್ತ್ರ ವಿತರಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿ ಶಿವಮೂರ್ತಿ, ಆಶ್ರಮದ ಟ್ರಸ್ಟಿಗಳಾದ ದೇವರ ಬೋಸ್ಲೆ, ವಿನಯ ಬಾಬು, ಸ್ವಯಂ ಸೇವಕರಾದ ನಂದನ್ ಉಪಸ್ಥಿತರಿದ್ದರು.

ಮದುವೆಯಾಗುವುದಾಗಿ ನಂಬಿಸಿ ವಂಚನೆ
ಕೃಷಿ ಅಧಿಕಾರಿ ವಿರುದ್ಧ ಕೇಸ್

ಮೈಸೂರು, ಜು.16–ಮದುವೆಯಾಗುವುದಾಗಿ ನಂಬಿಸಿ ದೈಹಿಕ ಸಂಪರ್ಕ ಹೊಂದಿದ ನಂತರ ಕಂಪ್ಯೂಟರ್ ಆಪರೇಟರ್ ಒಬ್ಬರನ್ನು ವಂಚಿಸಿದ ಆರೋಪದ ಮೇರೆಗೆ ಕೃಷಿ ಅಧಿಕಾರಿ ವಿರುದ್ಧ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರ ಹೋಬಳಿಯ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಎನ್.ಕೆ.ವಿಕಾಸ್(30) ಎಂಬಾತ 31 ವರ್ಷ ವಯಸ್ಸಿನ ಪಿರಿಯಾಪಟ್ಟಣ ತಾಲೂಕಿನ ಗ್ರಾಮವೊಂದರ ಕಂಪ್ಯೂಟರ್ ಆಪರೇಟರ್ ಸ್ನೇಹ ಬೆಳೆಸಿದ್ದಾನೆ. 2009ರಲ್ಲಿ ವಿವಾಹವಾಗಿ ಪತಿಯೊಂದಿಗೆ ಹೊಂದಾಣಿಕೆಯಾಗದ ಕಾರಣ ನ್ಯಾಯಾಲಯದಲ್ಲಿ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿದ್ದ ಈ ಮಹಿಳೆಯನ್ನು ಹುಣಸೂರಿನಲ್ಲಿರುವ ತನ್ನ ಮನೆಗೆ ಕರೆದೊಯ್ದು, ವಿಚ್ಛೇದನದ ನಂತರ ಮದುವೆ ಮಾಡಿಕೊಳ್ಳುವುದಾಗಿ ನಂಬಿಸಿ, ವಿಕಾಸ್ ದೈಹಿಕ ಸಂಪರ್ಕ ಹೊಂದಿದ್ದಾನೆ. ಈ ಮಹಿಳೆಗೆ ಕಳೆದ ಜ.4ರಂದು ನ್ಯಾಯಾಲಯದಲ್ಲಿ ಪತಿಯಿಂದ ವಿಚ್ಛೇದನ ದೊರೆತಿದೆ.

ಕ್ರೈಂ ಬಾಕ್ಸ್

ನಂತರವೂ ಈಕೆಯೊಂದಿಗೆ ವಿಕಾಸ್ ದೈಹಿಕ ಸಂಪರ್ಕ ಹೊಂದಿದ್ದು, ಆಕೆ ಗರ್ಭಿಣಿಯಾದಾಗ ಏ.3ರಂದು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಗರ್ಭಪಾತ ಮಾಡಿಸಿದ್ದಾನೆ. ಆನಂತರ ಆಕೆಯನ್ನು ಮದುವೆಯಾಗಲು ನಿರಾಕರಿಸಿದ ಕಾರಣ ಒಮ್ಮೆ ಮಹಿಳೆ ವಿಷ ಸೇವಿಸಿ ಆತ್ಮಹತ್ಯೆಗೂ ಯತ್ನಿಸಿದ್ದರು. ನಂತರ ಅವರು ಜು.4ರಂದು ಮಹಿಳಾ ಠಾಣೆಗೆ ದೂರು ಸಲ್ಲಿಸಿದ್ದು, ದೂರನ್ನು ಎಫ್‌ಐಆರ್ ಮಾಡುವ ಮುನ್ನ ಕೌನ್ಸಿಲಿಂಗ್‌ಗಾಗಿ ಪೊಲೀಸರು ಕರೆದಾಗ ಆತ ಠಾಣೆಗೆ ಹಾಜರಾಗಿಲ್ಲ. ಆದರೆ ಮಹಿಳಾ ಠಾಣೆಗೆ ನೀಡಿರುವ ದೂರನ್ನು ಹಿಂಪಡೆಯುವಂತೆಯೂ, ಮದುವೆಯಾಗಬೇಕೆಂದು ಪಟ್ಟು ಹಿಡಿದರೆ ಕೊಲೆ ಮಾಡುವುದಾಗಿಯೂ ಬೆದರಿಸಿದ ಹಿನ್ನೆಲೆಯಲ್ಲಿ ಜು.14ರಂದು ಮಹಿಳೆ ಮತ್ತೆ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮೈಸೂರು ಜಿಲ್ಲಾ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಬೈಕ್‌ನಿಂದ ಬಿದ್ದು ಯುವಕ ಸಾವು

ಮೈಸೂರು, ಜು.16–ಹಸುವಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಯತ್ನಿಸಿ ನಿಯಂತ್ರಣ ತಪ್ಪಿ ಕೆಳ ಬಿದ್ದ ಪರಿಣಾಮ ಸ್ಕೂಟರ್ ಸವಾರ ಸಾವನ್ನಪ್ಪಿದ ಘಟನೆ ಮೈಸೂರು ರಿಂಗ್ ರಸ್ತೆಯ ಶ್ರೀನಿಧಿ ಬಡಾವಣೆ ಮುಂಭಾಗ ಸಂಭವಿಸಿದೆ.

ಮೈಸೂರಿನ ಅಮೃತ್ ಎಕ್ಸ್‌ಟೆನ್ಷನ್ ನಿವಾಸಿ ಆರ್.ಕಿರಣ್(22) ಅಪಘಾತದಲ್ಲಿ ಮೃತಪಟ್ಟ ಯುವಕನಾಗಿದ್ದು, ಇವರು ಜು.14ರಂದು ಸಂಜೆ 5 ಗಂಟೆ ಸುಮಾರಿನಲ್ಲಿ ಸುಜುಕಿ ಆಕ್ಸಿಸ್ ಸ್ಕೂಟರ್ (ಕೆಎ 55 ಇಎ 4360)ನಲ್ಲಿ ರಿಂಗ್ ರಸ್ತೆಯಲ್ಲಿ ಮಹದೇವಪುರ ಜಂಕ್ಷನ್ ಕಡೆಯಿಂದ ನಾರಾಯಣ ಹೃದಯಾಲಯ ಕಡೆಗೆ ತೆರಳುತ್ತಿದ್ದಾಗ ಶ್ರೀನಿಧಿ ಬಡಾವಣೆ ಮುಂಭಾಗ ಹಸುವೊಂದು ಅಡ್ಡ ಬಂದಿದೆ. ಅದಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಪ್ರಯತ್ನಿಸಿ ಸ್ಕೂಟರ್ ಸಮೇತ ಬಿದ್ದ ಕಿರಣ್, ತಲೆಗೆ ತೀವ್ರ ಪೆಟ್ಟಾಗಿದ್ದು, ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ. ಈ ಸಂಬಂಧ ಸಿದ್ಧಾರ್ಥನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹದಿನಾರು ಗ್ರಾಮದ ವೃದ್ಧೆ ಹತ್ಯೆ

ನಂಜನಗೂಡು, ಜು.16–ವೃದ್ಧೆಯೋರ್ವರನ್ನು ದುಷ್ಕರ್ಮಿಗಳು ಹತ್ಯೆ ಮಾಡಿರುವ ಬಗ್ಗೆ ನಂಜನಗೂಡು ತಾಲೂಕಿನ ಹದಿನಾರು ಗ್ರಾಮದಿಂದ ವರದಿಯಾಗಿದೆ.

ಗ್ರಾಮದ ಮಹದೇವಮ್ಮ (60) ಎಂಬುವರು ಜು.13ರಂದು ಬೆಳಗ್ಗೆ ಹಸುಗಳನ್ನು ಹಿಡಿದುಕೊಂಡು ಜಮೀನಿಗೆ ಹೋದವರು ಮತ್ತೆ ಹಿಂತಿರುಗಲಿಲ್ಲ. ಆದರೆ ಜು.14ರಂದು ಬೆಳಗ್ಗೆ ಗ್ರಾಮದ ರಾಜಣ್ಣ ಎಂಬುವರ ಬಾಳೆತೋಟದ ಪಕ್ಕದಲ್ಲಿರುವ ಹಳ್ಳದ ನೀರಿನಲ್ಲಿ ಮಹದೇವಮ್ಮ ಅವರ ಮೃತದೇಹ ದೊರೆತಿದ್ದು, ಸೊಂಟದ ಕೆಳಭಾಗದಲ್ಲಿ ಬಟ್ಟೆ ಇರಲಿಲ್ಲ. ಈಕೆಯನ್ನು ದುಷ್ಕರ್ಮಿಗಳು ಹೊಡೆದು ಸಾಯಿಸಿರಬಹುದು ಎಂದು ಮಹದೇವಮ್ಮ ಪುತ್ರಿ ಶಿವಮ್ಮ ನೀಡಿದ ದೂರನ್ನು ದಾಖಲಿಸಿಕೊಂಡಿರುವ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ.

ಕೆನಡಾದಲ್ಲಿ ಸೇಫ್ಟಿ ಆಫೀಸರ್ ಆಮಿಷ: 2.81 ಲಕ್ಷ ವಂಚನೆ

ಮೈಸೂರು, ಜು.16–ಕೆನಡಾದಲ್ಲಿ ಸೇಫ್ಟಿ ಆಫೀಸರ್ ಕೆಲಸ ಕೊಡಿಸುವುದಾಗಿ ಹರಿಯಾಣ ಮೂಲದ ಕಂಪನಿವೊಂದು ಬೆಂಗಳೂರಿನ ಖಾಸಗಿ ಸಂಸ್ಥೆಯೊಂದರ ಸೇಫ್ಟಿ ಆಫೀಸರ್‌ಗೆ 2.81 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಹುಣಸೂರು ತಾಲೂಕು ಹೊಸಪೆಂಜನಹಳ್ಳಿ ಗ್ರಾಮದವರಾಗಿದ್ದು, ಬೆಂಗಳೂರಿನ ಮೈಕ್ರಾನ್ ಎಲೆಕ್ಟ್ರಿಕಲ್ಸ್ ಎಂಬ ಕಂಪನಿಯಲ್ಲಿ ಸುರಕ್ಷತಾ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಹೆಚ್.ಕೆ.ಮಧು(36) ವಂಚನೆಗೊಳಗಾದವರು.

ವಿವರ: ಕೆನಡಾದಲ್ಲಿ ಸೇಫ್ಟಿ ಆಫೀಸರ್ ಹುದ್ದೆಗೆ ಬೇಡಿಕೆ ಇದೆ ಎಂದು ಹುದ್ದೆ ಪಡೆಯುವ ಸಲುವಾಗಿ ಮಧು ಅವರು ಗೂಗಲ್‌ನಲ್ಲಿ ಸರ್ಚ್ ಮಾಡಿದಾಗ ಹರಿಯಾಣದ ಕರ್ನಾಲ್ ಎಂಬಲ್ಲಿನ ಮಿರಾಕಲ್ ಇಮಿಗ್ರೇಷನ್ ಕನ್ಸಲ್ಟೆಂಟ್ ಎಂಬ ಕಂಪನಿಯ ಜಾಹೀರಾತು ಕಂಡು ಬಂದಿದೆ. ಅದರಲ್ಲಿದ್ದ ಮೊಬೈಲ್ ನಂಬರ್‌ಗಳನ್ನು ಸಂಪರ್ಕಿಸಿದಾಗ ತನ್ವಿ ಶರ್ಮಾ ಎಂಬಾಕೆ ತನ್ನನ್ನು ಕಂಪನಿಯ ಕೌನ್ಸಿಲರ್ ಎಂದು ಪರಿಚಯಿಸಿಕೊಂಡು ಮಧು ಅವರ ಪಾಸ್‌ಪೋರ್ಟ್ ಮತ್ತು ರೆಸ್ಯೂಮ್ ಅನ್ನು ವಾಟ್ಸಾಪ್ ಮೂಲಕ ಪಡೆದುಕೊಂಡು ನೋಂದಣಿ ಶುಲ್ಕ 2000 ರೂ. ಪಾವತಿಸುವಂತೆ ತಿಳಿಸಿದ್ದಾಳೆ.

ನೋಂದಣಿ ಶುಲ್ಕ ಪಾವತಿಸಿದ ನಂತರ ವಿವಿಧ ಬಾಬ್ತುಗಳು ಎಂದು ಹಂತ ಹಂತವಾಗಿ ಆನ್‌ಲೈನ್ ಮೂಲಕ ಹಣವನ್ನು ವರ್ಗಾವಣೆ ಮಾಡಿಸಿಕೊಳ್ಳಲಾಗಿದೆ. ಕಳೆದ ಫೆ.9ರಂದು ಲೇಬರ್ ಮಾರ್ಕೆಟ್ ಇಂಫ್ಯಾಕ್ಟ್ ಅಸೆಸ್‌ಮೆಂಟ್ ಎಂಬ ಲೆಟರ್ ಅನ್ನು ಮಧು ಅವರಿಗೆ ಕಳುಹಿಸಿ ಅದಕ್ಕೆ ಸಹಿ ಮಾಡಿ ಕಳುಹಿಸುವಂತೆ ತಿಳಿಸಿದ್ದಾಳೆ. ಆಕೆ ಹೇಳಿದಂತೆ ಹಣ ಪಾವತಿಸುತ್ತಾ ಬಂದ ಮಧು, ಆಕೆ ನಿಗದಿಪಡಿಸಿದ್ದ ಮೊತ್ತದಲ್ಲಿ ಉಳಿಕೆ 97 ಸಾವಿರ ರೂ.ಗಳನ್ನು ಹರಿಯಾಣಕ್ಕೆ ಬಂದು ಕೊಡುವುದಾಗಿ ತಿಳಿಸಿ ಏ.7ರಂದು ಹರಿಯಾಣದ ಕರ್ನೂಲ್ ನಗರದ ಕಂಬೋಜಾ ಧರ್ಮಶಾಲಾ ರೈಲ್ವೆ ನಿಲ್ದಾಣದ ರಸ್ತೆಯಿಂದ ತನ್ವಿ ಶರ್ಮಾ ಮೊಬೈಲ್‌ಗೆ ಕರೆ ಮಾಡಿದಾಗ ಆಕೆ ಬಂದು 97 ಸಾವಿರ ರೂ. ಪಡೆದುಕೊಂಡು ಕಚೇರಿ ಇಂದು ಬಂದ್ ಆಗಿದೆ ಎಂದು ತಿಳಿಸಿ ರಶೀದಿಯನ್ನು ವಾಟ್ಸಾಪ್‌ನಲ್ಲಿ ಕಳುಹಿಸುವುದಾಗಿ ಹೇಳಿದ್ದಾಳೆ. ಒಟ್ಟು 2,81,600 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡ ತನ್ವಿ ಶರ್ಮಾ, ಮೊಬೈಲ್ ಸ್ವಿಚ್ ಆಫ್ ಆಗಿದೆ. ಅಲ್ಲದೇ ಹರಿಯಾಣದ ಆ ಕಂಪನಿಯ ರಾಹುಲ್, ದಿವ್ಯಾ ಶರ್ಮಾ, ಪೂಜಾ ಶರ್ಮಾ ಮತ್ತು ನಿಧಿ ಜಾರ್ಜ್ ಎಂಬುವರು ತನಗೆ ಕರೆ ಮಾಡಿ ಮತ್ತೆ ಹಣ ಜಮೆ ಮಾಡುವಂತೆ ಕೇಳುತ್ತಿದ್ದಾರೆ ಎಂದು ಮಧು ನೀಡಿದ ದೂರಿನ ಮೇರೆಗೆ 6 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಮೈಸೂರು ಜಿಲ್ಲಾ ಸೆನ್ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.


ಷೇರು ಮಾರುಕಟ್ಟೆಯಲ್ಲಿ ಲಾಭದ ಆಸೆ ತೋರಿಸಿ
ಮಂಡ್ಯ ಉದ್ಯಮಿಗೆ ಉಡುಪಿ ವ್ಯಕ್ತಿ 4.35 ಲಕ್ಷ ವಂಚನೆ

ಕೆ.ಎಂ.ದೊಡ್ಡಿ,ಜು.16–ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಲಾಭ ಬರುತ್ತದೆ ಎಂದು ನಂಬಿಸಿ ಕೆ.ಎಂ.ದೊಡ್ಡಿಯ ಡ್ರೈಫ್ರೂಟ್ಸ್ ಅಂಗಡಿ ಮಾಲೀಕನಿಗೆ ಉಡುಪಿಯ ವ್ಯಕ್ತಿಯೋರ್ವ 4.35 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಇಲ್ಲಿಗೆ ಸಮೀಪದ ಲಕ್ಷ್ಮೀಗೌಡನ ದೊಡ್ಡಿ ನಿವಾಸಿ, ಕೆ.ಎಂ.ದೊಡ್ಡಿಯಲ್ಲಿ ಡ್ರೈಫ್ರೂಟ್ಸ್ ಅಂಗಡಿ ನಡೆಸುತ್ತಿರುವ ಎನ್.ಎಲ್.ರಾಮಕೃಷ್ಣ(29) ವಂಚನೆಗೊಳಗಾದವರಾಗಿದ್ದು, ಇವರ ಸ್ನೇಹಿತ ಮಳವಳ್ಳಿ ಸಮೀಪದ ಕ್ಯಾತೇಗೌಡನದೊಡ್ಡಿಯ ರಾಜೇಶ್ ಎಂಬುವರ ಮೂಲಕ ಉಡುಪಿ ಜಿಲ್ಲೆ ಕಡಿಯಾಳಿ ಕುಂಜಿ ಬೆಟ್ಟ ಗ್ರಾಮದ ನಿತಿನ್ ಸುವರ್ಣ ಎಂಬಾತ ರಾಮಕೃಷ್ಣಗೌಡರಿಗೆ ಪರಿಚಯವಾಗಿದ್ದಾನೆ.

ತನ್ನ ಬಳಿ ಹಣ ಹೂಡಿಕೆ ಮಾಡಿದರೆ ಅದನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಿ ಪ್ರತೀ ವಾರ ಲಾಭವನ್ನು ನೀಡುವುದಾಗಿ ನಿತಿನ್ ನಂಬಿಸಿದ್ದಾನೆ. ಆತನ ಮಾತನ್ನು ನಂಬಿದ ರಾಮಕೃಷ್ಣ ಮಾ.11ರಿಂದ ಹಂತಹಂತವಾಗಿ 4.35 ಲಕ್ಷ ರೂ. ಆತನ ಅಕೌಂಟ್‌ಗೆ ವರ್ಗಾವಣೆ ಮಾಡಿದ್ದಾರೆ. ಒಮ್ಮೆ 15 ಸಾವಿರ ಮತ್ತೊಮ್ಮೆ 7500 ರೂ. ಲಾಭದ ಮೊತ್ತವನ್ನು ಫೋನ್ ಪೇ ಮೂಲಕ ವರ್ಗಾವಣೆ ಮಾಡಿದ್ದನ್ನು ಬಿಟ್ಟರೆ ನಂತರ ಲಾಭದ ಮೊತ್ತವನ್ನಾಗಲೀ, ಅಸಲು ಹಣವನ್ನಾಗಲೀ ನೀಡದೆ ವಂಚಿಸಲಾಗಿದೆ. ಕೆ.ಎಂ.ದೊಡ್ಡಿ ಠಾಣೆ ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ.

ಹೆಡ್ ಕಾನ್‌ಸ್ಟೇಬಲ್ ಪ್ರಕಾಶ್ ನಿಧನ



ಮೈಸೂರು, ಜು.16–ಅನಾರೋಗ್ಯದಿಂದ ಬಳಲುತ್ತಿದ್ದ ಮೈಸೂರಿನ ಆಲನಹಳ್ಳಿ ಪೊಲೀಸ್ ಠಾಣೆ ಹೆಡ್ ಕಾನ್‌ಸ್ಟೇಬಲ್ ಪ್ರಕಾಶ್(56) ನಿಧನರಾಗಿದ್ದಾರೆ. ಮೈಸೂರಿನ ಪೊಲೀಸ್ ಬಡಾವಣೆ 3ನೇ ಹಂತದ ನಿವಾಸಿಯಾಗಿದ್ದ ಅವರು ಪತ್ನಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ. ನಾಳೆ (ಭಾನುವಾರ) ಸ್ವಗ್ರಾಮ ಗುಂಡ್ಲುಪೇಟೆ ತಾಲೂಕಿನ ಕುರುಬರಹುಂಡಿ ಗ್ರಾಮದ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಮೈಸೂರು ಬಂಟರ ಕರ್ಮಭೂಮಿ

ಮಾಜಿ ಸಚಿವ ಬಿ.ರಮಾನಾಥ ರೈ ಅಭಿಮಾನದ ನುಡಿ



ಮೈಸೂರಿನ ವಿಜಯನಗರ 3ನೇ ಹಂತದ ಆಶಾ ಪ್ರಕಾಶ ಶೆಟ್ಟಿ ಬಂಟರ ಕನ್ವೆನ್ಷನ್ ಹಾಲ್‌ನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಬಂಟರ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಮೈಸೂರು, ಜು.16 (ಆರ್‌ಕೆ)–ದಕ್ಷಿಣ ಕನ್ನಡ ಜಿಲ್ಲೆ ಮೂಲ ಸ್ಥಳವಾದರೂ ಮೈಸೂರು ಬಂಟರ ಕರ್ಮಭೂಮಿ ಎಂದು ಮಾಜಿ ಸಚಿವ ಬಿ.ರಮಾನಾಥ ರೈ ಇಂದಿಲ್ಲಿ ತಿಳಿಸಿದ್ದಾರೆ.

ಬಂಟರ ಸಂಘ, ಮೈಸೂರು ಹಾಗೂ ಬಂಟರ ಚಾರಿಟಬಲ್ ಟ್ರಸ್ಟ್ ಸಹಯೋಗದೊಂದಿಗೆ ಮೈಸೂರಿನ ವಿಜಯನಗರ 3ನೇ ಹಂತದ ಆಶಾ ಪ್ರಕಾಶಶೆಟ್ಟಿ ಬಂಟರ ಕನ್ವೆನ್ಷನ್ ಹಾಲ್‌ನಲ್ಲಿ ಶನಿವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಸಾಧಕರ ಗೌರವಿಸಿದ ಅವರು, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಬಂಟರ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಮಾತನಾಡಿದರು.

ದೇವರಾಜ ಅರಸರ ಅವಧಿಯಲ್ಲಿ ಭೂ ಕಾಯ್ದೆ ಜಾರಿಗೆ ಬಂದಾಗ ಹೆದರದೇ ಬಂಟರ ಸಮುದಾಯದವರು ವಿದೇಶಗಳಿಗೆ ತೆರಳಿ ನೆಲೆ ಕಂಡುಕೊಂಡರು. ಅವರಲ್ಲಿ ಕೆಲವರು ಮೈಸೂರಿಗೆ ಬಂದು ಉದ್ಯೋಗ ಪಡೆದರೆ, ಮತ್ತೆ ಕೆಲವರು ಸ್ವಂತ ಉದ್ದಿಮೆ ಮಾಡಿ ಈಗಲೂ ಸಾಂಸ್ಕೃತಿಕ ನಗರಿಯಲ್ಲಿ ವೃತ್ತಿ ಮಾಡುತ್ತಿದ್ದಾರೆ ಎಂದರು.

ನಿಮ್ಮ ಮೂಲ ಸ್ಥಳ ದಕ್ಷಿಣ ಕನ್ನಡ ಜಿಲ್ಲೆಯಾದರೂ ಮೈಸೂರು ಕರ್ಮಭೂಮಿಯಾಗಿದೆ. ನೀವು ಕೆಲಸ ಮಾಡುತ್ತಿರುವ ಸ್ಥಳದ ಜನರೊಟ್ಟಿಗೆ ಬೆರೆತು ಅವರ ವಿಶ್ವಾಸ ಗಳಿಸುವ ಮೂಲಕ ಬಾಂಧವ್ಯ ಬೆಸೆದು ಗುರಿ ಮುಟ್ಟುವತ್ತ ಸಾಗಿ ಎಂದ ರಮಾನಾಥ ರೈ ಅವರು, ಕೈಗಾರಿಕೆ, ಉದ್ದಿಮೆ, ವ್ಯಾಪಾರ ಹೀಗೆ ನಾನಾ ವೃತ್ತಿಯಲ್ಲಿ ಯಶಸ್ಸು ಗಳಿಸಿ ಎಂದು ಶುಭ ಕೋರಿದರು.

ರಾಜ್ಯ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಕೆ.ಗೋಪಾಲ ಶೆಟ್ಟಿ, ಪಿಹೆಚ್‌ಡಿ ಪದವೀಧರ ಡಾ.ಶ್ರೀನಿವಾಸ ಶೆಟ್ಟಿ ಹಾಗೂ ಗೌರವ ಡಾಕ್ಟರೇಟ್ ಪದವಿ ಪಡೆದಿರುವ ಡಾ.ಜಗನ್ನಾಥ ಎಸ್.ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಬಂಟರ ಸಮುದಾಯದ 25 ವಿದ್ಯಾರ್ಥಿಗಳಿಗೆ ರಮಾನಾಥ ರೈ, ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಿದರು. ಬಂಟರ ಸಂಘದ ಅಧ್ಯಕ್ಷ ಟಿ.ಪ್ರಭಾಕರ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಶಾಸಕ ಜಿ.ಟಿ.ದೇವೇಗೌಡ, ಮಾಜಿ ಶಾಸಕ ವಾಸು, ಬಂಟರ ಚಾರಿಟಬಲ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಗಣೇಶ ನಾರಾಯಣ ಹೆಗ್ಡೆ ಡೆಪ್ಯುಟಿ ಮ್ಯಾನೇಜಿಂಗ್ ಟ್ರಸ್ಟಿ ಸುರೇಶ್ ಆಳ್ವಾ ತುಕಾರಾಂ ರೈ, ಬಂಟರ ಸಂಘದ ಉಪಾಧ್ಯಕ್ಷ ಸರ್ವೋತ್ತಮ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ನಂಜಪ್ಪ ಶೆಟ್ಟಿ, ಭಾಗವತ್ ಪಟ್ಲ ಸತೀಶ ಶೆಟ್ಟಿ ಸೇರಿದಂತೆ ಹಲವರು ಭಾಗವಹಿಸಿದ್ದರು. ಸಂಜೆ 'ಚಕ್ರವ್ಯೂಹ' ಮತ್ತು 'ಶ್ರೀನಿವಾಸ ಕಲ್ಯಾಣ' ಕಥಾಭಾಗದ ಯಕ್ಷಗಾನ ಕಾರ್ಯಕ್ರಮ ನಡೆಯಿತು. ಸಾವಿರಾರು ಮಂದಿ ಯಕ್ಷಗಾನ ಪ್ರದರ್ಶನ ವೀಕ್ಷಿಸಿದರು.

ಜಮೀರ್‌ಗೆ ಎಸಿಬಿ ನೋಟಿಸ್



ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣದಲ್ಲಿ ಸೂಕ್ತ ದಾಖಲೆಗಳೊಂದಿಗೆ ಹತ್ತು ದಿನಗಳೊಳಗೆ ವಿಚಾರಣೆಗೆ ಹಾಜರಾಗುವಂತೆ ಶಾಸಕ ಜಮೀರ್ ಅಹಮ್ಮದ್ ಖಾನ್ ಅವರಿಗೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಶನಿವಾರ ನೋಟಿಸ್ ಜಾರಿ ಮಾಡಿದೆ. ಇಡಿ ರವಾನಿಸಿದ್ದ ವರದಿ ಆಧರಿಸಿ ಜಮೀರ್ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಿರುವ ಎಸಿಬಿ, ಜು.5ರಂದು ಶಾಸಕರ ಮನೆ, ಕಚೇರಿಗಳ ಮೇಲೆ ದಾಳಿ ಮಾಡಿತ್ತು. ಅಧಿಕೃತ ಆದಾಯಕ್ಕೆ ಹೋಲಿಸಿದರೆ ಜಮೀರ್ 87.34 ಕೋಟಿ ಮೌಲ್ಯದ ಅಕ್ರಮ ಆಸ್ತಿ ಹೊಂದಿದ್ದಾರೆ ಎಂಬ ಆರೋಪ ಎಫ್‌ಐಆರ್‌ನಲ್ಲಿದೆ. ಈ ಸಂಬಂಧ ದಾಖಲೆಗಳ ಪರಿಶೀಲನೆಗಾಗಿ ತನಿಖಾ ಸಂಸ್ಥೆ ಶೋಧ ನಡೆಸಿತ್ತು.

ಪ್ರತ್ಯೇಕ 2 ಕೋಟಿ ವೆಚ್ಚದ ಕಾಮಗಾರಿಗೆ ಶಾಸಕ ನಾಗೇಂದ್ರ ಚಾಲನೆ





ಮೈಸೂರು,ಜು.16(ಎಸ್‌ಬಿಡಿ)–ಮೈಸೂರಿನ ಚಾಮರಾಜ ಕ್ಷೇತ್ರದ ವಿವಿಧೆಡೆ ಕೈಗೊಂಡಿರುವ 2 ಕೋಟಿ ರೂ.ಗೂ ಹೆಚ್ಚು ಅಂದಾಜು ಮೊತ್ತದ ಕಾಮಗಾರಿಗಳಿಗೆ ಶಾಸಕ ಎಲ್.ನಾಗೇಂದ್ರ ಶುಕ್ರವಾರ ಚಾಲನೆ ನೀಡಿದರು.


ಶಾಸಕರ ವಿವೇಚನಾ ಎಸ್‌ಎಫ್‌ಸಿ ಯೋಜನೆಯ 2 ಕೋಟಿ ರೂ. ವಿಶೇಷ ಅನುದಾನದಲ್ಲಿ ಲಕ್ಷ್ಮೀಕಾಂತ ನಗರದ ಇಡಬ್ಲ್ಯೂಎಸ್ ಮನೆಗಳ ರಸ್ತೆ, ಸುಬ್ರಮಣ್ಯ ನಗರ, ಹೆಬ್ಬಾಳು 2 ಮತ್ತು 3ನೇ ಹಂತದ ರಸ್ತೆಗಳ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ ಕಾಮಗಾರಿ ಹಾಗೂ ಮೇಯರ್ ವಿವೇಚನಾ ಸಾಮಾನ್ಯ ಅನುದಾನದ 19 ಲಕ್ಷ ರೂ. ವೆಚ್ಚದಲ್ಲಿ ಕೈಗೊಂಡಿರುವ ಮೇಟಗಳ್ಳಿ ಹೆಬ್ಬಾಗಿಲು ಹಾಗೂ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಕಾರ್ಪೋರೇಟರ್‌ಗಳಾದ ಲಕ್ಷ್ಮೀ ಶಿವಣ್ಣ, ರಮೇಶ್, ಎಸ್‌ಬಿಎಂ ಮಂಜು, ಪೈಲ್ವಾನ್ ಶ್ರೀನಿವಾಸ್, ಪ್ರೇಮ ಶಂಕರೇಗೌಡ ಅವರೊಂದಿಗೆ ಶಾಸಕ ಎಲ್.ನಾಗೇಂದ್ರ ಭೂಮಿಪೂಜೆ ನೆರವೇರಿಸಿದರು.

ಮಾಜಿ ಕಾರ್ಪೋರೇಟರ್ ದೇವರಾಜ್, ನಗರ ಪಾಲಿಕೆ ಅಧೀಕ್ಷಕ ಇಂಜಿನಿಯರ್ ಮಹೇಶ್, ಅಭಿವೃದ್ಧಿ ಅಧಿಕಾರಿ ಮನುಗೌಡ, ಬಿಜೆಪಿ ನಗರ ಯುವಮೋರ್ಚಾ ಅಧ್ಯಕ್ಷ ಎಂ.ಜಿ.ಕಿರಣ್‌ಗೌಡ, ಚಾಮರಾಜ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪುನೀತ್, ಮಹಿಳಾ ಮೋರ್ಚಾ ಅಧ್ಯಕ್ಷೆ ತನುಜಾ, ಮುಖಂಡರಾದ ಕಿರಣ್ ಸುಖಧರೆ, ಭರತ್‌ಕುಮಾರ್, ಗುರು, ವೇಣುಗೋಪಾಲ್, ಅರುಣ್, ಹರೀಶ್, ಶುಭ, ಮಾದೇಶ್, ಶಾಂತಪ್ಪ, ಜಯಪ್ಪ, ಕಾರ್ತಿಕ್, ಮಹೇಶ್ ಕುದೇರು, ನರಸಿಂಹ ಮೂರ್ತಿ, ರವೀಂದ್ರ, ಮಧು, ರವಿ ಸೇರಿದಂತೆ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಅತಿವೃಷ್ಟಿಯಿಂದ ಆಗುವ ಹಾನಿಗೆ ಪರಿಹಾರ ಮೊತ್ತ ಹೆಚ್ಚಳ: ಸಂತ್ರಸ್ತರು ಕೊಂಚ ನಿರಾಳ

ಮೈಸೂರು, ಜು.16(ಎಸ್‌ಬಿಡಿ)–ಅತಿವೃಷ್ಟಿಯಿಂದ ಉಂಟಾದ ಬೆಳೆಹಾನಿಗೆ ನೀಡುವ ಪರಿಹಾರ ಮೊತ್ತವನ್ನು ರಾಜ್ಯ ಸರ್ಕಾರ ಹೆಚ್ಚಿಸಿದ್ದು, ನಷ್ಟ ಅನುಭವಿಸಿದ ರೈತರು ಕೊಂಚ ನಿರಾಳರಾಗಿದ್ದಾರೆ.

ರಾಜ್ಯ ವಿಪತ್ತು ನಿರ್ವಹಣಾ ನಿಧಿ(ಎಸ್‌ಡಿಆರ್‌ಎಫ್) ಮತ್ತು ರಾಷ್ಟ್ರೀಯ ವಿಪತ್ತು ಸ್ಪಂದನಾ ನಿಧಿ(ಎನ್‌ಡಿಆರ್‌ಎಫ್) ಮಾರ್ಗ



ಸೂಚಿಯನ್ವಯ ನಿಗದಿಪಡಿಸಿದ್ದ ಪರಿಹಾರಕ್ಕೆ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ಸೇರ್ಪಡೆ ಮಾಡಿದ್ದು, ಪರಿಷ್ಕೃತ ಪರಿಹಾರ ಮೊತ್ತದ ಪಟ್ಟಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಟ್ವೀಟ್‌ನಲ್ಲಿ ಹಂಚಿಕೊಂಡಿದ್ದಾರೆ.

ಪರಿಷ್ಕೃತ ಬೆಳೆ ಪರಿಹಾರ: ಎಸ್‌ಡಿಆರ್‌ಎಫ್ ಹಾಗೂ ಎನ್‌ಡಿಆರ್‌ಎಫ್ ಮಾರ್ಗಸೂಚಿಯನ್ವಯ ಮಳೆಯಾಶ್ರಿತ ಬೆಳೆ ನಷ್ಟಕ್ಕೆ ಪ್ರತಿ ಹೆಕ್ಟೇರ್‌ಗೆ 6,800 ರೂ. ನಿಗದಿಯಾಗಿತ್ತು. ಇದನ್ನು ದುಪ್ಪಟ್ಟು ಮಾಡಿ 13,600 ರೂ. ಪರಿಹಾರ ಮೊತ್ತ ನಿಗದಿಪಡಿಸಲಾಗಿದೆ. ನೀರಾವರಿ ಪ್ರದೇಶದ ಪ್ರತಿ ಹೆಕ್ಟೇರ್ ಬೆಳೆಗಿದ್ದ 13,500 ರೂ. ಪರಿಹಾರವನ್ನು 25 ಸಾವಿರ ರೂ.ಗೆ ಹೆಚ್ಚಿಸಲಾಗಿದೆ. ಇನ್ನು ಬಹುವಾರ್ಷಿಕ ಬೆಳೆ ನಷ್ಟಕ್ಕೆ ನೀಡುವ ಪರಿಹಾರವನ್ನೂ ಪರಿಷ್ಕರಿಸಿ 18ರಿಂದ 28 ಸಾವಿರ ರೂ.ಗೆ ಹೆಚ್ಚಿಸಲಾಗಿದೆ. ಜೀವ ಹಾನಿ, ಮಳೆ ಹಾನಿ, ಗೃಹೋಪಯೋಗಿ ವಸ್ತುಗಳ ಹಾನಿಗೆ ನೀಡಲಾಗುವ ಪರಿಹಾರವನ್ನೂ ಪರಿಷ್ಕರಣೆ ಮಾಡಿ ಮೊನ್ನೆಯಷ್ಟೇ ಸರ್ಕಾರ ಆದೇಶ ಹೊರಡಿಸಿದ್ದು, ಇದರ ಬೆನ್ನಲ್ಲೇ ಬೆಳೆ ಹಾನಿ ಪರಿಹಾರವನ್ನೂ ಹೆಚ್ಚಿಸಿದೆ. ಕೇಂದ್ರ ಸರ್ಕಾರ ಮಾನವ ಜೀವ ಹಾನಿಗೆ ನಿಗದಿಪಡಿಸಿದ್ದ 4 ಲಕ್ಷ ರೂ.ಗಳಿಂದ 5 ಲಕ್ಷ ರೂ.ಗೆ, ಮನೆಗೆ ನೀರು ನುಗ್ಗಿ ಗೃಹೋಪಯೋಗಿ ವಸ್ತುಗಳು, ಬಟ್ಟೆಬರೆ ಹಾನಿಯಾದರೆ ನೀಡಲಾಗುವ 3,800 ರೂ. ಪರಿಹಾರವನ್ನು 10 ಸಾವಿರ ರೂ.ಗೆ ಹೆಚ್ಚಿಸಲಾಗಿದೆ. ಶೇ.75ಕ್ಕಿಂತ ಹೆಚ್ಚಿನ ಸಂಪೂರ್ಣ ಮನೆ ಹಾನಿ ಸಂಭವಿಸಿದ್ದರೆ 95,100 ರೂ. ಬದಲು 5 ಲಕ್ಷ ರೂ., ಶೇ.25 ರಿಂದ 75ರಷ್ಟು ಮನೆ ಹಾನಿ ಸಂಭವಿಸಿ ಅದನ್ನು ಕೆಡವಿ ಹೊಸದಾಗಿ ನಿರ್ಮಿಸಲು 5 ಲಕ್ಷ ರೂ. ಅಥವಾ ದುರಸ್ತಿ ಮಾಡಬಹುದಾಗಿದ್ದರೆ 3 ಲಕ್ಷ ರೂ. ನೀಡಲು ನಿರ್ಧರಿಸಲಾಗಿದೆ. ಮನೆಯ ಶೇ.15 ರಿಂದ 25ರಷ್ಟು ಭಾಗಶಃ ಹಾನಿಯಾಗಿದ್ದರೆ ನೀಡಲಾಗುವ 5,200 ರೂ. ಪರಿಷ್ಕರಿಸಿ 50 ಸಾವಿರ ರೂ. ನಿಗದಿಪಡಿಸಲಾಗಿದೆ.

ಮೈಸೂರಲ್ಲೂ ಅಪಾರ ಬೆಳೆ ಹಾನಿ

ಮಳೆ ಪರಿಣಾಮ ನಂಜನಗೂಡು ತಾಲೂಕಿನಲ್ಲಿ 99.28 ಹೆಕ್ಟೆರ್, ಮೈಸೂರು ತಾಲೂಕಿನಲ್ಲಿ 27.40 ಹೆಕ್ಟೆರ್, ಕೆ.ಆರ್.ನಗರ ತಾಲೂಕಿನಲ್ಲಿ 11.78 ಹೆಕ್ಟೆರ್, ಪಿರಿಯಾಪಟ್ಟಣ ತಾಲೂಕಿನಲ್ಲಿ 10 ಹೆಕ್ಟೆರ್ ಸೇರಿದಂತೆ ಜಿಲ್ಲೆಯಲ್ಲಿ ಸುಮಾರು 150 ಹೆಕ್ಟೆರ್ ಪ್ರದೇಶದಲ್ಲಿದ್ದ ಬೆಳೆ ಹಾನಿಯಾಗಿದೆ. ಪ್ರಮುಖವಾಗಿ ಭತ್ತ, ರಾಗಿ, ಮುಸುಕಿನಜೋಳ, ಉದ್ದು, ಅಲಸಂದೆ, ಅವರೆ, ಎಳ್ಳು, ಸೂರ್ಯಕಾಂತಿ ಹೀಗೆ ಆಹಾರಧಾನ್ಯ ಹಾಗೂ ವಿವಿಧ ವಾಣಿಜ್ಯ ಬೆಳೆ ಮಳೆಯಿಂದ ಹಾನಿಯಾಗಿದೆ. ಅಲ್ಲದೆ ಬಹುವಾರ್ಷಿಕ ಬೆಳೆಯೂ ನಷ್ಟವಾಗಿದ್ದು, ಅಂಕಿಅಂಶ ಲಭ್ಯವಾಗಬೇಕಿದೆ.

ಮೈಸೂರು ವಿವಿ ಕುಲಪತಿಗಳ ವಿರುದ್ಧ ಡಾ.ಮಹದೇವ ಭ್ರಷ್ಟಾಚಾರ ಆರೋಪ

ಖಾಸಗಿ ವ್ಯಕ್ತಿಯ ವಿಶೇಷಾಧಿಕಾರಿಯಾಗಿ ನೇಮಿಸಿಕೊಂಡು ಅಕ್ರಮ

ಮೈಸೂರು, ಜು.16(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಜಿ. ಹೇಮಂತ್‌ಕುಮಾರ್ ಅವರು ವಿವಿಧ ಕಾಮಗಾರಿ ಸೇರಿದಂತೆ ಇನ್ನಿತರ ಉದ್ದೇಶಕ್ಕೆ ಕೋಟ್ಯಾಂತರ ರೂ. ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಮಾಜಿ ಸಿಂಡಿಕೇಟ್ ಸದಸ್ಯರೂ ಆದ ಒಕ್ಕಲಿಗರ ಸಂಘದ ಮಾಜಿ ನಿರ್ದೇಶಕ ಡಾ.ಕೆ.ಮಹದೇವ ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಕೆಲವರ ತಂಡ ಕಟ್ಟಿಕೊಂಡು ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಭ್ರಷ್ಟಾಚಾರದಿಂದ ಸಂಪಾದಿಸಿದ ಹಣದಿಂದ ಎರಡು ಇಂಜಿನಿಯರಿಂಗ್ ಕಾಲೇಜು ಮುನ್ನಡೆಸುತ್ತಿದ್ದಾರೆ. ಎರಡು ಐಷಾರಾಮಿ ಕಾರು ಖರೀದಿಸಿದ್ದಾರೆ. ವಿಶೇಷ ಅಧಿಕಾರಿಯಾಗಿ ವಿವಿಯ ಸಿಬ್ಬಂದಿಯೇ ಅಲ್ಲದ ಚೇತನ್ ಗೌಡ ಎಂಬುವವರನ್ನು ನಿಯೋಜಿಸಿಕೊಂಡಿದ್ದಾರೆ. ಇವರೆಲ್ಲರೂ ಸೇರಿ ಹಣ ಕೊಳ್ಳೆ ಹೊಡೆಯುತ್ತಿದ್ದಾರೆ. ಕಾಮಗಾರಿಗಳ ಹೆಸರಲ್ಲಿ 55 ಕೋಟಿ ರೂ., ಸಿಬ್ಬಂದಿಯ ಪಿಂಚಣಿ ಹಣ 75 ಕೋಟಿ ರೂ. ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಡಾ.ಕೆ.ಮಹದೇವ ಆರೋಪಿಸಿದರು.

ಮೈಸೂರು ವಿವಿಯ ಮಾನವಿಕ ವಿಭಾಗದ ಕಟ್ಟಡದ ಮೇಲೆ ಸೋಲಾರ್ ಪ್ಯಾನಲ್ ಅಳವಡಿಸಿರುವುದಾಗಿ ಹೇಳಿ ಬಿಲ್ ಮಾಡಿಕೊಂಡಿದ್ದಾರೆ. ಆದರೆ ಅಲ್ಲಿ ಯಾವುದೇ ಸೋಲಾರ್ ಪ್ಯಾನಲ್ ಇರುವುದಿಲ್ಲ. ಪೀಠೋಪಕರಣ ಖರೀದಿಯಲ್ಲೂ ಭಾರೀ ಅವ್ಯವಹಾರ ನಡೆಸಿದ್ದಾರೆ. ಈ ಸಂಬಂಧ ಅಗತ್ಯ ದಾಖಲೆಗಳೊಂದಿಗೆ ರಾಜ್ಯಪಾಲರಿಗೆ ದೂರು ನೀಡಲಾಗಿದೆ ಎಂದರು. ಈ ಬಗ್ಗೆ ಪ್ರತಿಕ್ರಿಯೆಗೆ ಮೈಸೂರು ವಿವಿ ಕುಲಪತಿ ಪ್ರೊ. ಹೇಮಂತ್‌ಕುಮಾರ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಆದರೆ ಅವರ ಸಂಪರ್ಕ ಸಾಧ್ಯವಾಗಲಿಲ್ಲ.


ಇಂದು ಕಾಂಗ್ರೆಸ್‌ನ ಮುಂಚೂಣಿ ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳ ಪದಗ್ರಹಣ

ಮೈಸೂರು,ಜು.16(ಪಿಎಂ)–ಕಾಂಗ್ರೆಸ್ ಪಕ್ಷದ ಚಾಮುಂಡೇಶ್ವರಿ ಮತ್ತು ಇಲವಾಲ–ಜಯಪುರ ಬ್ಲಾಕ್ ಕಾಂಗ್ರೆಸ್ ಸಮಿತಿಗಳ ಮುಂಚೂಣಿ ಘಟಕಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಜು.17ರಂದು ಮಧ್ಯಾಹ್ನ 3ಕ್ಕೆ ನಡೆಯಲಿದ್ದು, ವಿಪಕ್ಷ ನಾಯಕ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ವಿವಿಧ ಮುಂಚೂಣಿ ಘಟಕಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳನ್ನಾಗಿ ನೇಮಕ ಮಾಡಿದ್ದು, ಸದರಿ ಘಟಕಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಪದಗ್ರಹಣ ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆಯಲಿದೆ. ಜಿಲ್ಲಾಧ್ಯಕ್ಷ ಡಾ.ವಿಜಯ್‌ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ, ಮಾಜಿ ಶಾಸಕ ಕೆ.ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಹೆಚ್.ಪಿ.ಮಂಜುನಾಥ್, ಡಾ.ಯತೀಂದ್ರ ಸಿದ್ದರಾಮಯ್ಯ, ಅನಿಲ್ ಚಿಕ್ಕಮಾದು, ಎಂಎಲ್‌ಸಿಗಳಾದ ಡಾ.ತಿಮ್ಮಯ್ಯ, ಜಿ.ಮಧುಮಾದೇಗೌಡ, ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್, ಕಳಲೆ ಕೇಶವಮೂರ್ತಿ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ಬ್ರಾಹ್ಮಣ ಮೀಸಲಾತಿ ಹಿಂಪಡೆಯಿರಿ ಎಂಬ ಸಿದ್ದರಾಮಯ್ಯರ ಹೇಳಿಕೆ ಖಂಡಿಸುತ್ತೇನೆ

ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ಬೇಸರ



ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಬ್ರಾಹ್ಮಣ ಸಮುದಾಯದ 54 ಮಂದಿಯನ್ನು ಅಭಿನಂದಿಸಲಾಯಿತು.

ಮೈಸೂರು, ಜು.16(ಜಿಎ)– ಬ್ರಾಹ್ಮಣ ಸಮುದಾಯಕ್ಕೆ ನೀಡಿರುವ ಶೇ.10 ಮೀಸಲಾತಿಯನ್ನು ಹಿಂಪಡೆಯಬೇಕು ಎಂಬ ಸಿದ್ದರಾಮಯ್ಯ ಅವರ ಹೇಳಿಕೆಯನ್ನು ಖಂಡಿಸುತ್ತೇನೆ ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ತಿಳಿಸಿದ್ದಾರೆ.

ಮೈಸೂರಿನ ಸಾಹುಕಾರ್ ಚೆನ್ನಯ್ಯ ರಸ್ತೆಯಲ್ಲಿರುವ ಬಬ್ಬೂರು ಕಮ್ಮೆ ಸಭಾಂಗಣದಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಪ್ರತಿಭೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಬ್ರಾಹ್ಮಣ ಸಮುದಾಯದವರು ಮುಂದುವರೆದ ಸಮುದಾಯದವರು ಎಂದು ಯಾವುದೇ ಸರ್ಕಾರಗಳು ಬಂದರೂ ಯಾವುದೇ ಮೀಸಲಾತಿ ನೀಡುತ್ತಿರಲಿಲ್ಲ. ಆದರೆ, ಮೋದಿ ಅವರು ಬಂದ ನಂತರ ಈ ಸಮುದಾಯವನ್ನು ಗುರುತಿಸಿ ನಮಗೂ ಶೇ.10 ಮೀಸಲಾತಿಯನ್ನು ಘೋಷಿಸಿದರು. ಈ ಮೀಸಲಾತಿ ದೇಶದ ಇತರೆ ರಾಜ್ಯಗಳಲ್ಲೂ ಅನುಷ್ಠಾನಗೊಂಡಿದೆ. ಆದರೆ ಕರ್ನಾಟಕದಲ್ಲಿ ನಾವು ಬೆಂಬಲಿಸಿದ ಬಿಜೆಪಿಯೇ ಅಧಿಕಾರದಲ್ಲಿದ್ದರೂ ಇದು ಇನ್ನೂ ಅನುಷ್ಠಾನಗೊಂಡಿಲ್ಲ. ಆದ್ದರಿಂದ ಇಲ್ಲಿರುವ ಬಿಜೆಪಿ ಮುಖಂಡರು ಮೀಸಲಾತಿ ಅನುಷ್ಠಾನಗೊಳ್ಳುವಂತೆ ಮಾಡಬೇಕು ಎಂದು ಹೇಳಿದರು.

ಮೋದಿ ಅವರು ಮೀಸಲಾತಿ ಘೋಷಿಸಿದ್ದನ್ನು ಮಾಜಿ ಸಿಎಂ ಸಿದ್ದರಾಮಯ್ಯ ವಿರೋಧಿಸಿದ್ದಾರೆ. ನಮಗೆ ಮೀಸಲಾತಿ ನೀಡುವುದರಿಂದ ಸಂವಿಧಾನಕ್ಕೆ ಧಕ್ಕೆಯಾಗುತ್ತದೆ ಎಂಬ ಹೇಳಿಕೆ ನೀಡಿದ್ದಾರೆ. ಸಿದ್ದರಾಮಯ್ಯ ಅವರಿಗೆ ಮುಂದುವರೆದಿರುವ ಸಮುದಾಯ ಬಗ್ಗೆ ಹೊಟ್ಟೆ ಕಿಚ್ಚಿದೆ ಎಂದು ತಿಳಿಯುತ್ತದೆ ಎಂದು ಕಿಡಿಕಾರಿದರು.

ಕಾರ್ಪೋರೇಟರ್ ಮಾ.ವಿ.ರಾಮ್‌ಪ್ರಸಾದ್ ಮಾತನಾಡಿ, ಈ ಸಮುದಾಯದವರು ಯಾರನ್ನು ಬೆಳೆಯಲು ಬಿಡುವುದಿಲ್ಲ ಎಂದು ಕೆಲವರು ಇತ್ತೀಚೆಗೆ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಆದರೆ, ನಾವು ನಮ್ಮ ಬುದ್ಧಿವಂತಿಕೆ ಮತ್ತು ಶ್ರಮದಿಂದ ಮೇಲೆ ಬರುತ್ತಿದ್ದೇವೆ ಎಂದರು.

ಮೊದಲು ಪಾಲಿಕೆಯಲ್ಲಿ ಲ್ಯಾಪ್‌ಟಾಪ್ ಖರೀದಿಸಲು ಬಿಇ ಮತ್ತು ಮೆಡಿಕಲ್ ವ್ಯಾಸಂಗ ಮಾಡುವ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಮಾತ್ರ 30 ಸಾವಿರ ರೂ. ನೀಡುತ್ತಿದ್ದರು. ಬ್ರಾಹ್ಮಣ ಸಮುದಾಯದಲ್ಲಿಯೂ ಪ್ರತಿಭಾವಂತ ಬಡ ವಿದ್ಯಾರ್ಥಿಗಳು ಇದ್ದಾರೆ. ಅವರಿಗೂ ಲ್ಯಾಪ್‌ಟಾಪ್ ಪಡೆಯಲು 30 ಸಾವಿರ ರೂ. ನೀಡಿ ಎಂದು ಕೌನ್ಸಿಲ್ ಸಭೆಯಲ್ಲಿ ಹೋರಾಟ ಮಾಡಿದ್ದೆ. ಈಗ ಪ್ರತಿಭಾವಂತ ವಿದ್ಯಾರ್ಥಿಗಳು ಈ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಪ್ರತಿಭೋತ್ಸವ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಬ್ರಾಹ್ಮಣ ಸಮುದಾಯದ 54 ವಿದ್ಯಾರ್ಥಿಗಳಿಗೆ ಅಭಿನಂದಿಸಲಾಯಿತು.

ಇದೇ ಸಂದರ್ಭದಲ್ಲಿ ಇಳೈ ಆಳ್ವಾರ್ ಸ್ವಾಮೀಜಿ, ಮೈಸೂರು ನಗರ ಬಿಜೆಪಿ ಅಧ್ಯಕ್ಷ ಟಿ.ಎಸ್. ಶ್ರೀವತ್ಸ, ಸಮಾಜ ಸೇವಕ ಡಾ.ಕೆ. ರಘುರಾಮ್ ವಾಜಪೇಯಿ, ಪಾಲಿಕೆ ಸದಸ್ಯ ಎಂ.ಸಿ. ರಮೇಶ್, ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷ ಹೆಚ್.ಎನ್. ಶ್ರೀಧರ್ ಮೂರ್ತಿ, ಹರೀಶ್, ಸುಚೇಂದ್ರ, ಚಕ್ರಪಾಣಿ, ಜ್ಯೋತಿ, ನಾಗಶ್ರೀ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಶನಿವಾರ	123.54 ಅಡಿ
ಒಳಹರಿವು	88836 ಕ್ಯೂಸೆಕ್
ಹೊರಹರಿವು	85639 ಕ್ಯೂಸೆಕ್

ಕಬಿನಿ ನೀರಿನ ಮಟ್ಟ




ಗರಿಷ್ಠ ಮಟ್ಟ	2284.00 ಅಡಿ
ಶನಿವಾರ	2282.35 ಅಡಿ
ಒಳ ಹರಿವು	33791 ಕ್ಯೂಸೆಕ್
ಹೊರ ಹರಿವು	32000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಶನಿವಾರ	2854.39 ಅಡಿ
ಒಳ ಹರಿವು	10412 ಕ್ಯೂಸೆಕ್
ಹೊರ ಹರಿವು	8354 ಕ್ಯೂಸೆಕ್

ಹೇಮಾವತಿ ನೀರಿನ ಮಟ್ಟ



ಗರಿಷ್ಠ ಮಟ್ಟ	2922 ಅಡಿ
ಶನಿವಾರ	2920.30 ಅಡಿ
ಒಳ ಹರಿವು	46063 ಕ್ಯೂಸೆಕ್
ಹೊರ ಹರಿವು	47130 ಕ್ಯೂಸೆಕ್

ಒಂದನೇ ಪುಟದಿಂದ

ಮೈಸೂರಲ್ಲೂ ಬೂಸ್ಟರ್ ಡೋಸ್

ಆಸ್ಪತ್ರೆಯಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲಾ ಅರ್ಹರಿಗೆ ಬೂಸ್ಟರ್ ಡೋಸ್ ಕೊರೊನಾ ಲಸಿಕೆ ನೀಡುವ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಏಕ ಕಾಲದಲ್ಲಿ ಜಿಲ್ಲಾದ್ಯಂತ ಎಲ್ಲಾ ಪ್ರಾಥಮಿಕ, ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲೂ ಲಸಿಕಾ ಕಾರ್ಯಕ್ರಮ ಆರಂಭಿಸಲಾಯಿತು ಎಂದು ಅವರು ತಿಳಿಸಿದರು. 60 ವರ್ಷ ಮೇಲ್ಪಟ್ಟ ಸಾರ್ವಜನಿಕರು, ಫ್ರಂಟ್‌ಲೈನ್ ವರ್ಕರ್‌ಗಳು ಹಾಗೂ 18 ರಿಂದ 59 ವರ್ಷ ವಯಸ್ಸಿನವರೂ ಸೇರಿದಂತೆ ಒಟ್ಟು 28,000 ಮಂದಿಗೆ ಇಂದು ಸಂಜೆವರೆಗೆ ಲಸಿಕೆ ನೀಡಲಾಯಿತು. ಸೋಮವಾರ ಮೈಸೂರಿನ ದಾಸಪ್ಪ ಸರ್ಕಲ್‌ನಲ್ಲಿರುವ ವಾರ್ತಾ ಭವನದಲ್ಲಿ ಪತ್ರಕರ್ತರು ಹಾಗೂ ಅವರ ಕುಟುಂಬದವರಿಗೆ ಬೂಸ್ಟರ್ ಡೋಸ್ ಲಸಿಕೆ ಅಭಿಯಾನ ಏರ್ಪಡಿಸಿದೆ ಎಂದು ಡಾ. ಪ್ರಸಾದ್ ತಿಳಿಸಿದ್ದಾರೆ.

ಉಚಿತ ಡೋಸ್

ಕುಗ್ಗಿಸಬಹುದಾಗಿದೆ. ಈ ನಿಟ್ಟಿನಲ್ಲಿ ವಿಶ್ವ ಆರೋಗ್ಯ ಸಂಸ್ಥೆ, ಕೇಂದ್ರ ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿದೆ. ಕೇಂದ್ರ ಸರ್ಕಾರ 'ಹರ್ ಘರ್ ದಸ್ತಕ್' ಅಭಿಯಾನದ ಮೂಲಕ ಮನೆ ಮನೆಗೆ ತೆರಳಿ ಲಸಿಕೆ ನೀಡುವ ಕಾರ್ಯಕ್ರಮ ನಡೆಸುತ್ತಿದೆ ಎಂದರು.

ವೈದ್ಯರು, ಅಧಿಕಾರಿಗಳು, ನರ್ಸುಗಳು, ಅರೆ ವೈದ್ಯಕೀಯ ಸಿಬ್ಬಂದಿ ಕೋವಿಡ್ ಸಂದರ್ಭದಲ್ಲಿ ನಾಯಕರಾಗಿ ಕೆಲಸ ಮಾಡಿದ್ದಾರೆ. ಕೋವಿಡ್ ಸೋಂಕಿತರಿಗೆ ಚಿಕಿತ್ಸೆ, ಲಸಿಕೆ ಬಗ್ಗೆ ಅರಿವು ಮೂಡಿಸಿರುವ ಅವರ ನಿಸ್ವಾರ್ಥ ಸೇವೆಯನ್ನು ಸರ್ಕಾರ ಗುರುತಿಸುತ್ತದೆ. ಅದರ ಪರಿಣಾಮ ರಾಜ್ಯದಲ್ಲಿ ಕೋವಿಡ್ ಮೊದಲ ಡೋಸ್ 102% ಸಾಧನೆ, 5.49 ಕೋಟಿ ಲಸಿಕೆಗಳನ್ನು ನೀಡಲಾಗಿದೆ. ಎರಡನೇ ಡೋಸ್ 5.42 ಕೋಟಿ ಆಗಿದೆ. ಇದೊಂದು ಅದ್ಭುತವಾದ ಸಾಧನೆ. ಲಸಿಕೆ ಅಭಿಯಾನದಲ್ಲಿ ಭಾಗವಹಿಸಿರುವ ವೈದ್ಯರು, ಅಧಿಕಾರಿಗಳು, ನರ್ಸುಗಳು, ಅರೆ ವೈದ್ಯಕೀಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಪೊಲೀಸ್ ಸೇರಿದಂತೆ ಎಲ್ಲರಿಗೂ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು. ಪ್ರಧಾನಿ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ 18 ವರ್ಷ ಮೇಲ್ಪಟ್ಟವರಿಗೆ ಮುನ್ನೆಚ್ಚರಿಕಾ ಡೋಸ್ ಅನ್ನು ಉಚಿತವಾಗಿ ನೀಡಲು ಆದೇಶಿಸಿದ್ದು, ಲಸಿಕೆಗಳನ್ನು ಪೂರೈಸಿದ್ದಾರೆ. ಇದೊಂದು ಮಹತ್ವಾಕಾಂಕ್ಷೆಯ ಕಾರ್ಯಕ್ರಮ. ಹಲವಾರು ಸಾಂಕ್ರಾಮಿಕ ರೋಗಗಳನ್ನು ಕಾಣೆಸಿಕೊಂಡಾಗ ಲಸಿಕೀಕರಣ ಮಹತ್ವದ ಕೆಲಸವನ್ನು ಮಾಡಿದೆ.

ಮೊದಲು ರೋಗ ಉಲ್ಬಣವಾಗಿ ನಾಲ್ಕೈದು ವರ್ಷಗಳ ನಂತರ ರೋಗಕ್ಕೆ ಲಸಿಕೆಗಳನ್ನು ವಿದೇಶದಲ್ಲಿ ಕಂಡುಹಿಡಿಯಲಾಗುತ್ತಿತ್ತು. ನಂತರ ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಿ ಭಾರತಕ್ಕೆ ಬರುವ ವೇಳೆಗೆ 10–12 ವರ್ಷಗಳು ಬೇಕಾಗುತ್ತಿತ್ತು. ಈಗ ಭಾರತದೇಶದಲ್ಲಿಯೇ ಲಸಿಕೆಗಳನ್ನು ತಯಾರಿಸಿ, 130 ಕೋಟಿ ಜನಸಂಖ್ಯೆಗೆ ಯಶಸ್ವಿಯಾಗಿ ನೀಡಿ ಸಾಂಕ್ರಾಮಿಕವನ್ನು ನಿರ್ವಹಣೆಯೊಂದಿಗೆ ನಿಯಂತ್ರಣವನ್ನೂ ಮಾಡಲಾಯಿತು. ವಿದೇಶಗಳಿಗೂ ರಫ್ತು ಮಾಡಲಾಯಿತು. ಇದು ನಮ್ಮ ವಿಜ್ಞಾನಿಗಳ ವಿಶ್ವಾಸವನ್ನು ಬಿಂಬಿಸುತ್ತದೆ.

ಎನ್‌ಡಿಎ ಉಪರಾಷ್ಟ್ರಪತಿ ಅಭ್ಯರ್ಥಿ

ಬಿಜೆಪಿ ಉಪರಾಷ್ಟ್ರಪತಿ ಹುದ್ದೆಗೆ ಅಭ್ಯರ್ಥಿಯಾಗಿ ಘೋಷಿಸಿದ್ದೇವೆ ಎಂದು ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ ತಿಳಿಸಿದರು. 2019ರ ಜುಲೈ ತಿಂಗಳಲ್ಲಿ ಪಶ್ಚಿಮ ಬಂಗಾಳ ರಾಜ್ಯಪಾಲರಾಗಿ ಜಗದೀಪ್ ಧನ್ಕರ್ ಅಧಿಕಾರ ವಹಿಸಿಕೊಂಡಿದ್ದರು.

ಅಧಿಕಾರ ವಹಿಸಿಕೊಂಡಾಗಿನಿಂದಲೂ ಬಂಗಾಳ ಮುಖ್ಯಮಂತ್ರಿ ಜೊತೆ ಮುಸುಕಿನ ಗುದ್ದಾಟ ಮುಂದುವರೆದಿದ್ದು, ಅನೇಕ ಸಲ ಸುದ್ದಿಯಾಗಿದ್ದಾರೆ. ಮೂರು ದಶಕಗಳಿಗೂ ಹೆಚ್ಚು ಕಾಲ ಸಾರ್ವಜನಿಕ ಸೇವೆಯಲ್ಲಿರುವ ಧನ್ಕರ್ 1989ರ ಲೋಕಸಭೆ ಚುನಾವಣೆಯಲ್ಲಿ ಜುಂಜುನು ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾಗಿದ್ದರು. ಇದಾದ ಬಳಿಕ 1990ರಲ್ಲಿ ಸಂಸದೀಯ ವ್ಯವಹಾರಗಳ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದು, 1993ರಲ್ಲಿ ಕಿಶನ್‌ಗಢ ಕ್ಷೇತ್ರದಿಂದ ರಾಜಸ್ತಾನ ವಿಧಾನಸಭೆಗೆ ಆಯ್ಕೆಯಾಗಿದ್ದರು.

ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರ ಅಧಿಕಾರಾವಧಿ ಆಗಸ್ಟ್ 10ರಂದು ಅಂತ್ಯಗೊಳ್ಳಲಿದೆ. ಉಪರಾಷ್ಟ್ರಪತಿ ಸ್ಥಾನಕ್ಕೆ ಆಗಸ್ಟ್ 6ರಂದು ಚುನಾವಣೆ ನಡೆಯಲಿದೆ. ರಾಷ್ಟ್ರಪತಿ ಚುನಾವಣೆಗೆ ಜುಲೈ 18ರಂದು ಮತದಾನ ನಡೆಯಲಿದ್ದು, ಜುಲೈ 21ರಂದು ಫಲಿತಾಂಶ ಹೊರಬೀಳಲಿದೆ. ಎನ್‌ಡಿಎ ಅಭ್ಯರ್ಥಿಯಾಗಿ ದ್ರೌಪದಿ ಮುರ್ಮು ಅವರು ಸ್ಪರ್ಧಿಸಿದ್ದರೆ, ಪ್ರತಿಪಕ್ಷಗಳ ಅಭ್ಯರ್ಥಿಯಾಗಿ ಯಶವಂತ್ ಸಿನ್ಹಾ ಕಣಕ್ಕಿಳಿದಿದ್ದಾರೆ.

ಗಜಪಡೆಯ 20 ಸದಸ್ಯರ ಪಟ್ಟಿ ರೆಡಿ

ಅರಣ್ಯಾಧಿಕಾರಿಗಳ ತಂಡ ಆನೆಗಳ ಆರೋಗ್ಯ ತಪಾಸಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದೆ. ಅವುಗಳ ಆರೋಗ್ಯ ಸ್ಥಿತಿ, ಮದದ ಮುನ್ಸೂಚನೆ, ದೇಹದ ಸದೃಡತೆ ಇತ್ಯಾದಿ ಅಂಶವನ್ನು ಪರಿಗಣಿಸಲಾಗಿದೆ. ಅಲ್ಲದೆ ಹೆಣ್ಣಾನೆಗಳ ದೇಹ ಸ್ಥಿತಿ ಬಗ್ಗೆಯೂ ಖಚಿತಪಡಿಸಿಕೊಳ್ಳಲಾಗಿದೆ. ಈ ಕುರಿತು 'ಮೈಸೂರು ಮಿತ್ರ' ನೊಂದಿಗೆ ಡಿಸಿಎಫ್ ಡಾ.ವಿ.ಕರಿಕಾಳನ್ ಮಾತನಾಡಿ, 'ಇಂದು ದಸರಾ ಗಜಪಡೆಯ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದೆ. ಪಶುವೈದ್ಯರೊಂದಿಗೆ ಪರಿಶೀಲಿಸಲಾಗಿದೆ. ನಾಲ್ಕು ಆನೆ ಶಿಬಿರಗಳು ಒಟ್ಟು 30 ಆನೆಗಳಲ್ಲಿ 20 ಆನೆಗಳ ಪಟ್ಟಿ ಮಾಡಲಾಗಿದೆ. ಜಂಬೂಸವಾರಿಯಲ್ಲಿ ಪಾಲ್ಗೊಳ್ಳುವ ಸಾಲಾನೆ, ನಿಶಾನೆ ಆನೆ, ಪಟ್ಟದ ಆನೆ ಹಾಗೂ ಶ್ರೀರಂಗಪಟ್ಟಣ ದಸರಾದಲ್ಲಿ ಪಾಲ್ಗೊಳ್ಳುವ ಆನೆಗಳನ್ನು ಪರಿಗಣಿಸಿ ಈ ಬಾರಿ 14 ಅಥವಾ 15 ಆನೆಗಳನ್ನು ಕರೆತರಲು ಉದ್ದೇಶಿಸಲಾಗಿದೆ. ಎರಡು ಹಂತದಲ್ಲಿ ಆನೆಗಳನ್ನು ಕರೆತರಲಾಗುತ್ತದೆ. ಉನ್ನತ ಸಮಿತಿ ಸಭೆ ನಡೆದ ನಂತರ ಆಯ್ಕೆ ಮಾಡಿರುವ ಆನೆಗಳಿರುವ ಕ್ಯಾಂಪ್‌ಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗುತ್ತದೆ. ಪ್ರಸ್ತುತ ಕಾಡಾನೆ ಹಾಗೂ ಹುಲಿ ಸೆರೆ ಕಾರ್ಯಾಚರಣೆಗೆ ಸಾಕಾನೆ ಬಳಸಿಕೊಳ್ಳಬೇಕಾಗಿರುವುದರಿಂದ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಆನೆಗಳ ಆಯ್ಕೆ ಪರಿಗಣಿಸಲಾಗಿದೆ. ಈ ಸಂದರ್ಭದಲ್ಲಿ ಆರ್‌ಎಫ್‌ಓ ಸಂತೋಷ್ ಹೂಗಾರ್, ಸಂಬಂಧಪಟ್ಟ ಕ್ಯಾಂಪ್‌ಗಳ ಪಶುವೈದ್ಯರು, ಆರ್‌ಎಫ್‌ಓ, ಹಾಗೂ ಇನ್ನಿತರರು ಇದ್ದರು.

ಭಾರೀ ಡಿಮ್ಯಾಂಡ್

ನಂತರ ಮೈಸೂರು ವೇಗವಾಗಿ ಬೆಳೆಯುತ್ತಿದೆ. ದಶಪಥ ರಸ್ತೆ ಕಾಮಗಾರಿ ಮುಗಿದರೆ ಬೆಂಗಳೂರು–ಮೈಸೂರು ನಡುವಿನ ಪ್ರಯಾಣ ಸುಗಮವಾಗುತ್ತದೆ. 3 ಗಂಟೆ ಪ್ರಯಾಣ ಕೇವಲ ಒಂದೂವರೆ ಗಂಟೆಗೆ ಇಳಿಯಲಿದೆ. ಅಲ್ಲದೆ, ಸಾಫ್ಟ್‌ವೇರ್ ರಫ್ತಿನಲ್ಲೂ ಮೈಸೂರು ಮುಂಚೂಣಿಯಲ್ಲಿದೆ. ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆಯಾಗುತ್ತಿದೆ. ಇದರ ಜತೆಗೆ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಸ್ಥಾಪನೆಯಿಂದ ಮೈಸೂರಿಗೆ ಬಂಡವಾಳ ಹೂಡಿಕೆ ಹೆಚ್ಚಾಗುತ್ತದೆ. ಹೊಸ ಹೊಸ ಸ್ಟಾರ್ಟ್ ಅಪ್‌ಗಳು ಆರಂಭವಾಗುತ್ತವೆ. ಇದು ನವೋದ್ಯಮಿಗಳ ಉತ್ತೇಜನಕ್ಕೆ ವಿಪುಲ ಅವಕಾಶ ನೀಡಲಿದೆ.

ಬೆಂಗಳೂರು, ಭುವನೇಶ್ವರ, ಪುಣೆಯಲ್ಲಿ ಈಗಾಗಲೇ ಎಸ್‌ಟಿಪಿಐ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ. 1991ರಲ್ಲಿ ಸಾಫ್ಟ್‌ವೇರ್ ರಫ್ತನ್ನು ಉತ್ತೇಜಿಸಲು ಕೇಂದ್ರ ಸರಕಾರ ಸಾಫ್ಟ್‌ವೇರ್ ಪಾರ್ಕ್ ಆಫ್ ಇಂಡಿಯಾ ಸ್ಥಾಪನೆ ಮಾಡಿದೆ. ಇದುವರೆಗೆ ದೇಶದಲ್ಲಿ 62 ಕೇಂದ್ರಗಳಿದ್ದು, 1998ರಲ್ಲಿ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಮೈಸೂರಿನಲ್ಲಿ ಕೇಂದ್ರ ಸ್ಥಾಪಿಸಿದ್ದರು. ಈ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್‌ನಿಂದ ನವ ಉದ್ಯಮ ಆರಂಭಿಸುವ ಕನಸು ಹೊತ್ತವರಿಗೆ ಅನುಕೂಲವಾಗಲಿದೆ.

ನಿಗದಿಪಡಿಸಿರುವ ಕನಿಷ್ಠ ಕೂಲಿ

ಕೈದಿಗಳ ಮಾನವ ಸಂಪನ್ಮೂಲವನ್ನು ಬಳಸಿಕೊಳ್ಳಲು ಅನುವಾಗುವಂತೆ ಯೋಜನೆಗಳನ್ನು ಮಂಡಿಸಲು ಕೋರಲಾಯಿತು. ಕೇಂದ್ರ ಕಾರಾಗೃಹಗಳಲ್ಲಿರುವ, ಮಾನವ ಸಂಪನ್ಮೂಲವನ್ನು ರಾಷ್ಟ್ರೀಯ ಸಂಪನ್ಮೂಲವನ್ನಾಗಿ ಪರಿವರ್ತಿಸಲು ಹಾಗೂ ಈಗಾಗಲೇ ನಡೆಸಲಾಗುತ್ತಿರುವ ಹತ್ತು ಹಲವು ಕೈಗಾರಿಕಾ ಚಟುವಟಿಕೆಗಳಿಗೆ ಕಾರ್ಪೊರೇಟ್ ಸ್ವರೂಪವನ್ನು ನೀಡುವ ಪ್ರಯತ್ನ ಇದಾಗಿದೆ ಎಂದು ಸಚಿವರು ಹೇಳಿದರು.

ಕಾರಾಗೃಹಗಳಲ್ಲಿ ಪ್ರಸ್ತುತ ನೇಯ್ಗೆ, ಮರಗೆಲಸ, ಬೇಕರಿ, ಜಮಖಾನ, ಶಾಮಿಯಾನ, ಸೋಪ್ ಹಾಗೂ ಇನ್ನಿತರ ಕೈಗಾರಿಕಾ ಚಟುವಟಿಕೆಗಳು ನಡೆಯುತ್ತಿದ್ದು, ಹಾಲಿ ಇರುವ ಯಂತ್ರೋಪಕರಣಗಳ ಉನ್ನತೀಕರಣ, ಕೈದಿಗಳಿಗೆ ವೃತ್ತಿಯಲ್ಲಿ ನೈಪುಣ್ಯತೆ, ಒಳಗೊಂಡಂತೆ, ಹಲವಾರು ಸುಧಾರಣಾ ಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆಯೂ ಫಲಪ್ರದ ಚರ್ಚೆಯಾಗಿದೆ ಎಂದು ಸಚಿವರು ತಿಳಿಸಿದರು.

ಕೊಡಗಲ್ಲಿ ಮಹಾಮಳೆಗೆ ಮೊದಲ ಬಲಿ

ಜಾಕೆಟ್ ನೀಡುವಂತೆ ಶಾಸಕ ಬೋಪಯ್ಯ ನಾವಿಕರಿಗೆ ಸೂಚಿಸಿದರು. ಮಳೆಯ ಆರ್ಭಟ ಕಡಿಮೆಯಾದ ಹಿನ್ನೆಲೆಯಲ್ಲಿ ಚೆಸ್ಕಾಂ, ಜಿಲ್ಲಾದ್ಯಂತ ಸಮಾರೋಪಾದಿಯಲ್ಲಿ ದುರಸ್ತಿ ಕಾರ್ಯ ನಡೆಸುತ್ತಿದೆ. ಹೀಗಿದ್ದರೂ ಗ್ರಾಮೀಣ ಭಾಗಗಳಿಗೆ ಇನ್ನೂ ವಿದ್ಯುತ್ ಪೂರೈಕೆ ಸಾಧ್ಯವಾಗಿಲ್ಲ. ಗಾಳಿ ಮಳೆಯಿಂದ ಬೆಟ್ಟೋಳಿಯಲ್ಲಿ ಹೈಟೆನ್ಷನ್ ವಿದ್ಯುತ್ ಮಾರ್ಗಕ್ಕೆ ಹಾನಿಯಾಗಿದ್ದು, ಚೆಸ್ಕಾಂ ಕೋರಿಕೆಯ ಮೇರೆಗೆ ಎನ್‌ಡಿಆರ್‌ಎಫ್ ರಕ್ಷಣಾ ತಂಡ ಸ್ಥಳಕ್ಕೆ ತೆರಳಿ ವಿದ್ಯುತ್ ಲೈನ್ ದುರಸ್ತಿಪಡಿಸುವಲ್ಲಿ ಯಶಸ್ವಿಯಾಗಿದೆ. ಹಾಲುಗುಂದ ಗ್ರಾಮದಲ್ಲಿ ಕಾವೇರಿ ನದಿ ಪ್ರವಾಹ ಕಂಡು ಬಂದಿದ್ದು ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ಭಾರೀ ಗಾಳಿ ಮಳೆಗೆ ಈ ವ್ಯಾಪ್ತಿಯಲ್ಲಿ ವಿದ್ಯುತ್ ಕಂಬಗಳು ಹಾಗೂ ತಂತಿಗಳಿಗೆ ಹಾನಿಯಾಗಿದ್ದು, ಸುರಿಯುತ್ತಿರುವ ಮಳೆಯ ಮತ್ತು ಪ್ರವಾಹ ಸ್ಥಳದಲ್ಲಿ ಚೆಸ್ಕಾಂ ಸಿಬ್ಬಂದಿ ದುರಸ್ತಿ ಕಾರ್ಯ ನಡೆಸುತ್ತಿದ್ದಾರೆ.

ಮನೆ ಹಾನಿ: ಸೋಮವಾರಪೇಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ 11ನೇ ವಾರ್ಡ್ ನಿವಾಸಿ ಮಲ್ಲಿಗೆ ಎಂಬುವರ ಮನೆ ಕುಸಿದು ಬಿದ್ದಿದ್ದು, ಹಾನಿ ಸಂಭವಿಸಿದೆ. ಈ ಮನೆಯಲ್ಲಿ ಯಾರು ವಾಸವಿಲ್ಲದ ಕಾರಣ ಸಂಭಾವ್ಯ ಅಪಾಯ ತಪ್ಪಿದಂತಾಗಿದೆ. ಮಳೆಯಿಂದಾಗಿ ಕುಶಾಲನಗರ ಬೆಂಡೆಬೆಟ್ಟ ಹಾಡಿಯ ಕುರುಬರ ಜಯ ಎಂಬುವರ ಮನೆಯ ಒಂದು ಭಾಗ ಕುಸಿದು ಬಿದ್ದು, ಹಾನಿಯಾಗಿದೆ. ಕರಡಿಗೋಡು ಕಾವೇರಿ ನದಿ ಪ್ರವಾಹ ಇರುವ ಹಿನ್ನೆಲೆಯಲ್ಲಿ ಅಲ್ಲಿನ ಕೆಲವು ಮನೆಗಳಿಗೆ ನೀರು ನುಗ್ಗುವ ಸಾಧ್ಯತೆ ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಅಲ್ಲಿನ ನಿವಾಸಿಗಳನ್ನು ಕಂದಾಯ ಇಲಾಖೆ ಅಧಿಕಾರಿಗಳು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಿದರು. ನೆಲ್ಯಹುದಿಕೇರಿಯಲ್ಲೂ ಒಂದು ಮನೆ ಕುಸಿದು ಬಿದ್ದು, ಹಾನಿಯಾಗಿರುವ ಬಗ್ಗೆ ವರದಿಯಾಗಿದೆ.

ಜಾನುವಾರು ಸಾವು: ದಕ್ಷಿಣ ಕೊಡಗಿನ ನಾಲ್ಕೇರಿ ನಿವಾಸಿ ಮಂಡೆಟಿರ ಪ್ರಭು ಎಂಬುವರಿಗೆ ಸೇರಿದ ಹಸುವೊಂದು ಉಕ್ಕಿ ಹರಿಯುತ್ತಿರುವ ಕಿರು ತೊರೆಗೆ ಬಿದ್ದು ಸಾವನ್ನಪ್ಪಿದೆ. ಶ್ರೀಮಂಗಲ ಹೋಬಳಿ ಕೆ.ಬಾಡಗ ಗ್ರಾಮ ನಿವಾಸಿ ಜಾಯ್ ಅಯ್ಯಪ್ಪ ಅವರಿಗೆ ಸೇರಿದ ಹಸು ಶೀತ ವಾತಾವರಣದಿಂದ ಮೃತಪಟ್ಟ ಬಗ್ಗೆ ವರದಿಯಾಗಿದೆ.


ಕೋಮುಗಲಭೆ ಸೃಷ್ಟಿಸಿ ರಾಜಕೀಯ ಲಾಭ ಪಡೆಯಲು ಬಿಜೆಪಿ ಹುನ್ನಾರ

ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ ಆರೋಪ

ಮೈಸೂರು,ಜು.16(ಎಂಟಿವೈ)– ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರ ಅಲ್ಪಸಂಖ್ಯಾತರ ಹಿತ ಕಾಯುವಲ್ಲಿ ವಿಫಲವಾಗಿದ್ದು, ಕೋಮು ಗಲಭೆ ಸೃಷ್ಟಿಸಿ ರಾಜಕೀಯ ಲಾಭ ಪಡೆಯಲು ಹುನ್ನಾರ ನಡೆಸುತ್ತಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶನಿವಾರ ನಡೆದ ಅಲ್ಪಸಂಖ್ಯಾತ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ 'ಸಬ್‌ಕಾ ಸಾಥ್ ಸಬ್‌ಕಾ ವಿಕಾಸ್' ಹೇಳಿಕೆ ಕೇವಲ ಬಾಯಿ ಮಾತಿಗಷ್ಟೇ ಸೀಮಿತವಾಗಿದೆ. ಅವರ ಮಂತ್ರಿ ಮಂಡಲದಲ್ಲಿ ಅಲ್ಪಸಂಖ್ಯಾತರಿಗೆ ಸೂಕ್ತ ಪ್ರಾತಿನಿಧ್ಯವನ್ನು ಕಲ್ಪಿಸಿಲ್ಲ. ಕರ್ನಾಟಕದಲ್ಲೂ ಅಲ್ಪಸಂಖ್ಯಾತರನ್ನು ಮಂತ್ರಿ ಮಾಡಿಲ್ಲ. ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವನ್ನೇ ಕೊಟ್ಟಿಲ್ಲ. ಆದರೆ ಕಾಂಗ್ರೆಸ್ ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದ ವೇಳೆಯಲ್ಲಿ ನಾಲ್ಕರಿಂದ ಐದು ಮಂದಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು ಮಂತ್ರಿಯಾಗಿ ಕಾರ್ಯ ನಿರ್ವಹಿಸಲು ಅವಕಾಶ ನೀಡಿತ್ತು. ಇದರಿಂದ ಅಲ್ಪಸಂಖ್ಯಾತರ ಹಿತ ಕಾಯುವಲ್ಲಿ ಕಾಂಗ್ರೆಸ್ ಸದಾ ಮುಂದೆ ಇರುವುದು ಸ್ಪಷ್ಟವಾಗುತ್ತದೆ ಎಂದರು.

ಈ ಹಿಂದೆ ರಾಜ್ಯದಲ್ಲಿ ಅಧಿಕಾರ ನಡೆಸಿದ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಪ್ರತಿ ವರ್ಷವೂ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ 3,000 ಕೋಟಿ ರೂ. ಅನುದಾನ ನೀಡಿತ್ತು. ಆದರೆ ಬಿಜೆಪಿ ಸರ್ಕಾರವು ಕೇವಲ 1,000 ಕೋಟಿ ರೂಪಾಯಿ ಮಾತ್ರ ಅನುದಾನ ನೀಡಿದೆ. ಈ ಮೂಲಕ ಅದು ಅಲ್ಪಸಂಖ್ಯಾತರನ್ನು ಕಡೆಗಣಿಸುತ್ತಾ ಬಂದಿದೆ. ಈ ವಿಚಾರವನ್ನು ಜನರಿಗೆ ತಿಳಿಸುವಂತಹ ಕೆಲಸವನ್ನು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಮರ್ಪಕವಾಗಿ ಮಾಡಬೇಕು ಎಂದು ಸಲಹೆ ನೀಡಿದರು.



ಅಲ್ಪಸಂಖ್ಯಾತರು ಎಂದರೆ ಕೇವಲ ಮುಸ್ಲಿಮರು ಎಂದು ಭಾವಿಸಬಾರದು. ಸಿಖ್, ಜೈನ, ಬೌದ್ಧ, ಪಾರ್ಸಿ, ಕ್ರಿಶ್ಚಿಯನ್ ಮುಂತಾದ ಸಮುದಾಯವರು ಕೂಡ ಅಲ್ಪಸಂಖ್ಯಾತರು. ಆದ್ದರಿಂದ ಕಾಂಗ್ರೆಸ್ ಪಕ್ಷದ ಮುಂಚೂಣಿ ನಾಯಕರು ಮತ್ತು ಕಾರ್ಯಕರ್ತರು ಅಲ್ಪಸಂಖ್ಯಾತರನ್ನು ವಿಶ್ವಾಸಕ್ಕೆ ತಗೆದುಕೊಂಡು, ಅವರಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸಬೇಕು ಎಂದು ಅವರು ತಿಳಿಸಿದರು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಬಿಜೆಪಿ ನೇತೃತ್ವದ ಸರ್ಕಾರಗಳು ಅಲ್ಪಸಂಖ್ಯಾತರ ಹಕ್ಕುಗಳನ್ನು ಹಂತ–ಹಂತವಾಗಿ ಕಸಿದುಕೊಳ್ಳುತ್ತಿವೆ. ಅವರನ್ನು ಬೆದರು ಗೊಂಬೆಗಳನ್ನಾಗಿ ಮಾಡಿ ಓಟು ಗಿಟ್ಟಿಸಿಕೊಳ್ಳುವ ರಾಜಕಾರಣ ಮಾಡುತ್ತಿವೆ. ಕಾಂಗ್ರೆಸ್ ಪಕ್ಷವು ಧರ್ಮಾಧಾರಿತ ರಾಜಕಾರಣ ಮಾಡುವುದಿಲ್ಲ. ಸಂವಿಧಾನದ ಮೇಲೆ ನಂಬಿಕೆ ಇಟ್ಟುಕೊಂಡು, ಅದರ ಅಡಿಯಲ್ಲೇ ಕೆಲಸ ಮಾಡುತ್ತಿರುವ ಹಾಗೂ ಎಲ್ಲರನ್ನೂ ಸಮನಾಗಿ ಕಾಣುವ ಪಕ್ಷ ಕಾಂಗ್ರೆಸ್ ಎಂದರು.

ಪಕ್ಷದ ವಿವಿಧ ಘಟಕಗಳ ಹುದ್ದೆಯು ಅಲಂಕಾರವಲ್ಲ. ಬದಲಾಗಿ ಅದಕ್ಕೆ ದೊಡ್ಡ ಜವಾಬ್ದಾರಿ ಇದೆ. ಬೇರುಮಟ್ಟದಲ್ಲಿ ಕಾರ್ಯಕರ್ತರೆಲ್ಲರ ವಿಶ್ವಾಸವನ್ನು ಗಳಿಸಿಕೊಂಡು ಸಾಮೂಹಿಕವಾಗಿ ಕಾರ್ಯನಿರ್ವಹಣೆ ಮಾಡಬೇಕು ಎಂದು ಸಲಹೆ ನೀಡಿದರು.

ಅಧಿಕಾರ ಸ್ವೀಕಾರ: ಕಾಂಗ್ರೆಸ್ ಪಕ್ಷದ ಅಲ್ಪಸಂಖ್ಯಾತ ಜಿಲ್ಲಾ ಘಟಕದ ಅಧ್ಯಕ್ಷರನ್ನಾಗಿ ಕೆ.ಆರ್. ನಗರದ ಜಾವೀದ್ ಬಾಷಾ ಅವರನ್ನು ನೇಮಕ ಮಾಡಲಾಯಿತು. ಇದೇ ಸಂದರ್ಭದಲ್ಲಿ ತಂಬಾಕು ಮಂಡಳಿಯ ನಿವೃತ್ತ ಅಧಿಕಾರಿ ಮಂಜುರಾಜ್ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಈ ಸಂದರ್ಭದಲ್ಲಿ ಕೆಪಿಸಿಸಿ ಉಪಾಧ್ಯಕ್ಷ ಸೂರಜ್ ಹೆಗ್ಡೆ, ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮಿ ಗೌಡ, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಕೆಆರ್.ನಗರದ ಮುಖಂಡ ಡಿ.ರವಿಶಂಕರ್, ಕೋಳಿ ಪ್ರಕಾಶ್, ಅಕ್ಬರ್ ಅಲಿ, ಜಿಲ್ಲಾ ಉಪಾಧ್ಯಕ್ಷ ವೆಂಕಟರಾಮು, ಹೆಡತಲೆ ಮಂಜುನಾಥ್, ಎಸ್.ಕೆ. ತಮ್ಮಯ್ಯ, ಬಿ.ಮಲ್ಲೇಶ್, ಡೊನಾಲ್ಡ್ ಎಫ್.ನಿರ್ಮಾಣಿಕ್, ಸೈಯ್ಯದ್ ಜಾವೀದ್, ನರಸಿಂಹರಾಜು, ಕೋಟೆ ಮಂಜುನಾಥ್, ಶಿವಣ್ಣ, ಹುಣಸೂರು ಬಸವಣ್ಣ, ಸುಧಾ ಮಹದೇವಯ್ಯ, ತಾ.ಪಂ ಮಾಜಿ ಅಧ್ಯಕ್ಷೆ ಮಂಜುಳಾ ಮಂಜುನಾಥ್ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಶಾಲಾ ಆವರಣದಲ್ಲೇ ಬೀದಿ ನಾಯಿಗಳ ದಾಳಿಯಿಂದ ವಿದ್ಯಾರ್ಥಿಗೆ ತೀವ್ರ ಗಾಯ

ಮೈಸೂರು, ಜು.16(ಎಂಟಿವೈ)– ಮೈಸೂರಿನ ಸಿದ್ಧಾರ್ಥನಗರದ ಕೇಂದ್ರೀಯ ವಿದ್ಯಾಲಯದ ಆವರಣದಲ್ಲಿ 5ನೇ ತರಗತಿ ವಿದ್ಯಾರ್ಥಿ ಮೇಲೆ ಬೀದಿ ನಾಯಿಗಳ ಗುಂಪು ದಾಳಿ ನಡೆಸಿ ಗಾಯಗೊಳಿಸಿರುವುದು ತಡವಾಗಿ ಬೆಳಕಿಗೆ ಬಂದಿದೆ.

ಚೇತನ್‌ಗೌಡ ಎಂಬ ವಿದ್ಯಾರ್ಥಿಯ ಮೇಲೆ ಜು.11ರಂದು ಶಾಲಾ ಆವರಣದಲ್ಲೇ 4–5 ಬೀದಿ ನಾಯಿಗಳು ದಾಳಿ ಮಾಡಿ, ಕೈ, ಕಾಲು, ಸೊಂಟ, ಪಕ್ಕೆಲುಬು, ಮೊಣಕೈ ಸೇರಿದಂತೆ ಸುಮಾರು 20ಕ್ಕೂ ಹೆಚ್ಚು ಬಾರಿ ಕಚ್ಚಿವೆ. ಈ ಘಟನೆಯಿಂದ ಈ ಶಾಲಾ ಮಕ್ಕಳ ಪೋಷಕರು ಆತಂಕಗೊಂಡಿದ್ದು, ಶಾಲಾ ಆಡಳಿತ ಮಂಡಳಿ ವಿರುದ್ಧ ಕಿಡಿಕಾರಿದ್ದಾರೆ.

ನಾಯಿಗಳ ದಾಳಿಯಿಂದಾಗಿ ಗಂಭೀರವಾಗಿ ಗಾಯಗೊಂಡಿರುವ ಬಾಲಕನನ್ನು ಆತನ ಪೋಷಕರು ರೈಲ್ವೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದಾರೆ. ಬಾಲಕನಿಗೆ ಅಗತ್ಯ ಇಂಜೆಕ್ಷನ್‌ಗಾಗಿ ವಿವಿಧ ಆಸ್ಪತ್ರೆಗೆ ಅಲೆದು ಬಸವಳಿದಿದ್ದಾರೆ.

ಶಾಲಾ ಸಿಬ್ಬಂದಿಯ ನಿರ್ಲಕ್ಷ್ಯ: ಈ ಕುರಿತು ಬಾಲಕ ತಂದೆ ಪ್ರಸಿಗೌಡ ಮಾತನಾಡಿ, ನನ್ನ ಮಗನಿಗೆ ಬೀದಿ ನಾಯಿ ದಾಳಿ ಮಾಡಿದ ನಂತರ ಶಾಲೆಯ ಸಿಬ್ಬಂದಿ ತುರ್ತು ಚಿಕಿತ್ಸೆ ಕೊಡಿಸದೇ ನಿರ್ಲಕ್ಷಿಸಿದ್ದಾರೆ. ನನಗೆ ಕರೆ ಮಾಡಿ ನಿಮ್ಮ ಮಗ ಬಿದ್ದು ಗಾಯ ಮಾಡಿಕೊಂಡಿದ್ದಾನೆ ಬನ್ನಿ ಎಂದು ಮಾಹಿತಿ ನೀಡಿದರು. ನಾನು ಶಾಲೆಗೆ ಹೋಗುವಷ್ಟರಲ್ಲಿ 20 ನಿಮಿಷ ಆಗಿತ್ತು ನಾನು ಹೋಗುವವರೆಗೂ ಪ್ರಥಮ ಚಿಕಿತ್ಸೆಯನ್ನೂ ಕೊಡಿಸುವ ಸೌಜನ್ಯವನ್ನು ತೋರಿಲ್ಲ. ನಾಯಿ ದಾಳಿಗೆ ತುತ್ತಾಗಿ ನನ್ನ ಮಗ ಬಸವಳಿದಿದ್ದ. ಆತನ ಸ್ಥಿತಿ ಕಂಡು ದಿಗ್ಭ್ರಾಂತಿಯಾಯಿತು. ನಾನು ಕೂಡಲೇ ರೈಲ್ವೆ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದೆ. ನಾಯಿ ಕಡಿತಕ್ಕೆ ನೀಡಲಾಗುವ ಇಂಜೆಕ್ಷನ್ ಕೆಆರ್.ಆಸ್ಪತ್ರೆಯಲ್ಲಿ ಸಿಗುತ್ತದೆ ಎಂದು ಶಿಫಾರಸು ಮಾಡಿದ ಮೇರೆಗೆ ಅಲ್ಲಿಗೆ ಮಗನ ಕರೆದೊಯ್ದೆ. ಅಲ್ಲಿಯೂ ಇಂಜೆಕ್ಷನ್ ದಾಸ್ತಾನು ಇರಲಿಲ್ಲ. ನಾಲ್ಕೈದು ಆಸ್ಪತ್ರೆಗೆ ಅಲೆದ ಬಳಿಕ ಖಾಸಗಿ ಆಸ್ಪತ್ರೆಯಲ್ಲಿ ಇಂಜೆಕ್ಷನ್ ಹಾಕಿಸಿದ್ದೇನೆ ಎಂದರು.





ಶಾಲಾ ಸಿಬ್ಬಂದಿಯ ನಿರ್ಲಕ್ಷ್ಯತೆ ವಿರುದ್ಧ ನಜರ್‌ಬಾದ್ ಠಾಣೆಗೆ ದೂರು ನೀಡಿದ್ದೇನೆ. ನನ್ನ ಮಗನಿಗೆ ಆದ ಸ್ಥಿತಿ ಬೇರೊಂದು ಮಗುವಿಗೆ ಆಗದಿರಲಿ. ಏನಾದರೂ ಆಕಸ್ಮಿಕ ಸಂಭವಿಸಿದರೆ ವಿದ್ಯಾರ್ಥಿಗಳ ಹಿತಕಾಯಲು ಶಾಲಾ ಸಿಬ್ಬಂದಿ ತುರ್ತಾಗಿ ಸ್ಪಂದಿಸುವ ಮನೋಭಾವ ಬೆಳೆಸಿಕೊಳ್ಳಲೆಂಬ ದೃಷ್ಟಿಯಿಂದ ಶಾಲೆಯ ಪ್ರಾಂಶುಪಾಲರು ಹಾಗೂ ಶಿಕ್ಷಕರನ್ನು ಕೇಳಲು ಹೋದರೆ ನಿರ್ಲಕ್ಷ್ಯದ ಉತ್ತರ ನೀಡಿದ್ದಾರೆ. ನಜರ್‌ಬಾದ್ ಠಾಣೆಗೆ ದೂರು ನೀಡಿದ್ದರೂ, ಅವರೂ ಶಾಲೆಯ ಶಿಕ್ಷಕರಿಗೆ ಯಾವುದೇ ಸೂಚನೆ ನೀಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಾನಾ ಆಮಿಷ ತೋರಿ ಮಹಿಳೆ, ಟೆಕ್ಕಿಗೆ ಲಕ್ಷಾಂತರ ರೂ. ವಂಚನೆ

ಮೈಸೂರು, ಜು.16–ಸ್ನ್ಯಾಪ್‌ಡೀಲ್ ಸಂಸ್ಥೆಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಗೃಹಿಣಿಗೆ ಆನ್‌ಲೈನ್ ಮೂಲಕ 1.50 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ವಿಜಯನಗರ 26ನೇ ಕ್ರಾಸ್ ನಿವಾಸಿ ಡಿ.ವಿ.ವಂದನಾ(27) ಅವರ ಮೊಬೈಲ್‌ಗೆ ಕರೆ ಮಾಡಿದ ವಂಚಕ ಸ್ನ್ಯಾಪ್‌ಡೀಲ್ ಸಂಸ್ಥೆಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ವಾಟ್ಸಾಪ್ ಮೂಲಕ ಲಿಂಕ್‌ವೊಂದನ್ನು ರವಾನಿಸಿದ್ದಾನೆ. ಆ ಲಿಂಕ್ ಮೇಲೆ ಕ್ಲಿಕ್ ಮಾಡಿದ ನಂತರ ಆತ ಹೇಳಿದಂತೆ ಆಪರೇಟ್ ಮಾಡಿದಾಗ ವಂದನಾ ಮತ್ತು ಅವರ ಪತಿಯ ಬ್ಯಾಂಕ್ ಖಾತೆಗಳಿಂದ ಹಂತ ಹಂತವಾಗಿ 1.50 ಲಕ್ಷ ರೂ. ಅಕ್ರಮವಾಗಿ ವರ್ಗಾವಣೆಯಾಗಿದೆ. ಮತ್ತೊಂದು ಪ್ರಕರಣದಲ್ಲಿ ಮನೆ ಬಾಡಿಗೆಗೆ ಪಡೆಯಲಿರುವುದಾಗಿ ತಿಳಿಸಿ ಸಾಫ್ಟ್‌ವೇರ್ ಇಂಜಿನಿಯರ್‌ಗೆ ಆನ್‌ಲೈನ್ ಮೂಲಕ 1.50 ಲಕ್ಷ ರೂ. ವಂಚಿಸಲಾಗಿದೆ. ಹೆಬ್ಬಾಳ್ 2ನೇ ಹಂತದ ನಿವಾಸಿ ಸಾಫ್ಟ್‌ವೇರ್ ಇಂಜಿನಿಯರ್ ಎಂ.ಗೌತಮ್ ಅವರು ಮನೆ ಬಾಡಿಗೆಗೆ ನೀಡುವುದಾಗಿ ವೆಬ್‌ಸೈಟ್‌ವೊಂದರಲ್ಲಿ ಜಾಹೀರಾತು ಹಾಕಿದ್ದರು. ಅದನ್ನು ನೋಡಿ ಎರಡು ಮೊಬೈಲ್ ನಂಬರ್‌ಗಳ ಮೂಲಕ ಗೌತಮ್ ಅವರನ್ನು ಸಂಪರ್ಕಿಸಿದ ವಂಚಕ ತಾನು ಮಿಲಿಟರಿಯಲ್ಲಿ ಕೆಲಸ ಮಾಡುವುದಾಗಿ ಹೇಳಿಕೊಂಡಿದ್ದು, ತನ್ನ ಪೇಟಿಎಂ ಖಾತೆಗೆ 1.50 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ. ಇವೆರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿದೆ.

ಬಾಲ್‌ನಂತಹ ವಸ್ತುವಿನ ಮೂಲಕ ಮೈಸೂರು ಜೈಲ್‌ಗೆ ಬಂದ ಗಾಂಜಾ

ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಜು.16–ಮೈಸೂರು ಕೇಂದ್ರ ಕಾರಾಗೃಹದಲ್ಲಿ ಗಾಂಜಾ, ಮೊಬೈಲ್ ಫೋನ್ ಪತ್ತೆಯಾಗಿರುವ ಬಗ್ಗೆ ಮಂಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೇಂದ್ರ ಕಾರಾಗೃಹದ ವಿ.ಸಿ.ಕೋರ್ಟ್ ಮುಂಭಾಗ ಜುಲೈ 12ರಂದು ಮಧ್ಯಾಹ್ನ 3.15ರ ಸುಮಾರಿನಲ್ಲಿ ಕಪ್ಪು ಬಣ್ಣದ ಟೇಪ್ ಸುತ್ತಿದ ಬಾಲ್‌ನಂತಹ ವಸ್ತು ದೊರೆತಿದೆ. ಇದನ್ನು ಕಾರಾಗೃಹದ ಹೊರಗಿನಿಂದ ಒಳಗೆ ಎಸೆಯಲಾಗಿದೆ. ಅದನ್ನು ಗಮನಿಸಿದ ಕಾರಾಗೃಹ ಸಿಬ್ಬಂದಿ ಪರಿಶೀಲಿಸಿದಾಗ 62 ಗ್ರಾಂ ತೂಕದ 22 ಗಾಂಜಾ ಪೊಟ್ಟಣಗಳು ಮತ್ತು ನೋಕಿಯಾ ಟಿ.ಎ.114 ಮೊಬೈಲ್ ಫೋನ್ ಪತ್ತೆಯಾಗಿದೆ. ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ತಿಳಿಸಿ, ಅವರ ಅನುಮತಿ ಪಡೆದು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ ಅವರು ಜು.14ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮಂಡಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಉಚಿತ ನೋಟ್ ಬುಕ್ ವಿತರಣೆ; ಪ್ರತಿಭಾ ಪುರಸ್ಕಾರ

ಮೈಸೂರು, ಜು. 16– ಬೆಂಗಳೂರಿನ ಬಿ.ಸಿ. ರಂಗಪ್ಪ ವಿದ್ಯಾನಿಧಿ ಟ್ರಸ್ಟ್ ಆಶ್ರಯದಲ್ಲಿ ಸಮಾನ ಮನಸ್ಕರ ವೇದಿಕೆ ವತಿಯಿಂದ ಕಣಿಯರ ಜನಾಂಗದ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕಗಳ ವಿತರಣೆ ಮತ್ತು 10ನೇ ತರಗತಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ನಾಳೆ (ಭಾನುವಾರ) ಬೆಳಿಗ್ಗೆ 11.30ಕ್ಕೆ ನಂಜನಗೂಡು ತಾಲೂಕು ಹುಲ್ಲಹಳ್ಳಿಯ ಹುರ ರಸ್ತೆಯಲ್ಲಿನ ಶ್ರೀ ಬಸವೇಶ್ವರ ಹೈಯರ್ ಪ್ರೈಮರಿ ಶಾಲೆಯಲ್ಲಿ ಏರ್ಪಡಿಸಲಾಗಿದೆ.

ಕಣಿಯರ ಸೇವಾ ಸಮಾಜದ ನಿಕಟಪೂರ್ವ ಅಧ್ಯಕ್ಷ ಆರ್. ಪ್ರಸನ್ನಕುಮಾರ್ ಅಧ್ಯಕ್ಷತೆ ವಹಿಸಿದರೆ, ಸಮುದಾಯ ವಾಣಿ ಮಾಸ ಪತ್ರಿಕೆ ಸಂಪಾದಕ ಡಾ. ಎನ್. ಗೋಪಾಲಕೃಷ್ಣ ಕಣಿಯರ ಸಂಘದ ಉಪಾಧ್ಯಕ್ಷ ಲಕ್ಷ್ಮೀನಾರಾಯಣ, ಕಾರ್ಯದರ್ಶಿ ಎಸ್. ಶಿವಣ್ಣ ಮುಖ್ಯ ಅತಿಥಿಗಳಾಗಿರುವರು. ಟ್ರಸ್ಟ್ ಅಧ್ಯಕ್ಷ ಹೆಚ್.ಬಿ. ಮರಿಯಪ್ಪ ವಿಶೇಷ ಆಹ್ವಾನಿತರಾಗಿದ್ದಾರೆ. ಪ್ರಾಧ್ಯಾಪಕಿ ಶ್ರೀಮತಿ ಗೀತಾ ಶ್ರೀನಿವಾಸ್, ವಕೀಲ ಎಲ್. ಮಹದೇವಪ್ಪ ಉಪಸ್ಥಿತರಿರುವರು.

ಜಾಗತಿಕ ಮಟ್ಟದಲ್ಲಿ ಉದ್ಯೋಗ ಪಡೆಯಲು ಕೌಶಲ್ಯತೆ ಅವಶ್ಯ

ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ. ಎ.ಪಿ.ಜ್ಞಾನಪ್ರಕಾಶ್ ಕಿವಿಮಾತು

ಮೈಸೂರು, ಜು.16(ಎಂಟಿವೈ)– ಜಾಗತಿಕ ಮಟ್ಟದಲ್ಲಿ ಉದ್ಯೋಗಾವಕಾಶ ಗಿಟ್ಟಿಸಿಕೊಳ್ಳಲು ಯುವ ಜನತೆ ಕೌಶಲ್ಯತೆ ಬೆಳೆಸಿಕೊಳ್ಳುವ ಅಗತ್ಯವಿದೆ ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಸಚಿವ (ಪರೀಕ್ಷಾಂಗ) ಪ್ರೊ.ಎ.ಪಿ.ಜ್ಞಾನಪ್ರಕಾಶ್ ತಿಳಿಸಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿ ವಿಜ್ಞಾನ ಭವನದಲ್ಲಿ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗ ಅಂತರರಾಷ್ಟ್ರೀಯ ಯುವ ಕೌಶಲ್ಯ ಅಭಿವೃದ್ಧಿ ದಿನದ ಅಂಗವಾಗಿ ಎಜಿ ಅಂಡ್ ಪಿ ಕಂಪನಿ ವತಿಯಿಂದ ಹಮ್ಮಿಕೊಂಡಿದ್ದ ಸೂಕ್ಷ್ಮದರ್ಶಕಗಳ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 10 ಲಕ್ಷ ರೂ. ಮೌಲ್ಯದ 12 ಮೈಕ್ರೋಸ್ಕೋಪ್‌ಗಳನ್ನು ಇಂದು ವಿತರಣೆ ಮಾಡಲಾಗಿದೆ. ಜೆನೆಟಿಕ್ಸ್ ವಿದ್ಯಾರ್ಥಿಗಳಿಗೆ ಮೈಕ್ರೋಸ್ಕೋಪ್ ತುಂಬಾ ಮುಖ್ಯ. ಇದು ಇಲ್ಲದಿದ್ದರೆ ಸಂಶೋಧನೆ ಕಷ್ಟ. ಈ ನಿಟ್ಟಿನಲ್ಲಿ ಇದು ಹೆಚ್ಚು ಉಪಯೋಗಕ್ಕೆ ಬರುತ್ತದೆ ಎಂದರು.



ಇದೇ ವೇಳೆ ಸೋಲಿಗ ಸಮುದಾಯದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಸನ್ಮಾನಿತರಾದ ಡಾ. ರತ್ನಮ್ಮ ಮಾತನಾಡಿ, ನಾವು ಕಾಡಿನ ಮಕ್ಕಳು. ಅಲ್ಲಿನ ಮರಗಿಡ, ಪ್ರಾಣಿ–ಪಕ್ಷಿ, ಪ್ರಕೃತಿಯನ್ನು ಪೂಜೆ ಮಾಡುತ್ತೇವೆ. ಕಾಡಲ್ಲಿ ನಾವು ಪ್ರಕೃತಿ ಜೊತೆ ಒಂದಾಗಿರುತ್ತೇವೆ. ರಾಜ್ಯದಲ್ಲಿ 51 ಜಾತಿಯ ಬುಡಕಟ್ಟು ಇದೆ. ಇದರಲ್ಲಿ 15 ಸಮುದಾಯ ಕಾಡಂಚಲ್ಲೇ ಇದೆ. ಅದರಲ್ಲಿ ಸೋಲಿಗರು ಒಂದು. ಬಿಳಿಗಿರಿ ರಂಗನಬೆಟ್ಟ, ಮಹದೇಶ್ವರಬೆಟ್ಟದಲ್ಲಿ ಸೋಲಿಗರು ಹೆಚ್ಚಿದ್ದಾರೆ. ಈ ಸಮುದಾಯದಿಂದ ಬಂದ ನಾನು ಸ್ನಾತಕೋತ್ತರ ಪದವಿ ಪೂರೈಸಿ ನಂತರ ಪಿಹೆಚ್.ಡಿ ಮಾಡಿದೆ. ಇದೀಗ ಸೋಲಿಗರ ಏಳ್ಗೆಗೆ ಶ್ರಮಿಸುತ್ತಿದ್ದೇನೆ ಎಂದು ಹೇಳಿದರು.

ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಐವರನ್ನು ಸನ್ಮಾನಿಸಲಾಯಿತು. ಡಾ. ರತ್ನಮ್ಮ (ಸೋಲಿಗ ಸಮುದಾಯ ಅಭಿವೃದ್ಧಿ), ಉರ್ಜಾ ಎಂ.ಪಿ (ಡಿಜಿಟಲ್ ಮಾರ್ಕೆಟಿಂಗ್), ವೆಂಕಟೇಶ್ ಎಸ್.ವಿ (ಸಂವಹನ ತರಬೇತಿ) ಡಾ. ನಿಂಗರಾಜು (ಜಾನಪದ ಕಲೆ) ಹಾಗೂ ರವಿ ಬಿ.ಎಸ್ (ಕ್ರೀಡೆ) ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಎಜಿ ಅಂಡ್ ಪಿ ಕಂಪನಿ ಪ್ರಾದೇಶಿಕ ಮುಖ್ಯಸ್ಥ ಅರುಣ್ ನಾಯ್ಕ್ ಮಾತನಾಡಿದರು. ಎನ್.ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸೈನ್ಸ್‌ನ ಪ್ರೊ.ಡಿ.ಆನಂದ್ ಯುವಕರಲ್ಲಿ ಕೌಶಲ್ಯತೆ ಮತ್ತು ಉದ್ಯೋಗಾವಕಾಶಗಳ ಬಗ್ಗೆ ಅರಿವು ಮೂಡಿಸಿದರು. ಸಿಂಡಿಕೇಟ್ ಸದಸ್ಯರಾದ ಡಾ.ಚೈತ್ರ ನಾರಾಯಣ್, ವಿಭಾಗದ ಅಧ್ಯಕ್ಷೆ ಪ್ರೊ.ಎಸ್.ಎಸ್. ಮಾಲಿನಿ, ಪ್ರೊ. ರಾಮಚಂದ್ರ ಸೇರಿದಂತೆ ಇತರರು ಭಾಗವಹಿಸಿದ್ದರು.

ಕೆಂಪೇಗೌಡರ ಆಶಯದಂತೆ ದೇಶ ಕಟ್ಟಬೇಕಾದ ಅನಿವಾರ್ಯತೆ ಇದೆ

- ಸುಪ್ರೀಂಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಗೋಪಾಲಗೌಡ ಕರೆ
- ಕೆಂಪೇಗೌಡರ ಸರಿಯಾದ ಇತಿಹಾಸ ಅರಿಯದೇ ಇರುವುದು ಅನುಮಾನಕ್ಕೆ ಆಸ್ಪದ ನೀಡಿದೆ; ಚಿಕ್ಕರಂಗೇಗೌಡ
- ಮೈಸೂರು ಕೋರ್ಟ್ ಆವರಣದಲ್ಲಿ ವಕೀಲರ ಸಂಘದಿಂದ 'ನಾಡಪ್ರಭು' ಜಯಂತಿ ಆಚರಣೆ

ಮೈಸೂರು, ಜು.16(ಎಂಕೆ)– ಶಾಸನ ಬದ್ಧ ಆಳ್ವಿಕೆಗೆ ನ್ಯಾಯಾಂಗದ ವ್ಯವಸ್ಥೆ ಕಾರಣ ಎಂಬುದನ್ನು ಪ್ರತಿಯೊಬ್ಬರಿಗೂ ಅರಿವು ಮೂಡಿಸಬೇಕಾಗಿದೆ. ಪ್ರಜಾಪ್ರಭುತ್ವವನ್ನು ಉಳಿಸುವ ಕೆಲಸದ ಜೊತೆಗೆ ಲಂಚಗುಳಿತನವನ್ನು ನಿರ್ನಾಮ ಮಾಡಿ ನಾಡಪ್ರಭು ಕೆಂಪೇಗೌಡರ ಆಶಯದಂತೆ ದೇಶ ಕಟ್ಟಬೇಕಾಗಿದೆ ಎಂದು ಸುಪ್ರೀಂಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ವಿ.ಗೋಪಾಲಗೌಡ ಹೇಳಿದರು.

ಮೈಸೂರು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಮೈಸೂರು ವಕೀಲರ ಸಂಘದ ವತಿಯಿಂದ ಆಯೋಜಿಸಿದ್ದ 'ನಾಡಪ್ರಭು ಕೆಂಪೇಗೌಡರ 513ನೇ ಜಯಂತೋತ್ಸವ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಧರ್ಮ ಮಾರ್ಗದಲ್ಲಿ ನಡೆದುಕೊಂಡವರು ನ್ಯಾಯಾಧೀಶರು, ವಕೀಲರು ಯಾರೇ ಆಗಿದ್ದರೂ ಅವರು ಮಾಡಿದ ತಪ್ಪಿಗೆ ಶಿಕ್ಷೆಯಾಗಬೇಕು. ಪ್ರತಿಯೊಬ್ಬರಿಗೂ ನ್ಯಾಯ ದೊರಕಬೇಕು. ತಪ್ಪಿತಸ್ಥರನ್ನು ನೇರವಾಗಿ ಜೈಲಿಗೆ ಹಾಕಬೇಕು ಎಂದರು.

ಕಳೆದ 5 ವರ್ಷದಿಂದ ರಾಜ್ಯ ಸರ್ಕಾರ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ ಮಾಡುತ್ತಿದೆ. ಆದರೆ ಯಾವ ಕಾರ್ಯಕ್ರಮಗಳಲ್ಲಿಯೂ ಕೆಂಪೇಗೌಡರ ಇತಿಹಾಸ ತಿಳಿಸುವ ಪ್ರಯತ್ನ ಮಾಡಿಲ್ಲ. ಆದ್ದರಿಂದ ಆಡಳಿತ ನಡೆಸುವ ಜನಪ್ರತಿನಿಧಿಗಳಿಗೆ ನಾಡಪ್ರಭುಗಳ ಬಗ್ಗೆ ಇತಿಹಾಸಕಾರರಿಂದ ಉಪನ್ಯಾಸ ಕೊಡಿಸಬೇಕಾಗಿದೆ. ಪ್ರಗತಿಪರರು, ಚಿಂತನಾಕಾರರು, ಕ್ರಾಂತಿ ಪುರುಷರು ಆದ ನಾಡಪ್ರಭು ಕೆಂಪೇಗೌಡರು ನಮ್ಮ ನಡುವೆ ಇದ್ದಾರೆ. ಅವರ ಮೆಚ್ಚುಗೆ ಪಡೆಯುವುದಕ್ಕಾದರೂ ನಾವುಗಳು ಸರಿಯಾದ ರೀತಿಯಲ್ಲಿ ನಡೆದುಕೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.



ಸಂಸ್ಕೃತಿ ರಕ್ಷಣೆ ಮುಖ್ಯ: ಇಂದಿನ ಯುವಕರು, ವಿದ್ಯಾರ್ಥಿಗಳು ನಮ್ಮ ಸಂಸ್ಕೃತಿಯನ್ನು ಮರೆಯುತ್ತಾ ಅನ್ಯ ದೇಶದ ಸಂಸ್ಕೃತಿಗೆ ಮಾರು ಹೋಗುತ್ತಿದ್ದಾರೆ. ಇದಕ್ಕೆ ಟಿವಿ ಮತ್ತು ಮೊಬೈಲ್‌ಗಳೇ ಮುಖ್ಯ ಕಾರಣ. ಆದ್ದರಿಂದ ಪೋಷಕರು ತಮ್ಮ ಮಕ್ಕಳನ್ನು ನಮ್ಮ ಸಂಸ್ಕೃತಿ–ಸಂಸ್ಕಾರದತ್ತ ಕರೆತರಬೇಕಾಗಿದೆ. ನಮ್ಮದು ವಿಶ್ವವೇ ಮೆಚ್ಚಿದ ಸಂಸ್ಕೃತಿಯಾಗಿದೆ ಎಂದು ತಿಳಿಸಿದರು.

ಇತಿಹಾಸ ತಜ್ಞರಿಂದ ಅಧ್ಯಯನವಾಗಬೇಕು: ಇತಿಹಾಸ ತಜ್ಞ ಡಾ.ತಲಕಾಡು ಚಿಕ್ಕರಂಗೇಗೌಡ ಮಾತನಾಡಿ, ನಾಡಪ್ರಭು ಕೆಂಪೇಗೌಡರ ಬಗ್ಗೆ ಇಂದಿಗೂ ಹಲವರು ಸಂಶಯ ವ್ಯಕ್ತಪಡಿಸುವುದರ ಜೊತೆಗೆ ಅವರಿಗೆ ಇಷ್ಟೊಂದು ಗೌರವ ನೀಡುವುದೇಕೆ ಎಂದು ಪ್ರಶ್ನಿಸುತ್ತಾರೆ. ಇದರಲ್ಲಿ ಪ್ರಶ್ನೆ ಕೇಳುವವರ ತಪ್ಪಿಲ್ಲ ಬದಲಿಗೆ ಕೆಂಪೇಗೌಡರ ಬಗ್ಗೆ ತಳಸ್ಪರ್ಶಿಯವಾಗಿ ಅಧ್ಯಯನವಾಗದೇ ಇಲ್ಲದಿರುವುದು. ನಾಡಪ್ರಭು ಕೆಂಪೇಗೌಡರ ಕುರಿತು ಇತಿಹಾಸ ತಜ್ಞರನ್ನು ಬಿಟ್ಟು ಉಳಿದ ಎಲ್ಲರೂ ಕೃತಿಗಳನ್ನು ಬರೆದಿದ್ದಾರೆ. ಇತಿಹಾಸ ಪರಿಜ್ಞಾನವುಳ್ಳ ಇತಿಹಾಸ ತಜ್ಞರು ಅಧ್ಯಯನ ನಡೆಸಿ ಸತ್ಯ ಸಂಗತಿ ಬರೆದರೆ ಅದಕ್ಕೆ ಮಹತ್ವ ದೊರಕುತ್ತದೆ. ಎಂದರಲ್ಲದೆ ಬೆಂಗಳೂರು ಕಟ್ಟಿದ ನಾಡಪ್ರಭು ಕೆಂಪೇಗೌಡರ ಬಗ್ಗೆ ಸವಿವರವಾಗಿ ತಿಳಿಸಿಕೊಟ್ಟರು.

> ಈ ದೇಶಕ್ಕೆ ಗ್ರೇಟರ್ ಇಂಡಿಯಾ ಪರಿಕಲ್ಪನೆಯನ್ನು ಮೊದಲ ಜಾರಿಗೆ ತಂದ ಚೋಳರ ಕಾಲದಲ್ಲಿಯೇ ಸುಪ್ರೀಂಕೋರ್ಟ್‌ನ ಒಂದು ಪೀಠವನ್ನು ತಲಕಾಡಿನಲ್ಲಿ ಸ್ಥಾಪಿಸಲಾಗಿತ್ತು. 11ನೇ ಶತಮಾನದಲ್ಲಿಯೇ ಮೈಸೂರು ಪ್ರಾಂತ್ಯ ಸುಪ್ರೀಂಕೋರ್ಟ್‌ನ ಪೀಠವನ್ನು ಹೊಂದಿತ್ತು. ಹಾಗೆಯೇ ದೇಶದ ಅತ್ಯುಚ್ಚ ನ್ಯಾಯಾಲಯವಾದ ಸುಪ್ರೀಂಕೋರ್ಟ್‌ನ ಪೀಠ ಬೆಂಗಳೂರಿನಲ್ಲಿ ಈಗ ಸ್ಥಾಪನೆಯಾಗಬೇಕಾಗಿದೆ.
> – ಡಾ.ತಲಕಾಡು ಚಿಕ್ಕರಂಗೇಗೌಡ, ಇತಿಹಾಸ ತಜ್ಞ

ಆದಿಚುಂಚನಗಿರಿ ಶಾಖಾಮಠದ ಶ್ರೀ ಸೋಮನಾಥೇಶ್ವರ ಸ್ವಾಮೀಜಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎಂ.ಎಲ್. ರಘುನಾಥ್, ವಿಧಾನ ಪರಿಷತ್ ಮಾಜಿ ಸಭಾಪತಿ ಡಾ.ವೀರಣ್ಣ ಮತ್ತಿಕಟ್ಟಿ, ವಿಧಾನ ಮಂಡಲ ಮಾಜಿ ಭದ್ರತಾ ಅಧೀಕ್ಷಕ ಎಂ.ಎಲ್.ಪಿಳ್ಳಪ್ಪ ಕರ್ನಾಟಕ ರಾಜ್ಯ ವಕೀಲರ ಪರಿಷತ್ ಉಪಾಧ್ಯಕ್ಷ ಬಿ.ಆರ್. ಚಂದ್ರಮೌಳಿ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಮಾಜಿ ಅಧ್ಯಕ್ಷ ಎಸ್. ಆನಂದ್‌ಕುಮಾರ್, ಮಾಜಿ ಕಾರ್ಯದರ್ಶಿ ಬಿ.ಶಿವಣ್ಣ, ಕೆ.ಎಸ್.ನಾಗರಾಜು ಮತ್ತಿತರರು ಉಪಸ್ಥಿತರಿದ್ದರು.

ಕಾಡಂಚಿನ ಗ್ರಾಮಗಳಲ್ಲಿ ಕಾಡುಪ್ರಾಣಿಗಳ ಹಾವಳಿ ತಡೆಯಲು

ತ.ನಾಡು ಮಾದರಿ ಸ್ಟೀಲ್‌ರೋಪ್ ಬ್ಯಾರಿಕೇಡ್ ಅಳವಡಿಸಲು ಕ್ರಮ

ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಕ್ರಮದಲ್ಲಿ ಡಿಸಿ ಡಾ.ಬಗಾದಿ ಗೌತಮ್ ಭರವಸೆ

ಸರಗೂರು, ಜು.16– ಕಾಡಂಚಿನ ಗ್ರಾಮಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ತಡೆಯಲು ತಮಿಳುನಾಡು ಮಾದರಿ 'ಸ್ಟೀಲ್‌ರೋಪ್ ಬ್ಯಾರಿಕೇಡ್' ಅಳವಡಿಸಲು ಅರಣ್ಯ ಇಲಾಖೆಯೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಭರವಸೆ ನೀಡಿದರು.



ತಾಲೂಕಿನ ಬಿ.ಮಟಕೆರೆ ಗ್ರಾಪಂ ವ್ಯಾಪ್ತಿಯ ಮೊಳೆಯೂರು ಗ್ರಾಮದ ಕನಕ ಭವನದಲ್ಲಿ ಶನಿವಾರ ನಡೆದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಜನರಿಗೆ ಕಾಡುಪ್ರಾಣಿಗಳಿಂದ ಸಾಕಷ್ಟು ತೊಂದರೆಯಾಗುತ್ತಿದೆ. ಅಲ್ಲದೆ ಇಂದಿನ ಕಾರ್ಯಕ್ರಮದಲ್ಲಿ ಕಾಡುಪ್ರಾಣಿಗಳ ಹಾವಳಿಗೆ ಸಂಬಂಧಿಸಿದಂತೆ ಸಾಕಷ್ಟು ಅರ್ಜಿ ಸಲ್ಲಿಕೆಯಾಗಿವೆ. ಹೀಗಾಗಿ ಕಾಡು ಪ್ರಾಣಿಗಳ ಹಾವಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ತಮಿಳುನಾಡು ಮಾದರಿ ಸ್ಟೀಲ್‌ರೋಪ್ ಬ್ಯಾರಿಕೇಡ್ ಅಳವಡಿಸುವುದು ಸೂಕ್ತ ಎಂದರು.

ಗ್ರಾಮ ಠಾಣಾ ಜಾಗ ಬಿಡಿಸಿ: ಗ್ರಾಮ ಠಾಣಾ ಜಾಗಗಳು ಒತ್ತುವರಿಯಾಗಿದ್ದಲ್ಲಿ ಕೂಡಲೇ ಗ್ರಾಪಂ ಜನಪ್ರತಿನಿಧಿಗಳು, ಅಧಿಕಾರಿಗಳು ಬಿಡಿಸಲು ಮುಂದಾಗಬೇಕು. ಇಲ್ಲವಾದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಪೊಲೀಸ್ ಇಲಾಖೆ ಸಹಕಾರ ಪಡೆದು ಬಿಡಿಸಲು ಮುಂದಾಗಬೇಕು. ಜೊತೆಗೆ ಸ್ಮಶಾನಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಕ್ರಮವಹಿಸಬೇಕು ಎಂದು ಸೂಚಿಸಿದರು.

ಮದ್ಯದ ಸದ್ದು: ಕಾಡಂಚಿನ ಗ್ರಾಮಗಳಲ್ಲಿ ಹೆಚ್ಚಾಗಿ ವಾಸಿಸುವ ಹಾಡಿ ಜನರು ಸಂಜೆವರೆಗೆ ದುಡಿದು ಮದ್ಯ ಸೇವನೆ ಮಾಡಿ ಎಲ್ಲೆಂದರಲ್ಲಿ ಮಲಗುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಲು ಬಿ.ಮಟಕೆರೆಯಲ್ಲಿರುವ ಎಂಎಸ್‌ಐಎಲ್ ಮದ್ಯ ಮಾರಾಟ ಅಂಗಡಿ ತೆರವುಗೊಳಿಸಬೇಕು.

ಅಧಿಕಾರಿಗೆ ತರಾಟೆ

ತಾಲೂಕಿನ ಕಾಡಬೇಗೂರು ಗ್ರಾಮದಲ್ಲಿ ಒಂದೂವರೆ ವರ್ಷದಿಂದ ಅಂಗನವಾಡಿ ಕಟ್ಟಡ ಅಪೂರ್ಣಗೊಂಡಿರುವ ವಿಷಯ ತಿಳಿದ ಜಿಲ್ಲಾಧಿಕಾರಿಗಳು ಸಾಮಾನ್ಯ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಒಂದೂವರೆ ವರ್ಷ ತೆಗೆದುಕೊಂಡರೆ ಹೇಗೆ? ಎಂದು ಲೋಕೋಪಯೋಗಿ ಇಂಜಿನಿಯರ್ ಧ್ರುವರಾಜ್‌ರನ್ನು ತರಾಟೆಗೆ ತೆಗೆದುಕೊಂಡು ಎರಡೂವರೆ ತಿಂಗಳೊಳಗೆ ಕಟ್ಟಡ ಕಾಮಗಾರಿ ಮುಗಿಸಬೇಕು ಎಂದು ತಾಕೀತು ಮಾಡಿದರು.

ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ ಮನೆ, ಮನೆಗಳಲ್ಲಿ ಮದ್ಯ ಮಾರಾಟ ರಾಜಾ ರೋಷವಾಗಿ ನಡೆಯುತ್ತಿದೆ. ಕೂಡಲೇ ಕ್ರಮ ವಹಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು ಅಬಕಾರಿ ಇಲಾಖಾಧಿಕಾರಿ ಗೀತಾ ಅವರನ್ನು ತರಾಟೆಗೆ ತೆಗೆದುಕೊಂಡು, ಕೂಡಲೇ ದೂರು ದಾಖಲಿಸುವಂತೆ ಆದೇಶಿಸಿದರು.

ಕಾರ್ಯಕ್ರಮದಲ್ಲಿ ಬಿ.ಮಟಕೆರೆ ಗ್ರಾಪಂ ಉಪಾಧ್ಯಕ್ಷ ದೇವದಾಸ್ ಗ್ರಾಮದ ಸಮಸ್ಯೆಗಳನ್ನು ಜಿಲ್ಲಾಧಿಕಾರಿ ಬಳಿ ಹೇಳಿಕೊಂಡರು. ಈ ವೇಳೆ ರೈತರಿಗೆ ಕೃಷಿ ಇಲಾಖೆಯಿಂದ ಬಿತ್ತನೆ ಬೀಜದ ಕಿಟ್ ವಿತರಿಸಲಾಯಿತು.

ನಂತರ ವಿವಿಧ ಫಲಾನುಭವಿಗಳಿಗೆ ಮಂಜೂರಾತಿ ಆದೇಶ ಪತ್ರ ನೀಡಲಾಯಿತು. ಶಾಸಕ ಅನಿಲ್ ಚಿಕ್ಕಮಾದು, ಗ್ರಾಪಂ ಅಧ್ಯಕ್ಷೆ ರೂಪಾಬಾಯಿ, ಸ್ಥಾಯಿ ಸಮಿತಿ ಅಧ್ಯಕ್ಷ ಬೆಟ್ಟಸ್ವಾಮಿ, ಹುಣಸೂರು ಎಸಿ ವರ್ಣಿತ್ ನೇಗಿ, ತಹಸೀಲ್ದಾರ್ ಚಲುವರಾಜು, ತಾಲೂಕು ಕುರುಬ ಸಮಾಜದ ಅಧ್ಯಕ್ಷ ಆನಂದ್, ನಾಮಧಾರಿಗೌಡ ಸಮಾಜದ ಅಧ್ಯಕ್ಷ ಭೀಮರಾಜ್, ಗುಣಪಾಲ್, ಹರಿದಾಸ್, ದೇವರಾಜು, ಗುಡಿಗೌಡರ ಕುಮಾರ್, ಸಂತೋಷ್, ಶಶಿಪಟೇಲ್, ಪಂಚಾಯಿತಿ ಸದಸ್ಯರು, ತಾಲೂಕು ಮಟ್ಟದ ಅಧಿಕಾರಿಗಳು ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಕಾಂಕ್ರೀಟ್ ರಸ್ತೆ, ಚರಂಡಿ ಕಾಮಗಾರಿಗೆ ಗುದ್ದಲಿ ಪೂಜೆ



ಹೆಚ್.ಡಿ.ಕೋಟೆ, ಜು.16– ತಾಲೂಕಿನ ಹಾಲನಹಳ್ಳಿ ಗ್ರಾಮದಲ್ಲಿ 1.35 ಕೋಟಿ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಗುದ್ದಲಿ ಪೂಜೆ ನೆರವೇರಿಸಿದರು. ನಂತರ ಮಾತನಾಡಿದ ಅವರು, ತಾಲೂಕಿನಲ್ಲಿ ಹಂತ ಹಂತವಾಗಿ ಅಭಿವೃದ್ಧಿ ಕಾಮಗಾರಿ ನಡೆಸಲಾಗುತ್ತಿದೆ. ತಾಲೂಕಿನ ಅಭಿವೃದ್ಧಿಯೇ ನನ್ನ ಮುಖ್ಯ ಗುರಿ. ಹೀಗಾಗಿ ಹೆಚ್ಚಿನ ಅನುದಾನ ಮಂಜೂರು ಮಾಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದೇನೆ ಎಂದರು. ಈ ವೇಳೆ ಸಹಾಯಕ ಇಂಜಿನಿಯರ್ ಎಂ.ಅವಿನಾಶ್, ಪಿಡಿಓ ಅಶ್ವಿನಿ, ಗ್ರಾಪಂ ಅಧ್ಯಕ್ಷ, ಸದಸ್ಯರು, ಗ್ರಾಮಸ್ಥರು ಹಾಜರಿದ್ದರು.

ಕೊಟ್ಟಿಗೆಗೆ ಆಕಸ್ಮಿಕ ಬೆಂಕಿ: 3 ದನಗಳ ಸಾವು

ಹುಣಸೂರು, ಜು.16– ಕೊಟ್ಟಿಗೆಗೆ ಆಕಸ್ಮಿಕ ಬೆಂಕಿ ಬಿದ್ದು, 3 ದನಗಳು ಬೆಂಕಿಗಾಹುತಿಯಾಗಿರುವ ಘಟನೆ ತಾಲೂಕಿನ ಮುಳ್ಳೂರಿನಲ್ಲಿ ನಡೆದಿದೆ.

ತಾಲೂಕಿನ ಗಾವಡಗೆರೆ ಹೋಬಳಿ ಮುಳ್ಳೂರು ಗ್ರಾಮದ ನಿವಾಸಿ ಜಯಮ್ಮ ಅವರಿಗೆ ಸೇರಿದ ಹಸುಗಳು ಸಾವನ್ನಪ್ಪಿದ್ದು, ಸುಮಾರು 3 ಲಕ್ಷ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ. ಎಂದಿನಂತೆ ಸೊಳ್ಳೆಗಾಗಿ ಪಾತ್ರೆಯಲ್ಲಿ ಸ್ವಲ್ಪ ಬೆಂಕಿ ಹಾಕಿ ಮಲಗಿದ್ದರು. ಗಾಳಿಯಿಂದ ಬೆಂಕಿ ಕಿಡಿ ಕೊಟ್ಟಿಗೆ ಮೇಲ್ಛಾವಣಿಗೆ ಹಾರಿ ಬೆಂಕಿ ಹತ್ತಿಕೊಂಡಿದ್ದು, ಮನೆಯವರು ಎಚ್ಚರಗೊಳ್ಳುವಷ್ಟರಲ್ಲಿ ಬೆಂಕಿ ಇಡೀ ಕೊಟ್ಟಿಗೆಗೆ ವ್ಯಾಪಿಸಿದ್ದಲ್ಲದೆ, ಕೊಟ್ಟಿಗೆಯಲ್ಲಿದ್ದ ಹಸುಗಳು ಸಾವನ್ನಪ್ಪಿವೆ. ಕೆ.ಆರ್.ನಗರ ಹಾಗೂ ಹುಣಸೂರು ಅಗ್ನಿ ಶಾಮಕ ಸಿಬ್ಬಂದಿಗಳಿಗೆ ಮಾಹಿತಿ ನೀಡಿದ್ದು, ಅಗ್ನಿಶಾಮಕ ಸಿಬಂದಿಗಳು ಬರುವ ವೇಳೆಗೆ ಕೊಟ್ಟಿಗೆ ಸಂಪೂರ್ಣ ಸುಟ್ಟು ಹೋಗಿತ್ತು. ಈ ಸಂಬಂಧ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳೆ ಮೇಲೆ ತಂದೆ, ಮಗನಿಂದ ಹಲ್ಲೆ

ಹುಣಸೂರು, ಜು.16– ಜಮೀನನ್ನು ಟ್ರಾಕ್ಟರ್‌ನಿಂದ ಉಳುಮೆ ಮಾಡಿಸಲು ಹೋದ ಮಹಿಳೆ ಮೇಲೆ ತಂದೆ, ಮಗ ಹಲ್ಲೆ ನಡೆಸಿರುವ ಘಟನೆ ತಾಲೂಕಿನ ತಮ್ಮಡಹಳ್ಳಿ ಗ್ರಾಮದಲ್ಲಿ ನಡೆದಿದೆ. ತಮ್ಮಡಹಳ್ಳಿ ಗ್ರಾಮದ ನಿವಾಸಿ ಮುದ್ದದೇವನಾಯಕ ಅವರ ಪತ್ನಿ ಸಾವಿತ್ರಮ್ಮ(46) ಹಲ್ಲೆಗೊಳಗಾದವರಾಗಿದ್ದು, ಅದೇ ಗ್ರಾಮದ ಮಾದೇಗೌಡ ಉರುಫ್ ಮೊಗಣ್ಣೇಗೌಡ, ಅವರ ಪುತ್ರ ರವಿ ಹಲ್ಲೆ ನಡೆಸಿದವರು.

ಸಾವಿತ್ರಮ್ಮ ಅವರು ತಾಲೂಕಿನ ತಿಮ್ಲಾಪುರ ಗ್ರಾಮದ ಸರ್ವೆ ನಂ 24ರಲ್ಲಿರುವ ತಮ್ಮ ಜಮೀನಿನನ್ನು ಟ್ರಾಕ್ಟರ್‌ನಿಂದ ಉಳುಮೆ ಮಾಡಿಸಲು ಹೋದ ವೇಳೆ ಮಾದೇಗೌಡ ಹಾಗೂ ಅವರ ಮಗ ರವಿ ಇದು ನಮ್ಮ ಜಮೀನು. ನೀನು ಉಳುಮೆ ಮಾಡುವ ಹಾಗಿಲ್ಲ ಎಂದು ವಾಗ್ವಾದ ನಡೆಸಿದ್ದಾರೆ. ಅಲ್ಲದೇ ಆಕ್ರೋಶಗೊಂಡ ಮಾದೇಗೌಡ, ಅವರ ಮಗ ರವಿ ಸ್ಥಳದಲ್ಲಿ ಬಿದ್ದಿದ್ದ ಮರದ ತುಂಡಿನಿಂದ ಸಾವಿತ್ರಮ್ಮಳ ಮೇಲೆ ತೀವ್ರ ಹಲ್ಲೆ ನಡೆಸಿದ್ದಾರೆ. ಈ ವೇಳೆ ಪಕ್ಕದ ಜಮೀನಿನಲ್ಲಿದ್ದ ಪುಟ್ಟೇಗೌಡ ಎಂಬುವವರು ಸಾವಿತ್ರಮ್ಮ ಅವರನ್ನು ರಕ್ಷಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಮುದ್ದದೇವನಾಯ್ಕ ಪತ್ನಿ ಸಾವಿತ್ರಮ್ಮಳನ್ನು, ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುತ್ತಿದ್ದಾರೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಧಾರಾಕಾರ ಮಳೆಗೆ ಮನೆ ಕುಸಿತ

ದೇಬೂರು, ಜು.16– ಕಳೆದ ಕೆಲ ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಗೆ ಮನೆ ಕುಸಿದಿರುವ ಘಟನೆ ನಂಜನಗೂಡು ತಾಲೂಕಿನ ಮೊತ್ತ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಬಸವಣ್ಣ ಎಂಬುವರಿಗೆ ಸೇರಿದ ಮನೆ ಕುಸಿದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಮನೆಯಲ್ಲಿದ್ದ ದಿನಬಳಕೆಯ ವಸ್ತುಗಳು ನಾಶವಾಗಿ ಸಾಕಷ್ಟು ನಷ್ಟ ಸಂಭವಿಸಿದೆ. ಮನೆ ಮಾಲೀಕ ಬಸವಣ್ಣ ಮಾತನಾಡಿ ನಾವು ಬಡವರಾಗಿದ್ದು, ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದೇವೆ. ಮಳೆಯಿಂದಾಗಿ ನಮ್ಮ ಮನೆ ಕುಸಿದಿದೆ. ನಮಗೆ ವಾಸಿಸಲು ಮನೆ ಇಲ್ಲ. ಹಾಗಾಗಿ ಸರ್ಕಾರ ನಮಗೆ ಸೂರು ಕಲ್ಪಿಸಿ ಕೊಡುವಂತೆ ಮನವಿ ಮಾಡಿಕೊಂಡಿದ್ದಾರೆ.

ಯರಗನಹಳ್ಳಿಯಲ್ಲಿ ನೂತನ ಡೈರಿ ಉದ್ಘಾಟನೆ

ತಿ.ನರಸೀಪುರ, ಜು.16– ರೈತರು ಆರ್ಥಿಕವಾಗಿ ಸದೃಢರಾಗಲು ಹೈನುಗಾರಿಕೆ ಸಹಕಾರಿಯಾಗಿದೆ ಎಂದು ತಾಪಂ ಮಾಜಿ ಅಧ್ಯಕ್ಷ ಹಾಗೂ ಮೈಮುಲ್ ನಿರ್ದೇಶಕ ಚೆಲುವರಾಜು ತಿಳಿಸಿದರು.



ತಾಲೂಕಿನ ಯರಗನಹಳ್ಳಿಯಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮಕ್ಕೆ ಡೈರಿ ತರಬೇಕೆಂಬ ಗ್ರಾಮಸ್ಥರ ಬಹು ವರ್ಷಗಳ ಬೇಡಿಕೆ ಈಡೇರಿದೆ. ಗ್ರಾಮದಲ್ಲಿ ಹಾಲಿನ ಡೈರಿ ತೆರೆದಿರುವುದರಿಂದ ಉತ್ಪಾದಕರು ಗ್ರಾಮೀಣ ಭಾಗದಿಂದ ಪಟ್ಟಣಕ್ಕೆ ಹಾಲು ತೆಗೆದುಕೊಂಡು ಹೋಗುವ ಭವಣೆ ತಪ್ಪಲಿದೆ. ಕೃಷಿ ಜೊತೆಗೆ ಹೈನುಗಾರಿಕೆಯೂ ಸಹ ರೈತನ ಮೂಲ ಕಸುಬಾಗಿ ಬದಲಾಗಿದೆ. ಯುವಕರು ಕೆಲಸ ಅರಸಿ ಹಳ್ಳಿಗಳಿಂದ ಪಟ್ಟಣಕ್ಕೆ ವಲಸೆ ಹೋಗುವುದನ್ನು ಹೈನುಗಾರಿಕೆ ತಪ್ಪಿಸಿದ್ದು, ಮಹಿಳೆಯರ ಆರ್ಥಿಕ ಶಕ್ತಿಯಾಗಿಯೂ ಕೆಲಸ ಮಾಡುತ್ತಿದೆ ಎಂದರು.

ಮೈಮುಲ್ ಮಾಜಿ ಅಧ್ಯಕ್ಷ ಓಂ ಪ್ರಕಾಶ್ ಮಾತನಾಡಿ, ಗ್ರಾಮಗಳಲ್ಲಿ ಸಹಕಾರಿಗಳು ಸಹಕಾರ ಮನೋಭಾವದಿಂದ ಕೆಲಸ ಮಾಡುವ ಮೂಲಕ ಸಂಘದ ಉನ್ನತಿಗೆ ಕಾರಣರಾಗಬೇಕು. 40 ವರ್ಷಗಳ ಇತಿಹಾಸವಿರುವ ಮೈಮುಲ್ ವರ್ಷಕ್ಕೆ 500 ಕೋಟಿ ರೂ. ವ್ಯವಹಾರ ನಡೆಸುತ್ತಿದ್ದು, ರೈತರಿಗೆ ಪ್ರತಿ ವಾರ ಡೈರಿಗಳಿಗೆ 8 ಕೋಟಿ ರೂ. ಬಟವಾಡೆ ಮಾಡುತ್ತಿದೆ. ಜಿಲ್ಲೆಯ 7 ತಾಲೂಕಿನಲ್ಲಿ 1150 ಡೈರಿಗಳು ಅಸ್ತಿತ್ವದಲ್ಲಿದ್ದು, ಒಕ್ಕೂಟವು ಪ್ರತಿದಿನ 8 ಲಕ್ಷ ಲೀಟರ್ ಹಾಲನ್ನು ರೈತರಿಂದ ಖರೀದಿ ಮಾಡುತ್ತಿದೆ. ಆ ಪೈಕಿ 3 ಲಕ್ಷ ಲೀಟರ್ ಹಾಲು ಮಾತ್ರ ಮಾರಾಟವಾಗುತ್ತಿದೆ. ಉಳಿದ ಹಾಲನ್ನು ಪೌಡರ್ ಹಾಗೂ ಇನ್ನಿತರೆ ಉತ್ಪನ್ನಗಳಿಗೆ ಬಳಕೆ ಮಾಡಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಹೊಸೂರುಂಡಿ ಮಠಾಧ್ಯಕ್ಷ ರಾಜಶೇಖರ ಸ್ವಾಮೀಜಿ, ತಾಪಂ ಮಾಜಿ ಅಧ್ಯಕ್ಷ ಉಮೇಶ್, ಗ್ರಾಪಂ ಸದಸ್ಯ ಪ್ರಭು, ಹಾಲಿನ ಡೈರಿ ಅಧ್ಯಕ್ಷೆ ಮಮತ, ಉಪಾಧ್ಯಕ್ಷೆ ಗೀತಾ, ಕಾರ್ಯದರ್ಶಿ ಬಿ.ಎನ್.ಪಾರ್ವತಿ, ಸದಸ್ಯರಾದ ಸುಶೀಲ, ಶಿವಮ್ಮ, ಸಣ್ಣಮ್ಮ, ಮಂಜುಳಾ, ಸವಿತಾ, ಸುಶೀಲ, ಜಯಮ್ಮ, ಶೀಲಾ, ಜಯಶಂಕರಿ, ಲೀಲಾ, ವಿಸ್ತರಣಾಧಿಕಾರಿ ಪ್ರಮೋದ್, ವೀಣಾ, ಅನಿತಾ, ಮುಖಂಡರಾದ ಪರಮೇಶ್ವರಪ್ಪ, ಗೌಡರ ಮಹೇಶ್, ಸಂತೋಷ್, ಸುರೇಶ್, ಮಹದೇವ, ಶಿವಕುಮಾರ್, ಚಂದ್ರಪ್ಪ ಮತ್ತಿತರರಿದ್ದರು.

ಮತದಾರರು ಜಾಗೃತರಾದರೆ ಪ್ರಜಾಪ್ರಭುತ್ವದ ಹಾದಿ ಸುಗಮ

ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್

ಹೆಚ್.ಡಿ.ಕೋಟೆ, ಜು.16– ಪ್ರಜಾಪ್ರಭುತ್ವ ಹಾದಿ ತಪ್ಪುತ್ತಿದೆ. ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಜನರೂ ಸಹ ದಾರಿ ತಪ್ಪಿದ್ದಾರೆ. ಹಣಬಲವುಳ್ಳವರು, ಕಾನೂನಿನಡಿ ಅಪರಾಧಿಗಳು, ಅಪ್ರಾಮಾಣಿಕರು ಮಾತ್ರ ಚುನಾವಣೆಯಲ್ಲಿ ಗೆಲ್ಲುತ್ತಾರೆ. ಆದ್ದರಿಂದ ಮತದಾರರು ಜಾಗೃತರಾದರೆ ಮಾತ್ರ ಪ್ರಜಾಪ್ರಭುತ್ವದ ಹಾದಿ ಸುಗಮಗೊಳ್ಳಲಿದೆ ಎಂದು ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ತಿಳಿಸಿದರು.



ಪಟ್ಟಣದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಸಂವಿಧಾನ ರಕ್ಷಣಾ ಸಮಿತಿಯಿಂದ ಆಯೋಜಿಸಿದ್ದ ಇಂದಿನ ಪ್ರಜಾಪ್ರಭುತ್ವ ಮತ್ತು ಸಂವಿಧಾನ ಕುರಿತ ವಿಚಾರ ಮಂಡನೆ ಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀಸಲಾತಿ ವಿಚಾರ ಕ್ರೈಸ್ತರ, ಮುಸ್ಲಿಮರ, ದಲಿತರ ಹಾಗೂ ಹಿಂದುಳಿದವರ ಪ್ರಶ್ನೆ ಮಾತ್ರವಲ್ಲ ದುಡಿಯುವ ವರ್ಗದ ಪ್ರಶ್ನೆಯಾಗಿದೆ ಎಂದರು.

ಮೀಸಲಾತಿ ಬಗ್ಗೆ ಜನಸಾಮಾನ್ಯರಲ್ಲಿ ಸರಿಯಾದ ಮಾಹಿತಿ ಇಲ್ಲದಿರುವುದು ಕೆಲವೊಂದು ಅವ್ಯವಸ್ಥೆಗೆ ಕಾರಣವಾಗಿದೆ. ಎಲ್ಲಾ ಜಾತಿ ಧರ್ಮದ ಜೊತೆಗೂಡಿ ಸಂವಿಧಾನ ರಕ್ಷಣಾ ಸಮಿತಿ ರಚನೆ ಮಾಡಿರುವುದು ನಿಜಕ್ಕೂ ಶ್ಲಾಘನೀಯ ಎಂದರು.

ರಾಜ್ಯದ 64 ಸಾವಿರ ಹುದ್ದೆ ಭರ್ತಿಯಾಗಿಲ್ಲ ಸರ್ಕಾರದ 34 ಇಲಾಖೆಯಲ್ಲಿಯೂ ಗುತ್ತಿಗೆ, ಹೊರಗುತ್ತಿಗೆ ನೌಕರರ ಮೂಲಕ ಕೆಲಸ ಮಾಡಿಕೊಳ್ಳಲಾಗುತ್ತಿದೆ. ಹೀಗಾಗಿ ಸರ್ಕಾರ ನೇರ ನೇಮಕಾತಿಗೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ಪ್ರತಿಯೊಬ್ಬರೂ ಕತ್ತಿ, ಗುರಾಣಿ ಹಾಗೂ ಗನ್ ಮೂಲಕ ಹೋರಾಟ ಮಾಡುವುದಲ್ಲ, ಶಾಂತಿಯುತ ಹೋರಾಟ ಮಾಡಲು ಕಲಿತುಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಚಿಕ್ಕಮಾದು, ಮಾಜಿ ಶಾಸಕ ಚಿಕ್ಕಣ್ಣ, ಗೌರವಾಧ್ಯಕ್ಷ ಬೆಟ್ಟಯ್ಯ ಕೋಟೆ, ಸಮಿತಿ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ, ಖಜಾಂಚಿ ಪರಶಿವಮೂರ್ತಿ, ಉಪಾಧ್ಯಕ್ಷರಾದ ಬಿ.ಕಾವೇರ, ರಂಗೇಗೌಡ, ನಾಗೇಗೌಡ, ಚಂದ್ರು, ಏಜಾಜ್ ಪಾಷಾ, ಶಫಿವುಲ್ಲಾ, ಶಿವಪ್ಪಶೆಟ್ಟಿ, ಮಹೇಂದ್ರ, ಜೆ.ಪಿ.ನಾಗ ರಾಜ್, ಸಹ ಕಾರ್ಯದರ್ಶಿಗಳಾದ ಶಿವರಾಜ್, ಸುಬ್ರಮಣ್ಯ, ಪ್ರಭಾಕರ, ನಂಜುಂಡಸ್ವಾಮಿ, ಜೀವಿಕ ಉಮೇಶ್, ಪ್ರದೀಪ, ಗುರುಸ್ವಾಮಿ, ವೆಂಕಟಸ್ವಾಮಿ, ನಾಗರಾಜು, ರಾಜ ನಾಯಕ, ದೊರೆಸ್ವಾಮಿ, ಭಾಗ್ಯಲಕ್ಷ್ಮಿ, ಮಂಚಯ್ಯ, ಸತೀಶ್ ಗೌಡ, ರಾಜು, ಸೋಮೇಶ್ ಇತರರಿದ್ದರು.

ಅರ್ಜಿ ಆಹ್ವಾನ

ತಿ.ನರಸೀಪುರ, ಜು.16– ತಾಲೂಕು ನಾಯಕ ಸಂಘದಿಂದ 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.8050018240 ಸಂಪರ್ಕಿಸುವಂತೆ ತಾಲೂಕು ನಾಯಕ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಶಶಿಧರ್ ಮನವಿ ಮಾಡಿದ್ದಾರೆ.



ವರುಣಾ ಕ್ಷೇತ್ರದ ಸವಿತಾ ಸಮಾಜ ಕ್ಷೇಮಾಭಿವೃದ್ಧಿ ಸಂಘದಿಂದ ಹಡಪದ ಅಪ್ಪಣ್ಣ ಜಯಂತಿ ಪೂರ್ವಭಾವಿ ಸಭೆ ದುದ್ದಗೆರೆ ಗೋವಿಂದಯ್ಯನವರ ತೋಟದಲ್ಲಿ ನಡೆಯಿತು. ಈ ವೇಳೆ ಸಂಘದ ಅಧ್ಯಕ್ಷ ಮಾದೇವ ಮಾತನಾಡಿದರು. ಚಿತ್ರದಲ್ಲಿ ಸದಸ್ಯರನ್ನು ಕಾಣಬಹುದು.

ಶತಾಯುಷಿ ಮರಮ್ಮ ನಿಧನ




ತಿ.ನರಸೀಪುರ, ಜು.16– ತಾಲೂಕಿನ ಜಾಲಹಳ್ಳಿ ಗ್ರಾಮದ ನಿವಾಸಿ ಲೇ.ಸಿದ್ದಮಲ್ಲಪ್ಪ ಅವರ ಪತ್ನಿ ಮರಮ್ಮ(103) ಶನಿವಾರ ನಿಧನರಾದರು. ಮೃತರು ನಾಲ್ವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿಸಲಾಯಿತು. ಬಿಲಿಗೆರೆಹುಂಡಿ ಡೈರಿ ಅಧ್ಯಕ್ಷ ಮಂಟೆ ಲಿಂಗಪ್ಪ ಸಂತಾಪ ಸೂಚಿಸಿದ್ದಾರೆ.

ಜನರಿಗೆ ಸರ್ಕಾರಿ ಸವಲತ್ತು ತಲುಪಲು ಕ್ರಮವಹಿಸಿ

ಗ್ರಾಪಂ ಸದಸ್ಯರು, ಸಿಬ್ಬಂದಿಗೆ ಶಾಸಕ ಸಲಹೆ

ಹುಣಸೂರು, ಜು.16– ಜನತಂತ್ರ ವ್ಯವಸ್ಥೆಯಲ್ಲಿ ಸರ್ಕಾರದ ಸವಲತ್ತುಗಳನ್ನು ಜನರಿಗೆ ತಲುಪಿಸುವಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು, ಪಿಡಿಓಗಳು ಹಾಗೂ ಗ್ರಾಪಂ ಸದಸ್ಯರು ಸೇತುವೆಯಾಗಿ ಕೆಲಸ ನಿರ್ವಹಿಸಬೇಕು ಎಂದು ಶಾಸಕ ಹೆಚ್.ಪಿ. ಮಂಜುನಾಥ್ ಸಲಹೆ ನೀಡಿದರು.



ತಾಲೂಕು ರತ್ನಪುರಿಯಲ್ಲಿ ಶನಿವಾರ ನಡೆದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆಗೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪೌತಿ, ಜಂಟಿ ಖಾತೆ ಸೇರಿದಂತೆ ಹಲವು ಸಣ್ಣಪುಟ್ಟ ಸಮಸ್ಯೆಗಳಿಗೆ ಮಧ್ಯವರ್ತಿಗಳ ಅವಲಂಬನೆ, ಜನರು ಕಚೇರಿಗೆ ಅಲೆಯುವುದನ್ನು ತಪ್ಪಿಸಲು ಈ ಕಾರ್ಯಕ್ರಮ ಸಹಕಾರಿ ಎಂದರು.

ತಾಲೂಕಿನ ಉದ್ದೂರುಕಾವಲು, ಆಸ್ಪತ್ರೆ ಕಾವಲ್ ಸೊಸೈಟಿ ವ್ಯಾಪ್ತಿ ಸಾಗುವಳಿ ಪಡೆದಿದ್ದರೂ, ಕಂದಾಯ ಕಟ್ಟಿದಿದ್ದವರಿಗೆ ಕಾನೂನು ತೊಡಕಿನಿಂದಾಗಿ ಭೂ ಒಡೆತನದ ಹಕ್ಕು ನೀಡಲು ಸಾಧ್ಯವಿಲ್ಲ. ಸಾಗುವಳಿ ಮಂಜೂರಾಗಿ ಕಂದಾಯ ಕಟ್ಟಿರುವ ರೈತರಿಗೆ ಮುಂದಿನ 15 ದಿನಗಳಲ್ಲಿ ಸಾಗುವಳಿ ವಿತರಿಸಲಾಗುವುದು ಎಂದರು.

ಉದ್ದೂರು ಕಾವಲ್ ಗ್ರಾಪಂಗೆ ಸ್ವಂತ ಕಟ್ಟಡ ಹಾಗೂ ನಂಜಾಪುರದಲ್ಲಿ ಸ್ಮಶಾನಕ್ಕೆ ಜಾಗ ಗುರುತಿಸಲು ಸರ್ವೆಯರ್ ಸೇರಿದಂತೆ ಅಧಿಕಾರಿಗಳು ವಿಫಲರಾಗಿದ್ದಾರೆ. ಇನ್ನೆರಡು ದಿನದಲ್ಲಿ ಸ್ಥಳ ಗುರುತಿಸದಿದ್ದಲ್ಲಿ ಜಿಲ್ಲಾಧಿಕಾರಿಗಳಿಗೆ ಕ್ರಮಕ್ಕೆ ಶಿಫಾರಸು ಮಾಡಲಾಗುವುದು ಎಂದು ಎಚ್ಚರಿಸಿದರು.

ಸಭೆಯಲ್ಲಿ ಹೊನ್ನಿಕುಪ್ಪೆ–ರತ್ನಪುರಿ ರಸ್ತೆ, ಗೌರಿಪುರದ ಅರ್ಕೇಶ್ವರ ದೇವಸ್ಥಾನದ ರಸ್ತೆ, ರತ್ನಪುರಿ–ಹುಣಸೂರು ಮುಖ್ಯರಸ್ತೆ, ತಗ್ಗಿತಾಳಮ್ಮ ರಸ್ತೆ, ಹುಂಡಿಮಾಳ ರಸ್ತೆ, ರತ್ನಪುರಿ ಗ್ರಾಮ ಪರಿಮಿತಿ ರಸ್ತೆಗಳು ಸೇರಿದಂತೆ ಈ ಭಾಗದ ಹಲವು ರಸ್ತೆಗಳು ಸತತ ಮಳೆಯಿಂದಾಗಿ ಹಾಳಾಗಿದ್ದು, ದುರಸ್ತಿಗೆ ಗ್ರಾಮಸ್ಥರು ಮನವಿ ಮಾಡಿದ್ದಾರೆ. ಆದರೆ ಸರ್ಕಾರದಲ್ಲಿ ಅನುದಾನದ ಕೊರತೆ ಇದ್ದು, ಆದಷ್ಟು ರಸ್ತೆ ಅಭಿವೃದ್ಧಿಪಡಿಸಲಾಗುವುದು ಎಂದು ಭರವಸೆ ನೀಡಿದರು.

ಜಿಪಂ ಮಾಜಿ ಸದಸ್ಯೆ, ಮೈಮುಲ್ ನಿರ್ದೇಶಕಿ ಶಿವಗಾಮಿ, ದಸಂಸ ಪುಟ್ಟಸ್ವಾಮಿ, ಸೊಸೈಟಿ ಅಧ್ಯಕ್ಷ ಮೆಂಗಾಣಿ ಮತ್ತಿತರರು ರತ್ನಪುರಿ ಗ್ರಾಮವು 2 ಗ್ರಾಪಂಗಳಿಗೆ ಸೇರಿದ್ದು, ಆಡಳಿತ ದೃಷ್ಟಿಯಿಂದ ಒಂದೇ ಗ್ರಾಪಂಗೆ ಸೇರಿಸಬೇಕು ಎಂದು ಮನವಿ ಮಾಡಿದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನಾ ಗ್ರಾಮದ ಎಲ್ಲಾ ಸಮುದಾಯಗಳ ಬೀದಿಗಳಿಗೆ ಭೇಟಿ ನೀಡಿ, ಜನರಿಂದ ಸಮಸ್ಯೆ ಆಲಿಸಿದ ಶಾಸಕರು, ಗ್ರಾಮದ ಆಂಜನೇಯಸ್ವಾಮಿ ದೇವಸ್ಥಾನ ಜೀರ್ಣೋದ್ಧಾರಕ್ಕೆ ಎಲ್ಲಾ ಸಮುದಾಯದ ಜನರನ್ನೊಳಗೊಂಡ ಸಮಿತಿ ರಚಿಸಿ, ವರ್ಷದೊಳಗೆ ಸುಂದರ ದೇವಾಲಯ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು ಎಂದರು.

ಸಭೆಯಲ್ಲಿ ವಿವಿಧ ಯೋಜನೆ ಫಲಾನುಭವಿಗಳಿಗೆ ಶಾಸಕರು, ತಹಸೀಲ್ದಾರ್ ಡಾ.ಅಶೋಕ್, ಇಓ ಮನು ಹಕ್ಕುಪತ್ರ ವಿತರಿಸಿದರು. ಗ್ರಾಪಂ ಅಧ್ಯಕ್ಷ ದಿನೇಶ್, ನಿರೋಷಾ, ಜಿಪಂ ಮಾಜಿ ಸದಸ್ಯ ಸುರೇಂದ್ರ, ದಲಿತ ಮುಖಂಡ ಆನಂದಸ್ವಾಮಿ, ಗ್ರಾಪಂ ಸದಸ್ಯರಾದ ಮನುಕುಮಾರ್, ರಾಧ, ತಾಪಂ ಮಾಜಿ ಸದಸ್ಯ ವೆಳ್ಳಂಗಿರಿ, ಪ್ರಭಾಕರ್, ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್, ಶಿಕ್ಷಣ ಇಲಾಖೆ ಸಂಪನ್ಮೂಲ ಅಧಿಕಾರಿ ಸಂತೋಷ್, ಉಪ ತಹಸೀಲ್ದಾರ್ ನರಸಿಂಹಯ್ಯ ಮತ್ತಿತರರಿದ್ದರು.

ಏಕರೂಪ ಸಮವಸ್ತ್ರ ನೀಡಲು ಸರ್ಕಾರಕ್ಕೆ ಶಿಫಾರಸ್ಸು

ತಿ.ನರಸೀಪುರ, ಜು.16– ರಾಜ್ಯಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಏಕರೂಪ ಸಮವಸ್ತ್ರ ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ತಿಳಿಸಿದರು.



ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ನಡೆದ ಸಫಾಯಿ ಕರ್ಮಚಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಬೇರೆ ರಾಜ್ಯಗಳಿಗೆ ಸಫಾಯಿ ಕರ್ಮಚಾರಿಗಳ ನೈಜ ಜೀವನ ಸ್ಥಿತಿ ತಿಳಿಯಲು ಪ್ರವಾಸ ಮಾಡಿದ್ದು, ನಮ್ಮ ರಾಜ್ಯದ ಪೌರಕಾರ್ಮಿಕರ ಜೀವನಮಟ್ಟ ಉನ್ನತೀಕರಿಸುವ ಕಡೆ ಹೆಚ್ಚು ಗಮನಹರಿಸಲಾಗುವುದು ಎಂದರು.

ಮುಖ್ಯಮಂತ್ರಿಗಳು ಸಫಾಯಿಗಳ ಬಗ್ಗೆ ಉದಾರ ಮನೋಭಾವ ಹೊಂದಿದ್ದು, ಅವರು ಪೌರ ಕಾರ್ಮಿಕರ ವಿಲೀನ, ವೇತನ ಹೆಚ್ಚಳ, ಉಪಕರಣ ಸರಬರಾಜು ಮತ್ತು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆ. ಹಾಗಾಗಿ ನಮ್ಮ ಸರ್ಕಾರ ಪೌರ ಕಾರ್ಮಿಕರ ಎಲ್ಲ ಬೇಡಿಕೆಗಳನ್ನು ಈಡೇರುವ ಇಚ್ಛಾಶಕ್ತಿ ಹೊಂದಿದೆ ಎಂದರು.

ನಿವೇಶನ ಕೊರತೆ: ಪುರಸಭಾ ವ್ಯಾಪ್ತಿಯ ಪೌರ ಕಾರ್ಮಿಕರ ಕಾಲೋನಿಯಲ್ಲಿ ನಿವೇಶನಗಳ ಕೊರತೆ ಎದುರಾಗಿದ್ದು, ಕೆಲವರಿಗೆ ಸ್ವಂತ ನಿವೇಶನ ಇರುವುದಿಲ್ಲ. ಪುರಸಭೆ ಹಲವು ವರ್ಷಗಳಿಂದ ನಿವೇಶನ ನೀಡುವ ಭರವಸೆ ನೀಡುತ್ತಲೇ ಬಂದಿದೆ. ಆದರೂ ಪೌರಕಾರ್ಮಿಕರ ಬೇಡಿಕೆ ಈಡೇರಿಸಲು ಅಧಿಕಾರಿಗಳು ಪ್ರಯತ್ನಿಸುತ್ತಿಲ್ಲ ಎಂದು ಕರ್ಮಚಾರಿಯೊಬ್ಬರು ಆರೋಪಿಸಿದರು.

ವೇತನ ಬಿಡುಗಡೆ ವಿಳಂಬ: ಪುರಸಭೆಯಲ್ಲಿ ಕಾರ್ಯ ನಿರ್ವಹಿಸುವ ಪೌರ ಕಾರ್ಮಿಕರಿಗೆ ಸಕಾಲದಲ್ಲಿ ವೇತನ ನೀಡುತ್ತಿಲ್ಲ. ಪೌರ ಕಾರ್ಮಿಕರಿಗೆ ನೀಡುವ ಉಪಹಾರ ಕಳಪೆಯಾಗಿದೆ. ಜೀವರಕ್ಷಕ ಉಪಕರಣಗಳನ್ನು ಸಕಾಲದಲ್ಲಿ ನೀಡುತ್ತಿಲ್ಲ ಎಂದು ಸಫಾಯಿಯೊಬ್ಬರು ಅಧ್ಯಕ್ಷರಲ್ಲಿ ಅವಲತ್ತುಕೊಂಡರು.

ವೇತನ, ಸಫಾಯಿಗಳಿಗೆ ನಿವೇಶನ ನೀಡುವ ಬಗ್ಗೆ ಪುರಸಭೆ ಮುಖ್ಯಾಧಿಕಾರಿಯನ್ನು ಅಧ್ಯಕ್ಷರು ತರಾಟೆಗೆ ತೆಗೆದುಕೊಂಡರು. 3 ತಿಂಗಳೊಳಗೆ ಪೌರಕಾರ್ಮಿಕರ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವ ಭರವಸೆ ನೀಡಿದರು.

ಈ ವೇಳೆ ಕ್ಷೇತ್ರಾಧ್ಯಕ್ಷ ಲೋಕೇಶ್ ನಾಯಕ, ಬಿಜೆಪಿ ರಾಜ್ಯ ಕಾರ್ಯಕಾರಣಿ ಸದಸ್ಯ ಕರೋಹಟ್ಟಿ ಮಹದೇವಯ್ಯ, ಪುರಸಭೆ ಸದಸ್ಯ ಎಸ್.ಕೆ.ಕಿರಣ್, ಸಿದ್ದರಾಜು, ರಾಚಪ್ಪ, ಭಾಸ್ಕರ್, ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮುನಿರಾಜು, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಮಾಲತಿ, ತಾಲೂಕು ನರೇಗಾ ಸಹಾಯಕ ನಿರ್ದೇಶಕ ಶಶಿಕುಮಾರ್, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ, ಪುರಸಭಾ ಮುಖ್ಯಾಧಿಕಾರಿ ಬಸವರಾಜು, ಆಪ್ತ ಸಹಾಯಕ ಪ್ರಕಾಶ್ ಇತರರಿದ್ದರು.

ನಿಧನ

ದಿ|| 16–07–22 ರಂದು
ಶ್ರೀಮತಿ ಗೌರಮ್ಮರವರು
(ಲೇಟ್ ಕೆ. ಬೋರಯ್ಯನವರ ಧರ್ಮಪತ್ನಿ)
ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.
ಇವರ ಅಂತ್ಯಕ್ರಿಯೆ ಕಾರ್ಯವನ್ನು
ದಿ|| 17–07–22ರಂದು
ಬೆಳಿಗ್ಗೆ 11 ಘಂಟೆಗೆ
ಎನ್.ಆರ್.ಮೊಹಲ್ಲಾದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತರು: ಲೇಟ್ ಕೆ. ಬೋರಯ್ಯ ಕುಟುಂಬದವರು ಹಾಗೂ ತಿಬ್ಬಾದೇವಿ ಕುಟುಂಬದವರು .
ಎನ್.ಆರ್. ಮೊಹಲ್ಲಾ, ಮೈಸೂರು



ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಗಟು ಮಾರಾಟ ಸಹಕಾರ ಸಂಘ ನಿ., ಜನತಾ ಬಜಾರ್, ಮೈಸೂರು

ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ
ಶ್ರೀಯುತ ಸಿ. ಕುಮಾರಸ್ವಾಮಿರವರಿಗೆ
ಅಭಿನಂದನೆಗಳು

ಇವರ ಆಯ್ಕೆಗೆ ಸಹಕರಿಸಿದ ಶ್ರೀಯುತ **ಜಿ.ಡಿ. ಹರೀಶ್‌ಗೌಡರವರು** ಅಧ್ಯಕ್ಷರು, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಮತ್ತು ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್, ಬೆಂಗಳೂರು ಇವರಿಗೆ ಹಾಗೂ ಆಡಳಿತ ಮಂಡಳಿ ನಿರ್ದೇಶಕರುಗಳು ಮತ್ತು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು



ಮಾನ್ಯ ಕಾಂಗ್ರೆಸ್ ಬಂಧುಗಳೇ....
ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರ ಗ್ರಾಮಾಂತರ ಹಾಗೂ ನಗರಪಾಲಿಕೆ 4 ವಾರ್ಡ್‌ಗಳು, ಚಾಮುಂಡೇಶ್ವರಿ ಮತ್ತು ಇಲವಾಲ–ಜಯಪುರ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ. ವಿವಿಧ ಮುಂಚೂಣಿ ಘಟಕಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳ

ಪದಗ್ರಹಣ ಕಾರ್ಯಕ್ರಮ

ದಿನಾಂಕ : 17-07-2022 ಭಾನುವಾರ ಮಧ್ಯಾಹ್ನ 3 ಗಂಟೆ.
ಸ್ಥಳ : ಇಂದಿರಾ ಗಾಂಧಿ ಕಾಂಗ್ರೆಸ್ ಭವನ. ಮೈಸೂರು.

ಕಾರ್ಯಕ್ರಮದ ಉದ್ಘಾಟನೆ. ಸನ್ಮಾನ್ಯ **ಶ್ರೀ ಸಿದ್ಧರಾಮಯ್ಯರವರು.**
ಮಾಜಿ ಮುಖ್ಯಮಂತ್ರಿಗಳು ಹಾಗೂ ವಿರೋಧ ಪಕ್ಷದ ನಾಯಕರು.

ಆರ್. ಧ್ರುವನಾರಾಯಣ್‌ರವರು
ಕೆಪಿಸಿಸಿ ಕಾರ್ಯಾಧ್ಯಕ್ಷರು

ಹೆಚ್. ಸಿ. ಮಹದೇವಪ್ಪರವರು
ಮಾಜಿ ಸಚಿವರು

ಕೆ. ವೆಂಕಟೇಶ್‌ರವರು
ಮಾಜಿ ಸಚಿವರು

ತನ್ವೀರ್ ಸೇಠ್‌ರವರು
ಮಾಜಿ ಸಚಿವರು ಹಾಗೂ ಶಾಸಕರು.

ಡಾ. ತಿಮ್ಮಯ್ಯರವರು
ವಿಧಾನಪರಿಷತ್ ಸದಸ್ಯರು

ಜಿ. ಮಧುಮಾದೇಗೌಡರವರು
ವಿಧಾನಪರಿಷತ್ ಸದಸ್ಯರು

ಕಾಗಲವಾಡಿ ಶಿವಣ್ಣರವರು
ಮಾಜಿ ಲೋಕ ಸಭಾ ಸದಸ್ಯರು

ಅರ್. ಧರ್ಮಸೇನರವರು
ಅಧ್ಯಕ್ಷರು. ರಾಜ್ಯ ಪರಿಶಿಷ್ಟಜಾತಿ ವಿಭಾಗ

ಪುಷ್ಪಅಮರ್‌ನಾಥ್‌ರವರು. ಅಧ್ಯಕ್ಷರು.
ರಾಜ್ಯ ಮಹಿಳಾ ಕಾಂಗ್ರೆಸ್

ಕೆ. ಮರೀಗೌಡರು ಕೆಪಿಸಿಸಿ ಸದಸ್ಯರು,
ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷರು

ನರಸೇಗೌಡರು ಕೆಪಿಸಿಸಿ ಸದಸ್ಯರು.

ಡಾ. ಬಿ. ಜೆ. ವಿಜಯ್ ಕುಮಾರ್‌ರವರು. ಅಧ್ಯಕ್ಷರು,
ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ.

ಆರ್. ಮೂರ್ತಿರವರು. ಅಧ್ಯಕ್ಷರು,
ಮೈಸೂರು ನಗರ ಕಾಂಗ್ರೆಸ್ ಸಮಿತಿ.

ಹೆಚ್. ಪಿ. ಮಂಜುನಾಥ್‌ರವರು
ಹುಣಸೂರು ಶಾಸಕರು

ಯತೀಂದ್ರ ಸಿದ್ಧರಾಮಯ್ಯರವರು
ವರುಣಾ ಶಾಸಕರು

ಅನಿಲ್ ಚಿಕ್ಕಮಾದುರವರು
ಹೆಚ್.ಡಿ.ಕೋಟೆ ಶಾಸಕರು

ಹೆಚ್. ವಾಸುರವರು
ಮಾಜಿ ಶಾಸಕರು

ಎಂ. ಕೆ. ಸೋಮಶೇಖರ್‌ರವರು
ಮಾಜಿ ಶಾಸಕರು

ಕಳಲೆ ಕೇಶವ ಮೂರ್ತಿರವರು
ಮಾಜಿ ಶಾಸಕರು

ಡಿ. ರವಿಶಂಕರ್‌ರವರು
ಕೆ.ಅರ್.ನಗರ ಕಾಂಗ್ರೆಸ್ ಅಭ್ಯರ್ಥಿ.

ಸುನಿಲ್ ಬೋಸ್‌ರವರು
ಕಾಂಗ್ರೆಸ್ ಮುಖಂಡರು

ಕೆ. ಹರೀಶ್‌ಗೌಡರು ಕೆ.ಜಿ.ಕೊಪ್ಪಲು.
ಕಾಂಗ್ರೆಸ್ ಮುಖಂಡರು



ಈ ಕಾರ್ಯಕ್ರಮಕ್ಕೆ, ಕೆಪಿಸಿಸಿ. ಡಿಸಿಸಿ. ಬ್ಲಾಕ್ ಕಾಂಗ್ರೆಸ್. ಎಲ್ಲಾ ಮುಂಚೂಣಿ ಘಟಕಗಳ ಪದಾಧಿಕಾರಿಗಳು. ಹಾಲಿ ಮಾಜಿ ಗ್ರಾಮಪಂಚಾಯಿತಿ ಅಧ್ಯಕ್ಷರು. ಉಪಾಧ್ಯಕ್ಷರು.ಸದಸ್ಯರುಗಳು. ಮಾಜಿ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯತ್ ಅಧ್ಯಕ್ಷರು.ಉಪಾಧ್ಯಕ್ಷರು. ಸದಸ್ಯರುಗಳು, ನಗರಪಾಲಿಕೆ ಹಾಲಿ ಮಾಜಿ ಸದಸ್ಯರು. ಕಾಂಗ್ರೆಸ್ ಮುಖಂಡರು. ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ವನ್ನು ಯಶಸ್ವಿ ಗೊಳಸಬೇಕೆಂದು ವಿನಂತಿಸುತ್ತೇವೆ.

ಜೆ. ಸತೀಶ್‌ಕುಮಾರ್
ಅಧ್ಯಕ್ಷರು, ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ಸಮಿತಿ

ಬಿ. ಗುರುಸ್ವಾಮಿ
ಅಧ್ಯಕ್ಷರು, ಇಲವಾಲ ಬ್ಲಾಕ್ ಕಾಂಗ್ರೆಸ್ ಸಮಿತಿ